

ಸಂಪುಟ 24 ಸಂಚಿಕೆ 41
ಅಕ್ಟೋಬರ್ 13, 2002 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ


ಐಕ್ಯರಂಗ






ಶಿಕ್ಷಣ : ಕೇಸರೀಕರಣದ ತೀರ್ಪು





ಶತಮಾನಗಳ ಸಾಧನೆ ಕಸಿಯುವ ಕಾರ್ಮಿಕ ಆಯೋಗ



ಕಾವೇರಿ : ಇಕ್ಕಟ್ಟಿನಿಂದ ಬಿಕ್ಕಟ್ಟಿನತ್ತ

ಬುಶ್‌ನ ದುರಹಂಕಾರ

ಬಿ.ಎಮ್.ಟಿ.ಸಿ ಸೇವನಾ ಅಥವಾ ಸೇವೆ ಹೆಸರಿನ ಸುಲಿಗೆನಾ?

ಬಿ.ಎಂ.ಟಿ.ಸಿ ಸಂಸ್ಥೆಯು 14 ಕೋಟಿ ಲಾಭ ತರುತ್ತಿದೆ ಎಂದು ಹೇಳಿಕೊಂಡಿತ್ತು. ಬೆಂಗಳೂರಿನ ನಾಗರೀಕರ ಅನುಕೂಲಕ್ಕೆ ತಕ್ಕಂತೆ ಬಸ್ಸುಗಳ ವ್ಯವಸ್ಥೆ ಮಾಡುತ್ತೇವೆಂದು ಬೊಬ್ಬೆ ಹೊಡೆದು ಆಯಿತು. ನಾಗರೀಕರಿಗೆ ಬಿ.ಎಂ.ಟಿ.ಸಿ. ಯ ಅವ್ಯವಸ್ಥೆಯು ಆಗರವಾಗಿಯೇ ಇದೆ. ಆದರೂ ಹೇಗೋ ಸಾಮಾನ್ಯ ಬಡಜನರು ಬಿ.ಎಂ.ಟಿ.ಸಿ ಯೇ ವ್ಯವಸ್ಥೆಗೊಳಿಸಿದ ಮಾಸಿಕ ಬಸ್‌ಪಾಸ್ ಗಳಿಂದ ಅಲ್ಪ ಅನುಕೂಲ ಪಡೆಯುತ್ತಿದ್ದರು. ಇತ್ತೀಚೆಗೆ ದಿಡೀರನೆ ಸಾರ್ವಜನಿಕರ ಗಮನಕ್ಕೆ ತರದೇ ಏಕಾಏಕೀ ಮಾಸಿಕ ಬಸ್ ಪಾಸ್ ದರಗಳನ್ನು ಹೆಚ್ಚಿಸಿ ನಾಗರೀಕರಿಂದ ಸುಲಿಗೆ ಮಾಡಲು ಹೊರಟಿರುವುದು ಹೇಯವಾಗಿದೆ. ಕೇಂದ್ರ ಸರ್ಕಾರ ಪೆಟ್ರೋಲ್-ಡಿಸೇಲ್ ಬೆಲೆ ಏರಿಸಿದೆ. ಇದು ಖಂಡನೀಯ ಇದೇ ಕಾರಣವೊಡ್ಡಿ ಈ ರೀತಿ ನಾಗರೀಕರನ್ನು ಸುಲಿಯುವುದು ವಂಚನೆಯೇ ಆಗಿದೆ. ಈಗಾಗಲೇ ಎಲ್ಲಾ ಅಗತ್ಯ ವಸ್ತುಗಳ ಬೆಲೆ ಹೆಚ್ಚಿದ್ದು ನಾಗರೀಕರು ಸಂಕಷ್ಟದಲ್ಲಿದ್ದಾರೆ. ಕೇಂದ್ರ ಸರ್ಕಾರಗಳ ಹೊಸ ಆರ್ಥಿಕ ನೀತಿಗಳಿಂದ ಸಾವಿರಾರು ಕೈಗಾರಿಕೆಗಳು ಮುಚ್ಚಿದ್ದು ನಿರುದ್ಯೋಗ ತಾಂಡವವಾಡುತ್ತಿದೆ. ದಿನನಿತ್ಯದ ಜೀವನ ಸಾಗಿಸಲು ದುಸ್ಸಾಹಸ ಮಾಡುತ್ತಿರುವ ಇಂಥ ಸಮಯದಲ್ಲಿ ಬಿ.ಎಂ.ಟಿ.ಸಿ ಕೇಂದ್ರ ಸರ್ಕಾರದ ಮೇಲೆ ನೆಪವೊಡ್ಡಿ ಬಸ್‌ಪಾಸ್ ದರ ಏರಿಸಿದೆ.

ಬಸ್‌ಪಾಸ್ ದರ ಹೆಚ್ಚಳ ಯಾಕೆಂದು ಕೇಳಿದರೆ ಲಾಠಿ ಏಟು

ದಿನಾಂಕ 30-9-02ರಂದು ಎಂದಿನಂತೆ ಬಸ್ ಪಾಸ್ ಮಾಡಿಸಲು ಬೆಂಗಳೂರು ಬಸ್ ನಿಲ್ದಾಣದ ಹತ್ತಿರ ನಾಗರೀಕರು ಪಾಸ್ ಮಾಡಿಸಲು ಹೋದಾಗ, ದರ ಹೆಚ್ಚಿದೆ ರೂ.40 ಹೆಚ್ಚಿಗೆ ಕೊಡಬೇಕೆಂದು ಇಲಾಖಾ ಸಿಬ್ಬಂದಿ ತಾಕೀತು ಮಾಡಿದರು. ಇದನ್ನು ಸಹಿಸದ ನಾಗರೀಕರು ಕೊಡಲು ಸಾಧ್ಯವಿಲ್ಲ ಎಂದು ಪ್ರತಿಭಟಿಸಿದರೆ ಅವರಿಗೆ ಪೊಲೀಸರನ್ನು ಛೂ ಬಿಟ್ಟು ಲಾಠಿ ಏಟನ್ನು ಉಣ್ಣಿಸಿದ್ದಾರೆ. ನಾಗರೀಕರ ಸೇವೆಗೆಂದೇ ಈ ಸಂಸ್ಥೆ ಎಂದು ಬೊಬ್ಬೆ ಹೊಡೆಯುವುದು ಅಪ್ಪಟ ಸುಳ್ಳು ಎಂಬುದಕ್ಕೆ ಈ ಘಟನೆಯೇ ಸಾಕ್ಷಿಯಾಗಿದೆ. ಬರೀ ಲಾಭ-ನಷ್ಟದ ಮಾನದಂಡವೇ ಇಲಾಖೆಗೆ ಮುಖ್ಯವಾಗಿದೆ. ನಾಗರೀಕರ ಹಿತಾಸಕ್ತಿಗೆ ದಕ್ಕೆ ಯಾದರೂ, ಬಿ.ಎಂ.ಟಿ.ಸಿಗೆ ಲಾಭ ಮುಖ್ಯವಾಗಿದೆ.

ಎಸ್‌ಎಫ್‌ಐ-ಡಿವೈಎಫ್‌ಐ-ಜೆಎಮ್‌ಎಸ್ ಸಂಘಟನೆಗಳ ಪ್ರತಿಭಟನೆ:

ಮಾಸಿಕ ಬಸ್‌ಪಾಸ್ ದರ ಏರಿಕೆ ವಾಪಸ್ಸಾಗಬೇಕು, ಬಂಧಿಸಿರುವ ಅಮಾಯಕ ನಾಗರೀಕರನ್ನು ಬಿಡುಗಡೆಗೊಳಿಸಬೇಕು, ಅಲ್ಲದೆ ಪೋಲೀಸರ ದೌರ್ಜನ್ಯವನ್ನು ಖಂಡಿಸಿ ನಗರದ ಬೆಂಗಳೂರು ಬಸ್ ನಿಲ್ದಾಣದ ಹತ್ತಿರ ದಿನಾಂಕ 3/10/02ರಂದು ಪ್ರತಿಭಟನೆ ನಡೆಯಿತು. ಸಾರ್ವಜನಿಕರು ಸಹಕರಿಸಿದಲ್ಲದೆ, ಹೋರಾಟದ ಜೊತೆಗೆ ಸೇರಿಕೊಂಡು, ಬಿ.ಎಂ.ಟಿ.ಸಿ ಈ ಸುಲಿಗೆಕೋರ ನೀತಿಯ ವಿರುದ್ಧ ಘೋಷಣೆ ಗಳನ್ನು ಕೂಗಿ ಎಚ್ಚರಿಕೆ ನೀಡಿದರು. ಈ ಕೂಡಲೇ ಬಸ್ ದರ ವಾಪಸ್ಸಾಗಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ನಗರದಾದ್ಯಂತ ಬೇರೆ-ಬೇರೆ ಜಿಲ್ಲಾದ್ಯಂತ ಹೋರಾಟ ನಡೆಸಲಾಗುವುದೆಂದು ಪ್ರತಿಭಟನಾಕಾರರು ತೀರ್ಮಾನಿಸಿದರು. ಪ್ರತಿಭಟನೆಯುಲ್ಲಿ ಎಸ್‌ಎಫ್‌ಐ, ಡಿವೈಎಫ್‌ಐ, ಜೆಎಮ್‌ಎಸ್‌ನ ಜಿಲ್ಲಾ ಮುಖಂಡರು, ಕಾರ್ಯಕರ್ತರು, ಸಾರ್ವಜನಿಕರು ಭಾಗವಹಿಸಿದ್ದರು. ಪ್ರತಿಭಟನೆಯ ಸಂದರ್ಭದಲ್ಲಿ ನೆರೆದಿದ್ದ ನಾಗರೀಕರಿಗೆ ಆ ನಿಮಿಷಗಳು ಹರ್ಷ ತಂದಿತ್ತು.

- ಬಿ.ರಾಜಶೇಖರಮೂರ್ತಿ



ಶ್ರೀನಿವಾಸ್ ಕುಟುಂಬ ನೆರವು: DYFI ಧನ್ಯವಾದಗಳು

ಮಂಗಳೂರಿನಲ್ಲಿ ಜೂನ್-24ರಂದು ಹತ್ಯೆಯಾದ ಸಂಗಾತಿ ಶ್ರೀನಿವಾಸ್ ಬಜಾಲ್ ಕುಟುಂಬಕ್ಕೆ ನೆರವಿಗಾಗಿ ನಾವು ವಿನಂತಿಸಿದಾಗ, ನಮ್ಮ ನಿರೀಕ್ಷೆ ಮೀರಿ ನೆರವು ಬಂದಿದೆ.


ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲ ನೆರೆಯ ಆಂಧ್ರ, ತಮಿಳುನಾಡು, ಕೇರಳಗಳಿಂದ ಸ್ಫೂರ್ತಿದಾಯಕ ಸ್ಪಂದನೆ ದೊರೆತಿದೆ. ನಮ್ಮ ಸಂಘಟನೆಯ ಹಿತೈಷಿಗಳು, ಬೆಂಬಲಿಗರಲ್ಲದೆ, ಸಿ.ಪಿ.ಐ(ಎಂ), ಸಿ.ಐ.ಟಿ.ಯು ರೈತಸಂಘ-ಎಸ್‌ಎಫ್‌ಐ-ಜೆ.ಎಂ.ಎಸ್- ಸಂಘಟನೆಗಳ ವಿವಿಧ ಸಮಿತಿಗಳು ಅಲ್ಲದೆ ಬ್ಯಾಂಕ್-ವಿಮಾ ನೌಕರರ ಸಂಘದ ಸಂಗಾತಿಗಳು,AILU ಸಂಗಾತಿಗಳು ನಮ್ಮ ಮನವಿಗೆ ಸ್ಪಂದಿಸಿ ಹಣಕಾಸಿನ ನೆರವನ್ನೂ ನೀಡಿ ಕೋಮುವಾದಿಗಳ ವಿರುದ್ಧದ ನಮ್ಮ ಹೋರಾಟಕ್ಕೆ ಬೆಂಬಲಿಸಿದ್ದಾರೆ. ಇವರೆಲ್ಲರಿಗೂ DYFI ಧನ್ಯವಾದ ಅರ್ಪಿಸಿದೆ.

ಹಲವಾರು ಜಿಲ್ಲೆಗಳಲ್ಲಿ DYFI ಸಮಿತಿಗಳ ಶ್ರಮ ಸಾರ್ಥಕವಾಗಿದೆ. ಈಗಾಗಲೇ ವರದಿಯಾಗಿರುವಂತೆ ಆಗಸ್ಟ್ 25ರಂದು ಮಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಸಂಗ್ರಹಿಸಲಾಗಿರುವ ಹಣವನ್ನು ಡಿವೈಎಫ್‌ಐ ರಾಜ್ಯ ಸಮಿತಿ ಮತ್ತು ದ.ಕನ್ನಡ ಜಿಲ್ಲಾ ಸಮಿತಿ ಪರವಾಗಿ ಶ್ರೀನಿವಾಸ್ ಬಜಾಲ್ ಕುಟುಂಬಕ್ಕೆ ಅರ್ಪಿಸಲಾಗಿದೆ. ಉಳಿದಿರುವ ಸ್ವಲ್ಪ ಹಣವನ್ನು ಹಲವಾರು 'ನೆನಪಿನ' ಕಾರ್ಯಕ್ರಮಗಳನ್ನು ಸಂಘಟಿಸಲು ನಿರ್ಧರಿಸಲಾಗಿದೆ.

ನಮ್ಮ ಮನವಿಗೆ ಸ್ಪಂದಿಸಿದ ಡಿವೈಎಫ್‌ಐ ಕೇಂದ್ರಸಮಿತಿ, ಕೇರಳ, ಆಂಧ್ರಪ್ರದೇಶ ಸಮಿತಿಗಳಿಗೆ, ವಿಶೇಷವಾಗಿ ಕಣ್ಣೂರು, ಕಾಸರಗೋಡಿನ ಡಿವೈಎಫ್‌ಐ ಜಿಲ್ಲಾಸಮಿತಿಗಳಿಗೆ ಮತ್ತು ನಮ್ಮ ಈ ಹಣ ಸಂಗ್ರಹಕ್ಕೆ ಬೆನ್ನೆಲುಬಾಗಿ ನಿಂತ ಐಕ್ಯರಂಗಕ್ಕೆ ಡಿವೈಎಫ್‌ಐ ರಾಜ್ಯ ಸಮಿತಿ ತನ್ನ ವಂದನಾಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಹಣ ನೀಡಿದವರ ಅಂತಿಮ ಪಟ್ಟಿಯನ್ನು ಈ ವಾರ ಪ್ರಕಟಿಸುವುದರ ಮೂಲಕ ಅಂತ್ಯಗೊಳ್ಳುತ್ತಿದೆ.

1. ಡಿವೈಎಫ್‌ಐ ಬಳ್ಳಾಲ್ ಬಾಗ್ ಘಟಕ	201-00
2. ಡಿವೈಎಫ್‌ಐ ಅದ್ಯಪಾಡಿ	500-00
3. ಊರ್ವಾ ಸ್ಟೋರ್	847
4. ಕಂಭತ್ತ ಬೈಲ್	555
5. ಕೊಂಚಾಡಿ ಘಟಕ	1945
6. ಡಿವೈಎಫ್‌ಐ ಗುರುಪುರ ವಲಯ ಸಮಿತಿ	1,600
7. ಡಿವೈಎಫ್‌ಐ ಶಕ್ತಿನಗರ	1050
8. ಮತೀಯ ಅಲ್ಪಸಂಖ್ಯಾತರ ವೇದಿಕೆ ಉಡುಪಿ	2600
1. ಎ.ಐ.ಐ.ಇ.ಎ. ಮೈಸೂರು ವಿಭಾಗ ಸಮ್ಮೇಳನ- ಹಾಸನ	1320.00
2. ಗದಗ ಜಿಲ್ಲೆ ಬೆಳವಣಿಕೆ ಡಿವೈಎಫ್‌ಐ ಸಂಗ್ರಹ	661.00
3. ಸಿ.ಪಿಐ(ಎಂ) ಬೆಳವಣಿಕೆ ಶಾಖೆ	250.00
4. ಭೀಮಯ್ಯ ಇನ್‌ಸ್ಪೆಕ್ಟರ್	500.00
5. ತುಮಕೂರು ಡಿವೈಎಫ್‌ಐ ಮೂಲಕ	800
6. ಎಸ್.ಎಫ್.ಐ ಬಳ್ಳಾರಿ ಶಿಬಿರ	270.00
7. ಎಐಐಇಎ ಸಂಗಾತಿಗಳು ಶಿರಸಿ	500.00
8. ಡಿವೈಎಫ್‌ಐ ದೊಡ್ಡ ಬಳ್ಳಾಪುರ	276.00
ಉತ್ತರ ಕನ್ನಡ ಜಿಲ್ಲಾ ಸಮಿತಿ ಮೂಲಕ ಕಾರವಾರ ಸಮಿತಿ ಮೂಲಕ	
9.ಮಂಗಳಾ ನಾಯ್ಕ ಸ. ನಿರ್ದೇಶಕರು ಕನ್ನಡ ಸಂಸ್ಕೃತಿ ಇಲಾಖೆ ಕಾರವಾರ	100.00
10. ಸಿಪಿ ವಿಜಯಕುಮಾರಿ ಕಾರವಾರ	101.00
11.ಉದಯ ಜಿ.ನಾಯ್ಕ ಕಾರವಾರ	50.00
12. ಪ್ರಭಾಕರ್ ಬಿ. "	50.00
13. ಶಾಂತನಾಯ್ಕ ಶಿರಿನಾಳ್ ಆಕಾಶವಾಣಿ, ಕಾರವಾರ	100.00
14. ಕರಾವಳಿ ಮುಂಜಾವು "	100.00
15. ಅಶೋಕ ಹಾಸ್ಯಗಾರ "	100.00
16. ಮಾಧವ ಟಿ. ನಾಯ್ಕ"	100.00
17. ಪರಶುರಾಮ್ ಕೆ. ಪಾಶ್ಚಾಪುರ "	100.00
18. ಉದಯ ದೋ ಶೆಟ್ಟಿ "	50.00
ಹೊನ್ನಾವರ ತಾಲೂಕು ಸಮಿತಿ ಮೂಲಕ	
19. ಗಣಪತಿ ಶೆಟ್ಟಿ ಕಡ್ಲೆ	100.00
20 ಮಾಧವಿ ಭಂಡಾರಿ	100.00
21 ಡಾ। ಆರ್.ವಿ. ಭಂಡಾರಿ	100.00
22 ಮಹೇಶ ಭಂಡಾರಿ	100.00
23 ಸುದೀಶ್ ಎಸ್. ನಾಯ್ಕ	100.00
24. ಎಸ್.ಡಿ. ಹೆಗಡೆ ಉಪನ್ಯಾಸಕರು	50.00
25. ಶ್ರೀಪಾದ ಶೆಟ್ಟಿ	50.00
26. ವಿ.ಎಂ. ಭಂಡಾರಿ	50.00
27.ಎಸ್.ಎಸ್. ನಾಯ್ಕ ಪ್ರಿನ್ಸಿಪಾಲ್	50.00
28. ಆರ್.ಡಿ. ನಾಯ್ಕ ಪ್ರಿನ್ಸಿಪಾಲ್	50.00
29. ವಿ.ಎಸ್. ಹೆಗಡೆ	50.00
30. ಫ್ರಾನ್ಸಿ ಕಾರ್ನರ್	100.00
31 ಮಂಜುಗೌಡ ಮಾವಿನ ಕುರ್ವೆ	50.00
32. ಉಮೇಶ್ ನಾಯ್ಕ ಶಿಕ್ಷಕರು ಕೆರಕೋಣ	50.00
33. ಕುಮಟಾ ಡಿವೈ.ಎಫ್.ಐ ತಾಲ್ಲೂಕು ಸಮಿತಿ	260.00
34. ಪೇಪರ್ ಮಿಲ್ ವರ್ಕರ್ಸ್ ಯೂನಿಯನ್ ದಾಂಡೇಲಿ(ಸಿಐಟಿಯು)	250.00
35. ಜೀವ ವಿಮಾ ನಿಗಮ ಸಂಗಾತಿಗಳು,ಶಿರಸಿ	500.00
ಉಡುಪಿ ತಾಲೂಕು	
34. ಸಿಪಿಐ(ಎಂ) ಉಡುಪಿ ತಾಲೂಕು	435.00
35. ಮಲ್ಪೆ ಬೀಡಿ ಕೆಲಸಗಾರರ ಸಂಘ ಕೊಡವೂರು	200.00
36. ಉಡುಪಿ ತಾಲೂಕು ಜನರಲ್ ವರ್ಕರ್ಸ್ ಯೂನಿಯನ್	200.00
37. ಉಡುಪಿ ತಾಲೂಕು ಪ್ರಸ್ ವರ್ಕರ್ಸ್	100.00
38. ಉಡುಪಿ ತಾಲೂಕು ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘ	100.00
39 ನಾಗರಾಜ್ ರಾವ್ ದಾವಣಗೆರೆ	25.00
40 ಡಿವೈಎಫ್‌ಐ ಕೇರಳ ರಾಜ್ಯ ಸಮಿತಿ ಮುಖಾಂತರ	61,000.00
ಒಟ್ಟು ಸಂಗ್ರಹ	1,36,142-75



ಅಕ್ಟೋಬರ್ 2 ರ ಗಾಂಧಿಜಯಂತಿಯಂದು ದೇಶಾದ್ಯಂತ ಕೋಮುಸೌಹಾರ್ದತಾ ದಿನವನ್ನಾಗಿ ಆಚರಿಸಲು ನಾಲ್ಕು ಎಡ ಪಕ್ಷಗಳು ನೀಡಿದ್ದ ಕರೆಯ ಅನ್ವಯ ಅಂದು ಬೆಂಗಳೂರಿನ ಗಾಂಧಿ ಪ್ರತಿಮೆ ಬಳಿ ಸಿಪಿಐ(ಎಂ), ಸಿಪಿಐ ಮತ್ತು ಫಾರ್ವರ್ಡ್ ಬ್ಲಾಕ್‌ನ ಕಾರ್ಯಕರ್ತರು ಧರಣಿ ಕುಳಿತಿದ್ದರು. ಸಿಪಿಐ(ಎಂ)ನ ಕಾರ್ಯದರ್ಶಿ ಜಿ.ಎನ್.ನಾಗರಾಜ್, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಸಿ.ಬಯ್ಯಾರೆಡ್ಡಿ, ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಪ್ರಕಾಶ್, ಸಿಪಿಐನ ಆನಂದ ತೀರ್ಥ, ಗೋಪಾಲ್, ಫಾರ್ವರ್ಡ್‌ಬ್ಲಾಕ್‌ನ ಜಿ.ಆರ್.ಶಿವಶಂಕರ್ ಮುಂತಾದವರು ಮಾತಾಡಿದರು.

ಕಾವೇರಿ ಜಲ ವಿವಾದ ಇಕ್ಕಟ್ಟಿನಿಂದ



ತೀವ್ರ ಬರಗಾಲದ ಪರಿಸ್ಥಿತಿಯಿಂದಾಗಿ ಈ ವರ್ಷ ಕಾವೇರಿ ನದಿ ನೀರು ಹಂಚಿಕೆಯಲ್ಲಿ ಅನೇಕ ಇಕ್ಕಟ್ಟುಗಳು ಸೃಷ್ಟಿಯಾಗುತ್ತಿವೆ. ಇಂತಹ ಪ್ರತಿ ಇಕ್ಕಟ್ಟನ್ನು ಕೂಡ ದೊಡ್ಡ ಬಿಕ್ಕಟ್ಟಾಗಿ ಕರ್ನಾಟಕ ಸರ್ಕಾರ ಪರಿವರ್ತಿಸುತ್ತಿದೆ. ಇದು ಕರ್ನಾಟಕ ಜನತೆಯ ಒಟ್ಟು ಹಿತಕ್ಕೆ ಹಾಗೂ ಕಾವೇರಿ ನದಿ ಬಯಲಿನ ಪ್ರದೇಶದ ರೈತರ ಹಿತಕ್ಕೆ ಮಾರಕವಾಗಲಿದೆ." ಇವು ಸಿಪಿಐ(ಎಂ) ರಾಜ್ಯ ಸಮಿತಿಯನ್ನು ಪ್ರತಿನಿಧಿಸುತ್ತಾ ನಾನು ಸೆಪ್ಟೆಂಬರ್ 21ರಂದು ದೆಹಲಿಯಲ್ಲಿ ಕರೆದಿದ್ದ ಸರ್ವಪಕ್ಷ ಸಭೆಯಲ್ಲಿ ಕರ್ನಾಟಕದ ಕಾಂಗ್ರೆಸ್ ಸರ್ಕಾರದ ವರ್ತನೆಯನ್ನು ಕಟುವಾಗಿ ಟೀಕಿಸಿದ ಮಾತುಗಳು.

ಸೆಪ್ಟೆಂಬರ್ 18ರಂದು ಕರ್ನಾಟಕ ಸರ್ಕಾರ ತಮಿಳುನಾಡಿಗೆ, ಕಾವೇರಿ ಪ್ರಾಧಿಕಾರದ ಆಜ್ಞೆಯಂತೆ ದಿನಂಪ್ರತಿ ಬಿಡುತ್ತಿದ್ದ 9000 ಕ್ಯೂಸೆಕ್ಸ್ ನೀರನ್ನು ನಿಲ್ಲಿಸಲು ಕರ್ನಾಟಕ ಸರ್ಕಾರ ತೆಗೆದುಕೊಂಡ ತೀರ್ಮಾನದ ಹಿನ್ನೆಲೆಯಲ್ಲಿ ಸರ್ವಪಕ್ಷಗಳ ಈ ಸಭೆ ಸೇರಿತ್ತು.

ಆಗಸ್ಟ್ 25ರಂದು ಕರೆದ ಸರ್ವಪಕ್ಷಗಳ ಸಭೆಯಲ್ಲಿ ಸುಪ್ರಿಂ



ಕೋರ್ಟ್ ಕಾವೇರಿ ಪ್ರಾಧಿಕಾರ ಸಭೆ ಸೇರಿ ನೀರಿನ ಹಂಚಿಕೆಯ ಬಗ್ಗೆ ನಿರ್ಣಯಿಸಬೇಕೆಂದು ಸೂಚಿಸಿದೆ. ಮತ್ತೆ ಸೆಪ್ಟೆಂಬರ 2ರಂದು ಸುಪ್ರಿಂ ಕೋರ್ಟ್ ಈ ಪ್ರಶ್ನೆಯನ್ನು ಕೈಗೆತ್ತಿಕೊಳ್ಳುವಾಗ ಪ್ರಾಧಿಕಾರ ನಿಷ್ಕ್ರಿಯವಾಗಿದೆ ಎಂಬ ಅಭಿಪ್ರಾಯಕ್ಕೆ ಬರುವಂತೆ ಆಗಬಾರದು ಆದ್ದರಿಂದ ಕರ್ನಾಟಕ ಬಿಗು ನಿಲುವು ತಳೆಯದೆ ಸ್ವಲ್ಪ ನೀರು ಬಿಡುವ ಬಗ್ಗೆ ಸುಮುಖವಾಗಿ ಯೋಚಿಸ ಬೇಕು. ಇಲ್ಲದಿದ್ದರೆ ಸುಪ್ರಿಂ ಕೋರ್ಟು ತೀರ್ಮಾನವೆಂಬ ಗದಾ ಪ್ರಹಾರ ಎರಗುತ್ತದೆ. ಕಾವೇರಿ ಪ್ರಾಧಿಕಾರವಾದರೆ ಚರ್ಚೆಗೆ ಅವಕಾಶವಿದೆ. ಪ್ರಾಧಿಕಾರ ಸರ್ವಸಮ್ಮತಿಯ ಮೇಲೆಯೇ ತೀರ್ಮಾನ ಕೈಗೊಳ್ಳಬೇಕೆಂಬ ನಿಯಮವಿದೆ. ಇಂತಹ ಪ್ರಾಧಿಕಾರವನ್ನು ನಿಷ್ಕ್ರಿಯಗೊಂಡಿದೆ ಎನ್ನುವ ಅಭಿಪ್ರಾಯ ಬರುವಂತೆ ಮಾಡಿದರೆ ಚರ್ಚೆಯ ಆಧಾರದ ಮೇಲೆ ಕೈಗೊಳ್ಳುವ ನಿರ್ಣಯದ ವ್ಯವಸ್ಥೆಗೆ ಬದಲು ನ್ಯಾಯಾಂಗದ ಆಜ್ಞೆಗಳನ್ನು ಪಾಲಿಸಬೇಕಾದ ಸಂದರ್ಭ ಬರುತ್ತದೆ ಎಂದು ಸಿಪಿಐ(ಎಂ) ನಿಲುವನ್ನು ಪ್ರತಿಪಾದಿಸಿದ್ದೆವು. ಆದರೆ ಕರ್ನಾಟಕ ಸರ್ಕಾರ ಈ ಸಲಹೆಯನ್ನು ಪರಿಗಣಿಸದೆ ಇದ್ದುದರಿಂದ ನಾವು ಹೇಳಿದ್ದು ನಿಜವಾಯಿತು ಎನ್ನುವಂತಾಯಿತು.

ಜಿ.ಎನ್.ನಾಗರಾಜ್

ಕಾವೇರಿ ಪ್ರಾಧಿಕಾರದ 9000 ಕ್ಯೂಸೆಸ್ಸ್ ನೀರು ಬಿಡುವಂತೆ ಮಾಡಿದ ನಿರ್ಣಯದ ನಂತರ ಸೆಪ್ಟೆಂಬರ್ 11ರಂದು ಸೇರಿದ್ದ ಸರ್ವಪಕ್ಷಗಳ ಸಭೆಯಲ್ಲಿ ನಮ್ಮ ಪಕ್ಷದ ಪರವಾಗಿ ಈಗ ನೀರಿನ ಒಳಹರಿವು ಅನುಕೂಲಕರ ಪರಿಸ್ಥಿತಿಯಲ್ಲಿರುವುದರಿಂದ (ಅಂದು ಸುಮಾರು 14000 ಕ್ಯೂಸೆಸ್ಸ್ ನೀರು ಕರ್ನಾಟಕದ ನಾಲ್ಕು ಜಲಾಶಯಗಳ ಒಟ್ಟು ಒಳಹರಿವು) 9000 ಕ್ಯೂಸೆಕ್ಸ್ ನೀರು ಬಿಡಲು ಆರಂಭಿಸಿ ಆದರೆ ಒಳಹರಿವು ಕಡಿಮೆಯಾದ ಕೂಡಲೆ ಮತ್ತೆ ಕಾವೇರಿ ಪ್ರಾಧಿಕಾರದ ಸಭೆ ಸೇರಿಸಲು ಹಾಗೂ ಈ ನಿರ್ಣಯದ ಪುನರ್‌ಪರಿಶೀಲನೆ ನಡೆಸಲು ಒತ್ತಾಯಿಸಿ ಎಂದು ಪ್ರತಿಪಾದಿಸಿದೆವು. ಸರಿಸುಮಾರು ಎಲ್ಲಾ ಪಕ್ಷಗಳೂ ಈ ನಿಲುವನ್ನು ಬೆಂಬಲಿಸಿದವು.

ದೆಹಲಿಯಲ್ಲಿ ಸೆಪ್ಟೆಂಬರ್ 21ರಂದು ಸೇರಿದ ಸರ್ವಪಕ್ಷಗಳ ಸಭೆಯಲ್ಲಿ ಇದನ್ನೆಲ್ಲಾ ಮುಖ್ಯಮಂತ್ರಿಗಳಿಗೆ ನೆನಪಿಸಿ ಸೆಪ್ಟೆಂಬರ್ 7ರಂದು ಕಾವೇರಿ ಪ್ರಾಧಿಕಾರದ ಸಭೆ ನಡೆದ ನಂತರ ಸೆಪ್ಟೆಂಬರ್ 18ರಂದು ನೀರು ಬಿಡುಗಡೆ ನಿಲ್ಲಿಸುವವರೆಗೂ ನೀವು ಏಕೆ ನೀರಿನ ಒಳಹರಿವು ನಿರೀಕ್ಷಿತ ಪ್ರಮಾಣದಲ್ಲಿ ಇಲ್ಲದಿರುವುದನ್ನು ಕಾವೇರಿ ಪ್ರಾಧಿಕಾರದ ಗಮನಕ್ಕೆ ತರಲಿಲ್ಲ, ಏಕೆ ಪ್ರಾಧಿಕಾರದ ನಿರ್ಣಯದ ಮರುಪರಿಶೀಲನೆಗೆ ಒತ್ತಾಯಿಸಲಿಲ್ಲ. ಈ ಬಗ್ಗೆ ನಮ್ಮ ಬಲವಾದ ಆಕ್ಷೇಪಣೆ ಇದೆ ಎಂದು ಟೀಕಿಸಲಾಯಿತು. ಅದಕ್ಕೆ ಬದಲಾಗಿ ಏಕಪಕ್ಷೀಯವಾಗಿ ನೀರು ನಿಲ್ಲಿಸಲು ನೀವು ನಿರ್ಣಯಿಸಿದ್ದರಿಂದ ಕೇಂದ್ರ ಸರ್ಕಾರ ಮತ್ತು ಪ್ರಾಧಿಕಾರ ಉತ್ತರ ನೀಡಬೇಕಾದ ಪರಿಸ್ಥಿತಿಗೆ ಬದಲಾಗಿ, ಪ್ರಧಾನಿಯವರು ಇಂದು ಪ್ರಾಧಿಕಾರದ ಆಜ್ಞೆಯನ್ನು ಜಾರಿ ಮಾಡಿ ಎಂಬ ಆಜ್ಞೆ ಮಾಡುವ ಸ್ಥಿತಿ ತಂದುಕೊಂಡಿದ್ದೀರಿ. ಸುಪ್ರಿಂ ಕೋರ್ಟು ಮತ್ತೆ ಈ ವಿಚಾರವನ್ನೇ ಸೆಪ್ಟೆಂಬರ್ 23ರಂದು ವಿಚಾರಣೆಗೆ ಎತ್ತಿಕೊಳ್ಳುವಾಗ ಮತ್ತಷ್ಟು ಗಂಭೀರ ಪರಿಸ್ಥಿತಿ ಯುಂಟಾಗುತ್ತದೆ. ಇಕ್ಕಟ್ಟಿನಿಂದ ಬಿಕ್ಕಟ್ಟಿಗೆ ಹಾರಿದಂತಾಗುತ್ತದೆ ಎಂದು ಎಚ್ಚರಿಸಲಾಗಿತ್ತು. ಆದ್ದರಿಂದ ಈಗಲೂ ಕೂಡ ತಕ್ಷಣವೇ ಕಾವೇರಿ ಪ್ರಾಧಿಕಾರದ ಸಭೆಗೆ ಒತ್ತಾಯಿಸಿ ಎಂದು ಹೇಳಿದ್ದೆವು.

ಇಂದು ಆ ಎಚ್ಚರಿಕೆ ನಿಜವಾಗಿದೆ. ಕಾವೇರಿ ಪ್ರಾಧಿಕಾರದ ಆಜ್ಞೆಯನ್ನು ಜಾರಿ ಮಾಡುವಂತೆ ಸುಪ್ರಿಂಕೋರ್ಟು ಕೂಡ ಆದೇಶ ನೀಡಿದೆ. ಆದ್ದರಿಂದ ಇಂದು ಮತ್ತೆ ಬೇರೆ ಯಾವ ದಾರಿಯೂ ಇಲ್ಲದೆ ಕಾವೇರಿ ಪ್ರಾಧಿಕಾರದ ಸಭೆಯನ್ನು ತುರ್ತಾಗಿ ಕರೆಯಿಸಿ 9000 ಕ್ಯೂಸೆಕ್ಸ್ ತೀರ್ಮಾನವನ್ನು ಪುನರ್ಪರಿಶೀಲನೆ ಮಾಡಿ ಎಂದು ಕೇಳುವುದೊಂದೆ ದಾರಿ ಎನ್ನುವಂತಾಗಿದೆ. ಕರ್ನಾಟಕ ಸರ್ಕಾರ ಸೆಪ್ಟೆಂಬರ್ 14ರಿಂದ 18ರ ನಡುವೆಯೇ ಮಾಡ ಬೇಕಾಗಿದ್ದ ಕೆಲಸವನ್ನು ಅಕ್ಟೋಬರ್ 4ರಂದು ಮಾಡುತ್ತಿದ್ದ ಕರ್ನಾಟಕ ಸರ್ಕಾರದ ಈ ವರ್ತನೆಯು ಜೊತೆ ಜೊತೆಗೇ ತಮಿಳುನಾಡು ಸರ್ಕಾರದ ವರ್ತನೆಯನ್ನು ಪರಿಶೀಲಿಸಬೇಕು. ಈ ವಿವಾದದ ಆರಂಭದಿಂದಲೂ ಜಯಲಲಿತ ಸರ್ಕಾರ ಯಾವುದೇ ಪ್ರಜಾಸತ್ತಾತ್ಮಕ ನಡವಳಿಕೆಗೆ ಯೋಗ್ಯವಲ್ಲದ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದಾರೆ. ಮೊದಲಿನಿಂದಲೂ ಕಾವೇರಿ ಪ್ರಾಧಿಕಾರದ ಸಭೆಯನ್ನು ಬಹಿಷ್ಕರಿಸುತ್ತಾ ಬಂದ ಇವರು ಒಮ್ಮೆ ಮಾತ್ರ ಸುಪ್ರಿಂ ಕೋರ್ಟ್‌ನ ನಿರ್ದೇಶನಕ್ಕೆ ಒಳಗಾಗಿ ಆ.27ರ ಸಭೆಯಲ್ಲಿ ಭಾಗವಹಿಗಿಸಿ ಸಭೆ ನಡೆಯುತ್ತಿದ್ದಾಗಲೇ ಸಭಾತ್ಯಾಗ ಮಾಡಿದರು. ಕರ್ನಾಟಕದಿಂದ ನೀರು ಬಿಡುಗಡೆ ನಿಂತ ಮೇಲೆ ಕಬಿನಿ ನದಿಗೆ ಬಿದ್ದು ರೈತ ಗುರುಸ್ವಾಮಿಯವರು ಆತ್ಮಾಹುತಿ ಮಾಡಿಕೊಂಡ ಬಗ್ಗೆಯಂತೂ ಅತ್ಯಂತ ಹೀನಾಯವಾಗಿ ಅಮಾನವೀಯವಾಗಿ ಯಾರೋ ಅವರನ್ನು ತಳ್ಳಿರಬೇಕು ಎಂದು ಹೇಳಿಕೆ ನೀಡಿದರು. ನಂತರ ಕರ್ನಾಟಕ ಸರ್ಕಾರವನ್ನು ವಜಾ ಮಾಡಬೇಕು, ಕರ್ನಾಟಕದ ಆಣೆಕಟ್ಟುಗಳನ್ನು ಕೇಂದ್ರ ಸರ್ಕಾರ ವಶಪಡಿಸಿಕೊಳ್ಳಬೇಕು ಎಂದು ಪ್ರತಿಪಾದಿಸಿದರು.

ಕಾವೇರಿ ಉಸ್ತುವಾರಿ ಸಮಿತಿ ಎರಡೂ ರಾಜ್ಯಗಳಲ್ಲಿ ವಾಸ್ತವ ಪರಿಸ್ಥಿತಿಯನ್ನು ಅಧ್ಯಯನ ಮಾಡಲು ಅಸಹಕಾರ ಮಾಡಿದರು. ಸುಪ್ರಿಂ ಕೋರ್ಟ್ ನಿರ್ದೇಶಿಸಿದ ನಂತರವೇ ತಂಡ ತಮಿಳುನಾಡಿಗೆ ಭೇಟಿ ನೀಡುವಂತಹ ಪರಿಸ್ಥಿತಿ ಬಂದಿತು. ಜಯಲಲಿತಾರ ಈ ನಿಲುವನ್ನು ಸಿಪಿಐ(ಎಂ) ತಮಿಳುನಾಡು ಘಟಕ ಖಂಡಿಸಿದೆ. ಜಯಲಲಿತಾ ದೆಹಲಿಗೆ ಬಂದು ಸರ್ವಪಕ್ಷಗಳ ನಿಯೋಗದಲ್ಲಿ ಸಿಪಿಐ(ಎಂ) ತಮಿಳುನಾಡು ಘಟಕ ಭಾಗವಹಿಸಲಿಲ್ಲ ಮಾತ್ರವಲ್ಲ ಪ್ರಧಾನಿಗೆ ಅರ್ಪಿಸಿದ ಮನವಿಗೆ ಸಹಿ ಕೂಡ ಮಾಡಲಿಲ್ಲ.

ಪ್ರದೇಶಾಂಧ, ನಿಲುವು

ಇಂತಹ ಪ್ರದೇಶಾಂಧ ನಿಲುವುಗಳ ಫಲವಾಗಿ ಕರ್ನಾಟಕದಲ್ಲಿ ಪ್ರದೇಶಾಂಧತೆಯ ಭಾವನೆಗಳು ಬೆಳವಣಿಗೆಯಾಗುತ್ತಿವೆ. ಇಲ್ಲಿಯವರೆಗೆ ನಡೆಯುತ್ತಿದ್ದ ರೈತರ ಹಾಗೂ ಮಂಡ್ಯ, ಮೈಸೂರು, ಹಾಸನಗಳ ಜನತೆಯ ಹೋರಾಟಕ್ಕೆ ಎರಡೂ ಕಡೆಯ ಚಲನಚಿತ್ರ ನಟರ, ನಿರ್ದೇಶಕರ, ಅಭಿಮಾನಿಗಳ ಪ್ರವೇಶವಾಗಿದೆ. ಪ್ರದೇಶಾಂಧತೆ ಭಾಷಾಂಧತೆಯ ಸ್ಪರ್ಧೆ ಆರಂಭವಾಗಲು ಎರಡೂ ಸರ್ಕಾರಗಳ ವರ್ತನೆ ನೀರೆರೆದಿದೆ.

ದುಡಿಯುವ ವರ್ಗದ ಹಿತ ಕಮ್ಯುನಿಸ್ಟರ ಕಾಳಜಿ

ಕರ್ನಾಟಕದಲ್ಲಿ ಪ್ರಾದೇಶಿಕ ಪಕ್ಷ ಬೇಡವೇ? ಅಥವಾ ಬೇಕೆ? ಎಂಬ ಜಿಜ್ಞಾಸೆ ಚರ್ಚೆ ಮತ್ತೊಮ್ಮೆ ಕೇಳಲಾಗುತ್ತಿದೆ. ದಿನದಿನಕ್ಕೂ ಕ್ಷಣಕ್ಷಣಕ್ಕೂ ಹೊಸ ಹೊಸ ವಿದ್ಯಮಾನಗಳು, ಈ ಬಗ್ಗೆ ಚರ್ಚೆಗಳು ನಡೆಯುತ್ತಿರುವ ಸನ್ನಿವೇಶದಲ್ಲಿ ಅಂತಹ 'ಚರ್ಚೆ' ನಡೆಸಲು ತಕರಾರು ಇರಬೇಕಿಲ್ಲ. ಆದರೆ ಅಂತಹ ಚರ್ಚೆ ತೇಲಿ ಬಿಡುವಾಗ ಕಮ್ಯುನಿಸ್ಟ್ ಪಕ್ಷಗಳಿಗೆ ನಾಡಿನ ಜನ, ಜಲ- ನೆಲದ ಹಿತಾಸಕ್ತಿಗಳಿಲ್ಲ ಎಂದು ಸರಳ ವ್ಯಾಖ್ಯಾನ ಹೊಸದು ತಮ್ಮ ವಾಗ್ಝರಿಗೆ ಊರುಗೋಲಾಗಿ ಬಳಸುತ್ತಿರುವುದಕ್ಕೆ ಆಕ್ಷೇಪಣೆ ಇದೆ.

ಅಂತರ್‍ರಾಷ್ಟ್ರೀಯ, ರಾಷ್ಟ್ರೀಯ, ರಾಜ್ಯಗಳ ವ್ಯಾಪ್ತಿಯ ಸಮಸ್ಯೆಗಳು ಹಲವಾರು ಭಿನ್ನತೆಗಳನ್ನು ಹೊಂದಿರುವಾಗಲೇ ಅನೇಕ ಸಾಮಾನ್ಯ ಅಂಶಗಳಲ್ಲಿ ಬಂಧಿಸಲ್ಪಟ್ಟಿದೆ.

ಕಮ್ಯುನಿಸ್ಟ್ ಪಕ್ಷಗಳಿಗೆ ದುಡಿಯುವ ವರ್ಗದ ಹಿತಾಸಕ್ತಿ, ಐಕ್ಯತೆಯೇ ಪರಮೋಚ್ಚ. ಇದು ರಾಜ್ಯದ, ರಾಷ್ಟ್ರದ ಅಥವಾ ಅಂತರ್‍ರಾಷ್ಟ್ರೀಯ ಮಟ್ಟದಲ್ಲಿಯೂ ಒಂದೇ. ಇವೆಲ್ಲಾ ಒಂದಕ್ಕೊಂದು ಹಾಸುಹೊಕ್ಕಾದ ಸಂಗತಿಗಳು. ಅಂದ ಮಾತ್ರಕ್ಕೆ ರಾಜ್ಯದ ಜನತೆಯ ಹಿತಕಾಯುವ ಕಾಳಜಿಯಿಲ್ಲಎಂಬುದು ಕೇವಲ ಮಿಥ್ಯಾರೋಪ. ಇಡೀ ದೇಶದಲ್ಲೇ ಭಾಷಾವಾರು ಪ್ರಾಂತಗಳು ರಚನೆಗಾಗಿ ತೀವ್ರತರವಾದ ಜನಾಂದೋಲನಗಳನ್ನು ಕಮ್ಯುನಿಸ್ಟ್ ಪಕ್ಷ ಹುಟ್ಟುಹಾಕುವ ಅವಶ್ಯಕತೆ ಏನಿತ್ತು? ನಂತರವೂ ರಾಜ್ಯದ ಅಭಿವೃದ್ಧಿಯ ಕನಸು ಸಾಕಾರಗೊಳ್ಳಲು ನಿರ್ದಿಷ್ಟವಾದ ಪ್ರಶ್ನೆಗಳನ್ನು ಎತ್ತಿ ಹೋರಾಡುವ ಅಗತ್ಯವಾದರೂ ಏನಿತ್ತು? ಈಗಲೂ ಕೇಂದ್ರದ ಸರ್ವಾಧಿಕಾರದ ವಿರುದ್ಧ ರಾಜ್ಯಗಳ ಹಕ್ಕುಗಳಿಗಾಗಿ, ಒಕ್ಕೂಟದ ನೈಜ ಕಾರ್ಯಾಚರಣೆಗಾಗಿ ನಿರಂತರ ಸಂಘರ್ಷಕ್ಕೆ ಇಳಿದಿರುವುದೇ ಕಮ್ಯುನಿಸ್ಟರು. ಕಮ್ಯುನಿಸ್ಟ್ ಚಳುವಳಿ ಪ್ರಬಲವಿರುವ ರಾಜ್ಯಗಳಲ್ಲಿನ ಅನುಭವ ಏನನ್ನು ತೋರಿಸುತ್ತದೆ. ಪ.ಬಂಗಾಳದಲ್ಲಿ ನಿರಂತರ 25 ವರ್ಷಗಳು, ತ್ರಿಪುರಾದಲ್ಲಿ ಒಟ್ಟು 20 ವರ್ಷ, ಕೇರಳದಲ್ಲಿ ಅವಧಿಯ

ಈ ವಾರ ಕರ್ನಾಟಕ
ಒಂದು ನೋಟ — ಎಸ್.ವೈ.ಗುರುಶಾಂತ್

ನಂತರದ ಅವಧಿಯಲ್ಲಿ ದೇಶದ ರಾಜಕಾರಣದಲ್ಲಿ ಎಂತಹ ಏರುಪೇರುಗಳಾದರೂ ದೃಢವಾಗಿ ಜನತೆ ಅಂತರ್‍ರಾಷ್ಟ್ರೀಯ ಪ್ರಜ್ಞೆ ಹೊಂದಿರುವ, ಕಮ್ಯುನಿಸ್ಟ್ ಪಕ್ಷಗಳ ನೇತೃತ್ವದ ಸರ್ಕಾರವನ್ನೇ ಆಯ್ಕೆ ಮಾಡುತ್ತಿರುವುದೇಕೆ? ರಾಷ್ಟ್ರೀಯತೆ, ಅಂತರ್‍ರಾಷ್ಟ್ರೀಯತೆಗಳ ನಡುವೆ ಘರ್ಷಣೆಯಾಗಿ ಕಾಣುವುದು ಭೂಮಾಲಿಕ, ಬಂಡವಾಳಗಾರ ಬಲಪಂಥೀಯರಿಗೆ ಎದುರಾಗುವ ಸಮಸ್ಯೆಗಳು ಮಾತ್ರ. ಹಾಗೆಯೇ ಕಮ್ಯುನಿಸ್ಟ್ ಪಕ್ಷಗಳಿಗೆ ಅಂತರ್‍ರಾಷ್ಟ್ರೀಯ ಪ್ರಜ್ಞೆ ಇದೆ ಎಂಬುದು ಇತರ ಪಕ್ಷಗಳಿಗಿಂತ ಇರುವ ಭಿನ್ನ ಅಂಶವಾಗಿದೆ ನಿಜ.. ಆ ಅರ್ಥದಲ್ಲಿ ಪ್ರೊ. ಚಂಪಾರವರದು ಪ್ರಶಂಸೆ ಎಂದೇ ಹೇಳಬಹುದು.

ನದಿ ನೀರಿನ ಪ್ರಶ್ನೆ ಹೇಗೆ ರಾಜ್ಯದ ಸಮಸ್ಯೆಯೋ ಹಾಗೆ ಅದು ರಾಷ್ಟ್ರೀಯ ಸಮಸ್ಯೆಯೂ ಕೂಡ. ಪ್ರಗತಿಪರರು ಹೋರಾಡಬೇಕಾದದ್ದು ಉಭಯ ರಾಜ್ಯಗಳಲ್ಲಿ ಸಂಕಟಕ್ಕೀಡಾದ ಶ್ರಮಿಕರ ಮೇಲೋ ಅಥವಾ ಸುಲಿಗೆಕೋರರ ಮೇಲೋ. ಇಲ್ಲಿ ನಮ್ಮದು ಎಂಬುದರ ವ್ಯಾಪ್ತಿ ಏನು?

ನದಿ, ಗಡಿಯಂತಹ ಪ್ರಶ್ನೆಗಳು ಬಂದಾಗ ರಾಷ್ಟ್ರೀಯ ಎಂದು ಕರೆದುಕೊಳ್ಳುವ ಬಿಜೆಪಿ, ಕಾಂಗ್ರೆಸ್ ನಂತಹ ಬಲಪಂಥೀಯ ಪಕ್ಷಗಳದ್ದು ಎಡಬಿಡಂಗಿತನ. ಅವುಗಳಿಗೆ ಕರ್ನಾಟಕದಲ್ಲಿ ಒಂದು ನಿಲುವಾದರೆ, ಮಹಾರಾಷ್ಟ್ರ, ತಮಿಳುನಾಡು ಮುಂತಾದೆಡೆ ಇನ್ನೊಂದು ರೀತಿಯ ನಿಲುವನ್ನು ಪ್ರತಿಪಾದಿಸುತ್ತವೆ. ಇದು ಅತ್ಯಂತ ಸಂದರ್ಭಸಾಧಕತನದ್ದು. ನೀರು, ಗಡಿಯಂತಹ ರಾಜಕೀಯ ಪ್ರಶ್ನೆಗಳನ್ನು ಮನಬಂದಂತೆ ಬಳಸಲು ಕೇಂದ್ರದಲ್ಲಿರುವ ಹಾಗೂ ರಾಜ್ಯದಲ್ಲಿರುವ ಪಕ್ಷಗಳು ನಡೆಸುವ ಕಸರತ್ತುಗಳು ಹೇಸಿಗೆ ತರುವಂತಹವು. ಆದರೆ ಕಮ್ಯುನಿಸ್ಟ್ ಪಕ್ಷಗಳ ನಿಲುವು ಎಲ್ಲಾ ಕಡೆ ಒಂದೇ. ಚುನಾವಣಾ ಸಂದರ್ಭ ಸಾಧಕತನಕ್ಕೆ ಒಟ್ಟು ಜನತೆಯ ಹಿತಾಸಕ್ತಿ ಬಲಿಕೊಡಲು ಕಮ್ಯುನಿಸ್ಟರು ಸಿದ್ಧರಿಲ್ಲ. ಅಂತಹ ಪ್ರಶ್ನೆಗಳನ್ನು ಅತಿರೇಕಕ್ಕೆ ಬೆಳೆಸುವುದು ಸಲ್ಲ. ಇನ್ನೂ ಪರಸ್ಪರ ಸೌಹಾರ್ದಯುತವಾಗಿಯೇ ಬಗೆಹರಿಸಿಕೊಳ್ಳಬೇಕಾದ ಪ್ರಶ್ನೆಗಳು. ಇದು ಕರ್ನಾಟಕದ ಹಿತದೃಷ್ಟಿಯಲ್ಲಿಯೂ ಅಗತ್ಯವಾದದ್ದು.

ಬರಗಾಲದಲ್ಲಿ ಬಡವರಿಗೆ ಬಾಳಿಲ್ಲ, ಬಲ್ಲಿದರಿಗೆ ಬರವಿಲ್ಲ

ಬರದ ಹೆಸರಿನಲ್ಲಿ ಭ್ರಷ್ಟಾಚಾರವನ್ನು ಬಯಲಿಗಿಟ್ಟ ಕೂಲಿಕಾರರ ಸಂಘ

ಬರುಬಿಸಿಲು ಬಡಿದಾಗ ಬರಬಿತ್ತೇಯವ್ವಾ
ಹುಲ್ಲೊಣಗಿ ನೀರೊಣಗಿ ಬರದಾಯ್ತು ಯವ್ವಾ
ನೆಲದವ್ವನ ಎದೆಯೊಡೆದು ಬರಬಿತ್ತು ತಾಯಿ

ಮುಂಗಾರು ಮಳೆ ಹೋಯ್ತು, ಹಿಂಗಾಲು ಮಳೆಯ ಸುಳಿವಿಲ್ಲ. ದನಕರುಗಳಿಗೆ ನೀರಿಲ್ಲ - ಮೇವಿಲ್ಲ. ಆಕಾಶ ದಿಟ್ಟಿಸುತ್ತಾ ಕುಳಿತ ರೈತನ ನಿಟ್ಟುಸಿರುವ ಕೇಳಿಯೂ 'ಬರ'ವೆಂಬ ಮಾರಿಯ ಮನ ಕರಗಿಲ್ಲ. ರಾಜ್ಯವಾಳುವ ಧಣಿಗಳು ಘೋಷಿಸುತ್ತಾರೆ ಕೋಟ್ಯಾಂತರ ರೂಪಾಯಿ ಬರ ಪರಿಹಾರಕ್ಕೆ ಬಿಡುಗಡೆ ಮಾಡಲಾಗಿದೆ, ಟನ್ ಗಟ್ಟಳೆ ಧಾನ್ಯವನ್ನು ಬರಬೀಡಿತ ಪ್ರದೇಶಗಳಿಗೆ ರವಾನಿಸಲಾಗಿದೆ. ಆದರೆ ಒಬ್ಬ ರೈತನಿಗೂ ಒಂದು ದಮ್ಮಡಿ ಕಾಸು ಮುಟ್ಟಿಲ್ಲ, ಒಂದು ಪಾವು ಅಕ್ಕಿ ಸಿಕ್ಕಿಲ್ಲ, ಇದು ನಿಜ ಸ್ಥಿತಿ. ಕೇಂದ್ರ ಸರ್ಕಾರ ಹೇಳುತ್ತದೆ ರಾಜ್ಯಗಳಿಗೆ ಧಾನ್ಯ ಬಿಡುಗಡೆ ಮಾಡಲಾಗಿದೆ, ರಾಜ್ಯ ಸರ್ಕಾರ ದೂರುತ್ತದೆ ಧಾನ್ಯ ತಲುಪಿಲ್ಲ. ಇದರಲ್ಲಿ ಯಾವುದು ಮಿಥ್ಯ, ಯಾವುದು ಸತ್ಯ? ಕೇಂದ್ರ-ರಾಜ್ಯ ಸರ್ಕಾರಗಳೇ 'ಕಳ್ಳ-ಪೋಲಿಸ್' ಆಟಕ್ಕೆ ನಿಂತಿರುವಾಗ ಜನರ ಗತಿಯೇನು?

ಬರಪರಿಹಾರದ ಬಾಬತ್ತು ದಕ್ಕೋದಿಲ್ಲ ರೈತರಿಗೆ ಯಾವತ್ತೂ

'ಬರ'ವೆಂಬುದು ರೈತನಿಗೆ ದರಿದ್ರವಾದರೂ ಮಂತ್ರಿಗಳು, ಶಾಸಕರು ಮತ್ತು ಅಧಿಕಾರಿಗಳಿಗೆ ಅದು ಶುಭ ಶಕುನವೇ ಆಗಿದೆ. ಯಾವಯಾವುದೋ ಬರ ಪರಿಹಾರ ಕಾಮಗಾರಿಗಳು, ಕೋಟ್ಯಾಂತರ ರೂಪಾಯಿ ಮಂಜೂರು. ಆದರೆ ಕಣ್ಣಿಗೆ ಯಾವ ಪರಿಹಾರವೂ ಕಾಣೋದಿಲ್ಲ. ಹಣ ಮಾತ್ರ ಬಿಡುಗಡೆಯಾಗಿ ಅವರವರ ಮಟ್ಟಕ್ಕೆ ತಕ್ಕಂತೆ ಕೋಟಾ ನಿಗದಿಯಾಗಿ ಹಂಚಿಕೆಯಾಗಿರುತ್ತದೆ. ಅಂಥದೊಂದು ಉದಾಹರಣೆಗೆ ಗಂಗಾವತಿಯಲ್ಲಿನ ಕಾಮಗಾರಿಗಳ ವಿವರಗಳು ಇಲ್ಲಿವೆ. ಇದು ಎಲ್ಲಾ ಕಡೆಗಳಲ್ಲೂ ಸರ್ವೇಸಾಮಾನ್ಯವಾಗಿದೆ.

ಗಂಗಾವತಿ ತಾಲೂಕಿನಲ್ಲಿ ಕೂಲಿಕಾರರಿಗೆ 'ಕೂಲಿಗಾಗಿ ಕಾಳು' ಯೋಜನೆಯಡಿಯಲ್ಲಿ ತ್ವರಿತವಾಗಿ ಕೆಲಸ ನೀಡುವಂತೆ ಮತ್ತು ಗಂಜಿ ಕೇಂದ್ರಗಳನ್ನು ತೆರೆಯುವಂತೆ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘವು ಪ್ರಾಂತ ರೈತ ಸಂಘದೊಡಗೂಡಿ ಸರ್ಕಾರವನ್ನು ಒತ್ತಾಯಿಸಿದಾಗ ಕೆಲವು ಹಳ್ಳಿಗಳಲ್ಲಿ ಕಾಮಗಾರಿಗಳು ಆರಂಭಗೊಂಡವು. ಸರ್ಕಾರ ಕೂಲಿಕಾರರಿಗೆ 90 ದಿನಗಳ ಕಾಲ ಕೆಲಸ ನೀಡಲು ಮಂಜೂರಾತಿ ನೀಡಿತ್ತು. ಆದರೆ ಕೆಲಸ ಸಿಕ್ಕಿದ್ದು 4-5 ದಿನಗಳು ಮಾತ್ರ ಅದು ರಸ್ತೆ ನಿರ್ಮಾಣದ ಹೆಸರಿನಲ್ಲಿ ಸ್ವಲ್ಪ ಮಣ್ಣನ್ನು ರಸ್ತೆಗೆ ಹಾಕಿದ್ದು ಅಷ್ಟೆ. ಇದು ಸುಮಾರು 20 ಲಕ್ಷ ರೂಪಾಯಿಗಳ ಕಾಮಗಾರಿಯಾಗಿದ್ದು ಖರ್ಚಾದದ್ದು 4 ಲಕ್ಷ ರೂಪಾಯಿಗಳಷ್ಟು ಮಾತ್ರ. ಉಳಿದ ಹಣವನ್ನು ಮೇಲಿನವರು, ಅಧಿಕಾರಿಗಳು ಮತ್ತು ಕಂಟ್ರಾಕ್ಟರುಗಳು ಗುಳುಂ ಮಾಡಿದ್ದಾರೆ. ಇಂತಹ ಹಲವು ಬಗೆಯ ಕಾಮಗಾರಿಗಳಿಂದ ಲಕ್ಷಾಂತರ ರೂಪಾಯಿ ಗುಳುಂ ಆಗಿದೆ. (ವಿವರಗಳಿಗೆ ಬಾಕ್ಸ್ ನೋಡಿ). 'ಕೂಲಿಗಾಗಿ ಕಾಳು' ಯೋಜನೆ ಬಡವ ಹೊಟ್ಟೆ ತುಂಬಿಸಿಲ್ಲ, ಅಧಿಕಾರಿಗಳ ಜೇಬು ತುಂಬಿಸಿದೆ.



ತಂಪಾಗಿರುವ ಜನಪ್ರತಿನಿಧಿಗಳು

ನೆಲ ಕಾದು ಕಬ್ಬಿಣವಾಗಿ, ಸುಡು ಬಿಸಿಲು ತಾಳದ ರೈತನ ಕೂಗು ಮುಗಿಲು ಮುಟ್ಟಿರುವಾಗ ಬೆಂಗಳೂರಿನ ಹವಾ ನಿಯಂತ್ರಿತ ಕೊಠಡಿಗಳಲ್ಲಿ ತಣ್ಣಗೆ ಕುಳಿತಿದ್ದಾರೆ ಈ ಭಾಗದ ಜನಪ್ರತಿನಿಧಿಗಳು. ಶಾಸಕ 'ದೊರೆ' ಶ್ರೀರಂಗ ದೇವರಾಯಲು ಅವರು ಮುತುವರ್ಜಿಯಿಂದ ಕಾಮಗಾರಿಗಳ ಮಂಜೂರು ಮಾಡಿಸಿರುವುದು ಜನಪರ ಕಾಳಜಿಯಿಂದಲ್ಲ ಬದಲಿಗೆ ಕಂಟ್ರಾಕ್ಟರುಗಳಿಗೆ ಅವುಗಳನ್ನು ಹಂಚಿ ಅವರಿಂದ ಪಡೆದ ಕಮಿಷನ್ ಎಣಿಸುತ್ತಾ ಕುಳಿತಿದ್ದಾನೆ. ಕಾಮಗಾರಿಗಳ ಗತಿ ಏನಾಯಿತು ಎಂದು ಗಮನಿಸಲು ತಾಲೂಕಿಗೆ ಹೆಜ್ಜೆಯಿಡುವುದಿರಲಿ ಅತ್ತ ಕಡೆ ಮುಖ ಹಾಕಿಯೂ ಕುಳಿತಿಲ್ಲ ಈ ಆಸಾಮಿ.

ಇನ್ನು ಜಿಲ್ಲಾ ಉಸ್ತುವಾರಿ ಮಂತ್ರಿ ಹಾಗೂ ರಾಜ್ಯ ಕಂದಾಯ ಮಂತ್ರಿ ಮಲ್ಲಿಕಾರ್ಜುನ ನಾಗಪ್ಪ ಇನ್ನೂ ಅದ್ವಾನ. ತನ್ನ ನೆಲದ ಜನರ ಸ್ಥಿತಿಯೇನು? ಕಾಮಗಾರಿಗಳು ಪ್ರಗತಿಯಲ್ಲಿವೆಯೇ ಎಂಬುದನ್ನು ಕಿಂಚಿತ್ತೂ ಲೆಕ್ಕಿಸದೇ ವಿದೇಶ ಪ್ರವಾಸ ಮಾಡಿ ಬಂದಿದ್ದಾರೆ. ಬಂದ ಮೇಲಾದರೂ ಇತ್ತ ಗಮನ ಹರಿಸಿದ್ದಾರೆಯೇ ಎಂದರೆ ಈಗಲೂ ಅದೇ ದಿವ್ಯ ನಿರ್ಲಕ್ಷ್ಯವೇ.

ಹಣ ಕೊಟ್ಟರೂ ಕಾಳು ಇಲ್ಲ

ಗಂಗಾವತಿ ತಾಲೂಕಿನ ಮುಸಲಾಪುರ ಸಂತೆಯಲ್ಲಿ ಈತನಕ 'ಬರ ಬಂದಾಗಲೂ ಕಾಳಿಗೆ ಕೊರತೆಯಿರಲಿಲ್ಲ. ಆದರೆ ಈಗ ಕಾಸು ಕೊಟ್ಟರೂ ಕಾಳು ಇಲ್ಲ. ಹೀಗಾಗಿ ಜನ ಮಂಡಾಳ (ಕಡಲೆಪುರಿ)ತಿಂದು ಜೀವಿಸುವಂತ ಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಅವರ ಆರೋಗ್ಯ ಹದಗೆಡುತ್ತಿದೆ.

ರೋಸಿ ಹೋದ ಜನ ಭ್ರಷ್ಟತೆ ತಡೆಗಟ್ಟಲು ಸಜ್ಜು

ರೈತರಿಗೆ, ಕೂಲಿಕಾರರಿಗೆ ಯಾವೊಂದು ಯೋಜನೆಯ ಫಲಗಳು ದಕ್ಕದೆ ಭ್ರಷ್ಟರ ಪಾಲಾಗುತ್ತಿರುವುದನ್ನು ಕಂಡ ಪ್ರಾಂತ ಕೂಲಿಕಾರರ ಸಂಘ ಕಾಮಗಾರಿಗಳ ಪರಿಶೀಲನೆ ನಡೆಸಿ ಎಷ್ಟು ಹಣ ಪೋಲಾಗಿದೆ ಎಂದು ಅರಿತು ತಾಲೂಕು ದಂಡಾಕಾರಿಗಳ ಗಮನಕ್ಕೆ ತಂದಿತು. ಭ್ರಷ್ಟಾಚಾರವನ್ನು ಅಲ್ಲಗಳೆದ ದಂಡಾಧಿಕಾರಿಗಳು ಸಾವಿರಾರು ಜನಕ್ಕೆ ಕೆಲಸ ಕೊಟ್ಟಿರುವ ಅಂಕಿ ಅಂಶಗಳನ್ನು ವಿವರಿಸಿದಾಗ, ನೂರು ಜನಕ್ಕೆ ಕೆಲಸ ಕೊಟ್ಟು ಐನೂರು ಜನಕ್ಕೆ ಕೆಲಸ ಕೊಟ್ಟಿರುವುದಾಗಿ ಕಂಟ್ರಾಕ್ಟರುಗಳು ಸುಳ್ಳು ಮಾಹಿತಿ ನೀಡಿರುವುದನ್ನು ಸಂಘವು ಬಯಲಿಗೆಳೆಯಿತು.

ಇದರಿಂದ ತಬ್ಬಿಬ್ಬಾದ ಅಧಿಕಾರಿಗಳು ರೈತ-ಕೂಲಿಕಾರರ ಮುಖಂಡರಿಗೆ ಕಾಮಗಾರಿಗಳ ಅವ್ಯವಹಾರಗಳ ಬಗ್ಗೆ ಚಕಾರವೆತ್ತದಿದ್ದರೆ ನಿಮಗೆ ಹಣ ನೀಡುತ್ತೇವೆ ಎಂಬ ಆಮಿಷ ಒಡ್ಡಿದ್ದಾರೆ. ಇದಕ್ಕೆ ತಲೆಬಾಗದೆ ಸೆಟೆದು ನಿಂತಿದ್ದಾರೆ ರೈತ-ಕೂಲಿಕಾರರು.

ತಹಶೀಲ್ದಾರರು ಕೂಲಿಕಾರರ ಸಭೆ ನಡೆಸಿ ಸರಿಯಾದ ಕ್ರಮಗಳನ್ನು ಜರುಗಿಸುವುದಾಗಿ ಹೇಳಿದ್ದರೂ ಸಭೆ ನಿಗದಿಯಾದ ದಿನ ತಹಶೀಲ್ದಾರರು ನಾಪತ್ತೆಯಾದರು. ಇದನ್ನು ಸಹಿಸದ ಕೂಲಿಕಾರರ ಸಂಘವು ತಹಶೀಲ್ದಾರರ ಮನೆಯ ಮುಂದೆಯೇ ಧರಣಿ ಆರಂಭಿಸಿತು. ಸುದ್ದಿ ತಿಳಿದ ತಹಶೀಲ್ದಾರರು ಪೋಲೀಸರ ಮುಖಾಂತರ ಸುದ್ದಿ ಕಳಿಸಿ ರೈತ-ಕೂಲಿಕಾರರ ಮುಖಂಡರನ್ನು ಸಭೆಗೆ ಆಹ್ವಾನಿಸಿ ಮನೆ ಮುಂದಿನ ಧರಣಿಯನ್ನು ಕೈ ಬಿಡುವಂತೆ ಮನವಿ ಮಾಡಿದರು.

> ಬಾದಾಮಿ ಕೆರೆ, ಉದರಕೊಳಿ ಕೆರೆಗಳು ಇದ್ದರೂ ಅವುಗಳ ಉಪಯೋಗವಿಲ್ಲ. ಮಣ್ಣು ತುಂಬಿಹೋಗಿದೆ. ಇಂತಹ ಎರಡು ಕೆರೆಗಳಿಗೆ 4 ಲಕ್ಷ ರೂಪಾಯಿ ಮಂಜೂರಾತಿ ಮಾಡಿಕೊಂಡು ಅಧಿಕಾರಿಗಳು, ಶಾಸಕರು ಬಿಲ್ ಎತ್ತಿದ್ದಾರೆ. ಇದಲ್ಲದೆ ಕನಕಗಿರಿ ಪ್ರವಾಸ ಮಂದಿರದ ಕೊಳವೆ ಬಾವಿ, ಅಡವಿ ಬಾವಿ ಗ್ರಾಮದ ಕೊಳವೆ ಬಾವಿ, ಹಿರೆಡೆಂಕಣಕಲ್ ಗ್ರಾಮಕ್ಕೆ ಕಿರು ನೀರಾವರಿ ಯೋಜನೆಗಾಗಿ 30 ಸಾವಿರ ರೂ.ನಂತೆ ಹಣ ಮಂಜೂರಾತಿಯಾದರೂ ಆ ಊರುಗಳಿಗೆ ಕೊಳವೆಬಾವಿ ಇಲ್ಲ.
>
> ಗಂಗಾವತಿಯ ವೆಂಕಟಗಿರಿ ಕೆರೆ ದುರಸ್ತಿ ಕಾಮಗಾರಿಗೆ ಸರ್ಕಾರದಿಂದ ಒಂದು ಲಕ್ಷ ರೂ ಮಂಜೂರಾಗಿದೆ. ಆದರೆ ಪರಿಶೀಲನೆಯ ನಂತರ ಕಂಡು ಬಂದದ್ದು ಅದಕ್ಕೆ ಸುಮಾರು 24,000 ರೂ.ಗಳು ಮಾತ್ರ ಖರ್ಚಾಗಿದೆ. ಹಾಗೆಯೇ ಬೊಮ್ಮಸಾಗರ ತಾಂಡದ ರಸ್ತೆ ನಿರ್ಮಾಣಕ್ಕೆ ಒಂದು ಲಕ್ಷ .ರೂಪಾಯಿ ಮಂಜೂರಾದರೆ ಅಲ್ಲಿ ಖರ್ಚಾಗಿರುವುದು 23 ಸಾವಿರ ರೂ.ಗಳು ಮಾತ್ರ. ಇದೇ ರೀತಿ ಎಲ್ಲಾ ಕಾಮಗಾರಿಗಳಲ್ಲೂ ಭ್ರಷ್ಟಾಚಾರ ನಡೆದು ಲಕ್ಷಾಂತರ ರೂಪಾಯಿ ಗುಳುಂ ಆಗಿದೆ.

ಸಭೆಯಲ್ಲಿ ಕಾಮಗಾರಿಗಳಲ್ಲಿ ಭ್ರಷ್ಟಾಚಾರವನ್ನು ಬಯಲಿಗೆಳೆದ ಕೂಲಿಕಾರರ ಸಂಘವು ಕೂಲಿಕಾರರಿಗೆ ಸೂಕ್ತ ನ್ಯಾಯ ಒದಗಿಸಿ ಅವರಿಗೆ ಕೆಲಸ ನೀಡಬೇಕು ಮತ್ತು ಭ್ರಷ್ಟಾಚಾರವನ್ನು ತಡೆಗಟ್ಟಲು ಆಗ್ರಹಿಸಿತು. ಇದಕ್ಕೆ ಒಪ್ಪಿದ ತಹಶೀಲ್ದಾರರು ಭ್ರಷ್ಟಾಚಾರ ತನಿಖೆ ಮತ್ತು ತಡೆಗೆ ಒಬ್ಬ ಅಧಿಕಾರಿ ನೇಮಿಸುವುದಲ್ಲದೆ ಅಪೂರ್ಣಗೊಂಡ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಕೂಲಿಕಾರರಿಗೆ ಕೆಲಸ ನೀಡುವುದಾಗಿ ಭರವಸೆ ನೀಡಿದರು.

- ಚಂದ್ರಪ್ಪ ಹೊಸ್ಕೇರಾ

ಕರ್ನಾಟಕದಲ್ಲಿ ಕಳೆದ ವಾರ....


ಬೆಂಗಳೂರಿನಲ್ಲಿ ಭಯೋತ್ಪಾದಕರ ಹತ್ಯೆ-ಕುತೂಹಲಕಾರಿ ಪ್ರಶ್ನೆಗಳು

ಅವರು ಗಾಢ ನಿದ್ರೆಯಲ್ಲಿರುವಾಗ ಸಿಡಿದ ಅಶ್ರುವಾಯುವಿನ ದಟ್ಟ ಹೊಗೆಯಿಂದ ದಡಬಡಿಸಿ ಎದ್ದರು. ಏನಾಗುತ್ತಿದೆ ಎಂಬುದನ್ನು ತಿಳಿಯಲು ಹೆಚ್ಚುಹೊತ್ತು ಬೇಕಾಗಲಿಲ್ಲ. ಮರು ಆಕ್ರಮಣಕ್ಕೆಂದು ಒಬ್ಬಾತ ಎಕೆ-47 ನಿಂದ ಗುಂಡು ಹಾರಿಸತೊಡಗಿದ. ಉಳಿದ ನಾಲ್ವರು ಚೆಲ್ಲಾಪಿಲ್ಲಿಯಾಗಿ ಮನೆಯೊಳಗೆ ಓಡತೊಡಗಿದರು. ಆದರೆ ಅಲ್ಲಿದ್ದದ್ದು ಗುಂಡಿನ ಸುರಿಮಳೆ. ಪ್ರತಿಯೊಬ್ಬರ ದೇಹದೊಳಕ್ಕೆ ಎಡಬಿಡದೇ ಹೊಕ್ಕ ಗುಂಡೇಟನಿಂದಾಗಿ ಐವರೂ ಹೆಣವಾಗಿ ನೆಲಕ್ಕುರುಳಿದರು. ನಂತರ ಗುಂಡುಗಳ ಹಾರಾಟ ನಿಂತಿತು. ಇನ್ನೂ ಹೆಣಗಳ ಪರಿಶೀಲನೆ.. ಆಸ್ಪತ್ರೆಯಲ್ಲಿ ಅವರು ಸತ್ತರೆಂದು ಘೋಷಣೆ. ಕೊಯಮುತ್ತೂರಿನ ಬಾಂಬ್ ಸ್ಫೋಟ, ಆರ್ ಎಸ್ ಎಸ್ ಕಛೇರಿ ಧ್ವಂಸ ಒಳಗೊಂಡು ದೇಶದಾದ್ಯಂತ ಹಲವು ಸಂಚುಗಳಲ್ಲಿ ಭಾಗಿಯಾದ ಭಯೋತ್ಪಾದಕ ಇಮಾಂ ಅಲಿ(32) ಹಾಗೂ ಆತನ ಸಹಚರರಾದ ಸೇಲಂನ ಮಹಮ್ಮದ್ ಇಬ್ರಾಹಂ, ತಿರುವಣ್ಣಾಮಲೈ ವಾಸಿ ಮಂಗಾ ಬಷೀರ್, ಸೈಫಉಲ್ಲಾ ಅಲಿಯಾಸ್ ಸೀನಿಯಪ್ಪ(30) ಮತ್ತು ಆತನ ಪತ್ನಿ ಎನ್ನಲಾಗಿರುವ ಯಾಸ್ಮಿನ್(23) ಇವರು ತಮಿಳುನಾಡು - ಕರ್ನಾಟಕದ ಪೋಲೀಸರ ಕಾರ್ಯಾಚರಣೆಯಲ್ಲಿ ಕೊನೆಯುಸಿರೆಳೆದರು.

ಈ ತಂಡ 'ಅಲ್ ಉಮ್ಮಾ' ಎಂಬ ಭಯೋತ್ಪಾದಕ ಗುಂಪಿಗೆ ಸೇರಿದ್ದು ಪತ್ತೆಯಾಗಿದೆ. ಹಾಗೆಯೇ ಈ ತಂಡದ ಇಮಾಮ್ ಅಲಿ ಪಾಕಿಸ್ತಾನದ ಗೂಢಾಚಾರ ಸಂಸ್ಥೆ ಐಎಸ್ಐ, ಹಿಜ್ಬುಲ್ ಮುಜಾಹಿದ್ದಿನ್ ,ಜಮ್ಮು-ಕಾಶ್ಮೀರ ಉಗ್ರಗಾಮಿ ನೆಲೆಗಳಿಂದ ತರಬೇತಿ ಹೊಂದಿದಾತ ಎಂಬ ವಿವರಗಳು ಲಭ್ಯವಾಗಿವೆ. ಈ ತಂಡ ಬೆಂಗಳೂರಿನ ಇಸ್ಕಾನ್(ಶ್ರೀಕೃಷ್ಣ ದೇವಾಲಯ)ವನ್ನು ಒಳಗೊಂಡು ಹಲವಾರು ಕಡೆ ಸ್ಫೋಟಿಸುವ ಸಂಚು ರೂಪಿಸಿದ್ದರೆಂದು ಪೋಲೀಸ್ ಮೂಲಗಳು ತಿಳಿಸಿವೆ. ಈ ಕಾರಣಗಳಿಂದಲೇ ಬೆಂಗಳೂರಿನ ಎಂ.ಎಸ್.ರಾಮಯ್ಯ ನಗರದಲ್ಲಿ ಬಾಡಿಗೆ ಮನೆಯೊಂದರಲ್ಲಿ ವಾಸವಾಗಿದ್ದು, ಅನೇಕ ಮಾರಕ ಶಸ್ತ್ರ ತಯಾರಿಕೆ ಮತ್ತು ಗುಪ್ತ ಯೋಜನೆಗಳನ್ನು ರೂಪಿಸುತ್ತಿದ್ದರು ಎಂಬುದು ಬೆಳಕಿಗೆ ಬಂದಿದೆ.

ಇಂತಹ ಭೀಕರ ಭಯೋತ್ಪಾದಕರ ಜಾಲ ಪತ್ತೆ ಹಚ್ಚಿ, ಜಾಡು ಹಿಡಿದು ಕಾರ್ಯಾಚರಣೆ ನಡೆಸಿದ ಉಭಯ ರಾಜ್ಯಗಳ ಪೋಲೀಸರ ಕ್ರಮ ಶ್ಲಾಘನೀಯ. ಕಾರ್ಯಾಚರಣೆಯೂ ಸಾಹಸಮಯವೇ. ಆದರೆ ಎಲ್ಲರನ್ನು ಪೂರ್ಣವಾಗಿ ಕೊಂದು ಹಾಕುವದಕ್ಕಿಂತ ಕೆಲವರನ್ನಾದರೂ ನುರಿತ ಕಮಾಂಡೋಗಳು ಹಿಡಿದಿದ್ದರೆ ಇನ್ನೂ ಹೆಚ್ಚಿನ ಮಾಹಿತಿಗಳು ಲಭ್ಯವಾಗಬಹುದಿತ್ತು. ಅಂತಹ ಅವಕಾಶಗಳನ್ನು ಬಳಸಲು ಮುಂದಾಗಲಿಲ್ಲವೇನೋ ಎಂದು ಕಾರ್ಯಾಚರಣೆ ವಿವರ ನೋಡಿದರೆ ಅನಿಸುತ್ತದೆ.

ಇದಾದ ಬಳಿಕ ಈ ಉಗ್ರಗಾಮಿಗಳ ಹಿನ್ನೆಲೆ ವಿವರಗಳುಒಂದೊಂದಾಗಿ ಹೊರಬರುತ್ತಿವೆ. ಆರ್ ಎಸ್ ಎಸ್ ಮತ್ತು ಇಸ್ಲಾಮಿಕ್ ಉಗ್ರಗಾಮಿಗಳ ನಡುವಿನ ಕಾಳಗಗಳು ಸೇಡು, ಪ್ರತಿಸೇಡು ಅಂತರ್ರಾಷ್ಟ್ರೀಯ ಸಂಬಂಧಗಳು ಬೆಚ್ಚಿ ಬೀಳಿಸುವಂತಹವು. ಹಾಗೆಯೇ ಭಯೋತ್ಪಾದಕ ಇಮಾಂ ಅಲಿ ಆತನ ಪ್ರಾಣ ಸ್ನೇಹಿತನಾಗಿದ್ದ ಹೈದರ್ ಅಲಿ ಅವರ ಧಾರ್ಮಿಕ ಮೂಲ ಹಿಂದುವಾಗಿದ್ದರೆಂದೂ ನಂತರ ಮುಸ್ಲಿಂ ಧರ್ಮಕ್ಕೆ ಮತಾಂತರ ಹೊಂದಿದ್ದರು ಎಂಬುದು, ಇನ್ನೂ ವಿಶೇಷವೆಂದರೆ ಕೊಯಮತ್ತೂರಿನ ಬಾಂಬ್ ಸ್ಫೋಟದ ಸಂಚಿನಲ್ಲಿ ಇದೇ ಹಿನ್ನೆಲೆಯಿದ್ದವರ ಬಗ್ಗೆ ಇಂತಹ ಮಾತುಗಳು ಕೇಳಿ ಬಂದಿದ್ದವು. ಈ ಎಲ್ಲಾ ಸಂಗತಿಗಳು ಹೀಗೇಕೆ ಎಂಬ ಅನೇಕ ಕುತೂಹಲ, ಪ್ರಶ್ನೆಗಳನ್ನು ಹಾಗೇ ಆತಂಕವನ್ನು ಹುಟ್ಟು ಹಾಕುತ್ತಿವೆ.



ಶಿಕ್ಷಣ

ಕೇಸರೀಕರಣದ ತೀರ್ಪು

ಶಿಕ್ಷಣ ರಂಗದಲ್ಲೂ ಕೋಮುದ್ವೇಷದ ವಿಷದಿಂದ ತುಂಬಲು ಎಲ್ಲಾ ಹಂತಗಳಲ್ಲಿಯೂ ಯತ್ನಿಸುತ್ತಿರುವ ಖಾವಿ ಪಡೆ ಶಿಕ್ಷಣದ ಕೇಸರೀಕರಣಕ್ಕೆ ಸಂಬಂಧಿಸಿದ ಸುಪ್ರಿಂಕೋರ್ಟ್ ತೀರ್ಪನ್ನು ತಮಗನ್ನಿಸಿದ ರೀತಿ ವ್ಯಾಖ್ಯಾನಿಸತೊಡಗಿದ್ದಾರೆ. ಈ ಬಗ್ಗೆ ಸುಪ್ರಿಂಕೋರ್ಟ್ ತೀರ್ಪು ಏನನ್ನು ಹೇಳಬಯಸಿದೆ, ಅದರ ಸಾಧಕ – ಬಾಧಕಗಳೇನು? ಎಂದು ವಿವರಿಸುವ ಲೇಖನ

ಆರ್.ರಾಮಕೃಷ್ಣ

ದೇಶದ ಸರ್ವೋಚ್ಛ ನ್ಯಾಯಾಲಯವು ಸೆಪ್ಟೆಂಬರ್ 12,2002ರಂದು, ಈ ಹಿಂದೆ ತಾನೇ ನೀಡಿದ್ದ ತಡೆಯಾಜ್ಞೆಯೊಂದನ್ನು ತೆರವುಗೊಳಿಸಿ, ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್.ಸಿ.ಇ.ಆರ್.ಟಿ) ರೂಪಿಸಿರುವ ಪಠ್ಯಕ್ರಮ ನೀತಿಯಲ್ಲಿ 'ಸಂವಿಧಾನ ವಿರೋಧಿ'ಯಾದ ಅಂಶಗಳೇನು ಇಲ್ಲವೆಂಬ ತೀರ್ಪನ್ನು ನೀಡುವುದರ ಮೂಲಕ ದೇಶದ ಸಂವಿಧಾನ-ಜಾತ್ಯಾತೀತ ಮೌಲ್ಯಗಳು - ಸಮಾನತೆ-ಒಕ್ಕೂಟ ತತ್ವದಂತಹ ಮಹತ್ವದ ಮೌಲ್ಯಗಳು ಮುಂತಾದ ಬಗೆಗೆ ನಡೆಯುತ್ತಿರುವ ಚರ್ಚೆಯನ್ನು ಮತ್ತೊಂದು ಹೊಸ ಮಜಲಿಗೆ ತೆಗೆದುಕೊಂಡು ಹೋಗಿದೆ.

ಸಾಮಾಜಿಕ ಕಾರ್ಯಕರ್ತರಾದ ಅರಣ್ ರಾಯ್, ಶಿಕ್ಷಣ ತಜ್ಞರಾದ ಮೀನಾ ಕೃಷ್ಣಾ ತ್ಯಾಬ್ಜಿ ಮತ್ತು ಪತ್ರಕರ್ತ ವರ್ಗೀಸ್ ಈ ಮೂವರು ಸುಪ್ರಿಂ ಕೋರ್ಟ್‌ನಲ್ಲಿ ಫೆಬ್ರವರಿ 15.2002ರಂದು ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯನ್ನು ಸಲ್ಲಿಸಿ ಎನ್.ಸಿ.ಇ.ಆರ್.ಟಿ. ರೂಪಿಸಿದ್ದ 'ರಾಷ್ಟ್ರೀಯ ಪಠ್ಯ ನೀತಿ' (national curriculm frame work) ಗೆ ತಡೆಯಾಜ್ಞೆ ಕೋರಿದ್ದರು. ಅರ್ಜಿದಾರರು ಎತ್ತಿದ ಪ್ರಮುಖ ಆಕ್ಷೇಪಗಳು ಹೀಗಿವೆ.

- ಎನ್.ಸಿ.ಇ.ಆರ್.ಟಿ. ಪಠ್ಯ ನೀತಿ ರೂಪಿಸುವ ಹಂತದಲ್ಲಿ, ಕೇಂದ್ರೀಯ ಶಿಕ್ಷಣ ಸಲಹಾ ಮಂಡಳಿ (ಸಿ.ಎ.ಬಿ.ಇ.) ಯ ಸಮ್ಮತಿ ಪಡೆದಿಲ್ಲ.
- ಪಠ್ಯ ನೀತಿಯು ರಾಷ್ಟ್ರದ ಜಾತ್ಯಾತೀತ ನೀತಿ ಪರಂಪರೆಗೆ ವಿರುದ್ಧವಾಗಿದೆ.
- ಹೊಸ ಪಠ್ಯ ನೀತಿಯು ಸಂವಿಧಾನ ಮೂಲ ಆಶಯಗಳಿಗೆ ವಿರುದ್ಧವಾಗಿದೆ.

ಒಂದು ಒಕ್ಕೂಟ ರಾಷ್ಟ್ರವಾದ ಭಾರತ ದೇಶದಲ್ಲಿ ಶಿಕ್ಷಣ ಸಮವರ್ತಿ ಪಟ್ಟಿ (concorent list)ಯಲ್ಲಿದೆ. ಅಂದರೆ ಶಿಕ್ಷಣದ ಜವಾಬ್ದಾರಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡಕ್ಕೂ ಇದೆ. ಸಾಮಾಜಿಕವಾಗಿ- ಸಾಂಸ್ಕೃತಿಕವಾಗಿ ಅಗಾಧವಾದ ವೈವಿಧ್ಯತೆ-ಭಿನ್ನತೆಯುಳ್ಳ ಭಾರತದಂತಹ ವಿಶಾಲ ದೇಶದಲ್ಲಿ, ಒಂದು 'ಸಾಮ್ರಾಜ್ಯ'ದ ಕಲ್ಪನೆಗೆ ವಿರುದ್ಧವಾಗಿ ಒಂದು ಒಕ್ಕೂಟವಾಗಿರುವ ಇಲ್ಲಿ ಶಿಕ್ಷಣ ನೀತಿಯ ಸಂಬಂಧ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಚರ್ಚೆ ಸಂವಾದಗಳ ಮೂಲಕ ಸಹಮತ ಬರಲು ಸಾಧ್ಯವಾಗುವಂತಹ ವ್ಯವಸ್ಥೆ ಅನಿವಾರ್ಯವಾಗಿದ್ದು ಕೇಂದ್ರಾಡಳಿತ, ಪ್ರದೇಶದ ಪ್ರತಿನಿಧಿ ಸೇರಿದಂತೆ, ಎಲ್ಲಾ ರಾಜ್ಯಗಳ ಶಿಕ್ಷಣ ಸಚಿವರು ಸದಸ್ಯರಾಗಿರುವ central advisory board of education(ಸಿಎಬಿಇ) - ಕೇಂದ್ರೀಯ ಶಿಕ್ಷಣ ಸಲಹಾ ಮಂಡಳಿಯು ಇಂಥ ಒಂದು ಅಗತ್ಯ ಪೂರೈಸುವ ವೇದಿಕೆಯಾಗಿದೆ. ರಾಷ್ಟ್ರೀಯ ಪಠ್ಯ ನೀತಿ ಅಂಗೀಕರಿಸುವ ಮುಂಚೆ ಸಿಎಬಿಇ ಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು ರಾಷ್ಟ್ರದ ಒಕ್ಕೂಟ ತತ್ವಕ್ಕೆ ಅನುಗುಣವಾದ ಕ್ರಮವಾಗಿದೆ. ಮತ್ತು ಈ ನೀತಿಯನ್ನು ಬಹುತೇಕ ಸ್ವಾತಂತ್ರ್ಯ ಪೂರ್ವದಿಂದಲೂ ಇದುವರೆಗೆ ಅನುಸರಿಸುತ್ತಾ ಬರಲಾಗಿದೆ.

ಈ ಪ್ರಶ್ನೆಯ ಬಗ್ಗೆ ತೀರ್ಪು ನೀಡಿರುವ ನ್ಯಾಯಾಲಯ, ಸಿಎಬಿಇ ಯು ತಾಂತ್ರಿಕವಾಗಿ ಒಂದು ಸಂವಿಧಾನಬದ್ಧ ಸಂಸ್ಥೆಯೇನು ಆಗಿಲ್ಲದಿರುವುದರಿಂದ, ಸಿಎಬಿಇಯಲ್ಲಿ ಚರ್ಚಿಸಿಲ್ಲವೆಂಬ ಕಾರಣದ ಆಧಾರದಲ್ಲಿ ಎನ್.ಸಿ.ಇ.ಆರ್.ಟಿ.ಯ ರಾಷ್ಟ್ರೀಯ ಪಠ್ಯ ನೀತಿಯನ್ನು ತಡೆ ಹಿಡಿಯಲಾಗದು ಎಂದು ಅಭಿಪ್ರಾಯಪಟ್ಟಿದೆ.(ಈ ತೀರ್ಪು ಸರ್ವಾನುಮತದ ತೀರ್ಪಲ್ಲ. ಎಂ.ಬಿ.ಶಾ, ಡಿ.ಎಂ.ಧರ್ಮಾಧಿಕಾರಿ, ಹಾಗೂ ಹೆಚ್.ಕೆ.ಸೇಮಾ ಈ ಮೂವರಲ್ಲಿ ಇಬ್ಬರು ಈ ಮೇಲಿನ ಅಭಿಪ್ರಾಯಪಟ್ಟಿದ್ದರೆ ಸೇಮಾರವರು ಸಿ.ಎ.ಬಿ.ಇ. ಯ ಸಮ್ಮತಿ ಅವಶ್ಯಕ ಎಂದು ಅಭಿಪ್ರಾಯಪಟ್ಟಿದ್ದಾರೆ.)

ಶಿಕ್ಷಣ ನೀತಿ ಮತ್ತು ಜಾತ್ಯಾತೀತ ಮೌಲ್ಯಗಳು

ಪ್ರೌಢ ಶಿಕ್ಷಣ ಹಂತದಲ್ಲಿ ಸಂಸ್ಕೃತ ಹೇರಿಕೆ, ವೇದ ಗಣಿತ, ಜ್ಯೋತಿಷ್ಯಶಾಸ್ತ್ರ ದಂತಹ ವಿಷಯಗಳ ಸೇರ್ಪಡೆ, ಜಾತ್ಯಾತೀತ ನೀತಿಗೆ ವಿರುದ್ಧವಾದ ಇತಿಹಾಸ ನಿರೂಪಣೆಯ ಅಂಶಗಳು ಈ ಯಾವುದರಲ್ಲಿಯೂ ನ್ಯಾಯಾಲಯಕ್ಕೆ ಆಕ್ಷೇಪಾರ್ಹವಾದದ್ದೇನು ಕಂಡಿಲ್ಲ! 'ವೇದ ಗಣಿತ'ದ ಪ್ರಶ್ನೆಯಲ್ಲಿ 'ವೇದ' ಎಂಬುದು ಕೇವಲ ಕಾಲ ಸೂಚಕ ಎಂದು ನ್ಯಾಯಾಲಯ ಪರಿಭಾವಿಸಿದೆ. ಅರ್ಜಿದಾರರು 'ಖಗೋಳ ಶಾಸ್ತ್ರ'ವನ್ನು 'ಜೋತೀಷ್ಯಶಾಸ್ತ್ರ' ಎಂದು ತಪ್ಪಾಗಿ ಗ್ರಹಿಸಿದ್ದಾರೆ ಎಂದೂ ನ್ಯಾಯಾಲಯ ತೀರ್ಪು ನೀಡಿದೆ. ಸಂಸ್ಕೃತ ಭಾಷೆಯ ಕಲಿಕೆ ಅಗತ್ಯವನ್ನು ತೀರ್ಪು ಎತ್ತಿ ಹಿಡಿದಿದೆ!!

ಮೊಘಲರು ದೇಶದ ಮೇಲೆ 'ದುರಾಕ್ರಮಣ' ಮಾಡಿದರು ಆದರೆ ಬ್ರಿಟೀಷರು ದೇಶವನ್ನು 'ಗೆದ್ದರು' ಇಂತಹ ಅರ್ಥವನ್ನುಳ್ಳ ವಾಕ್ಯಗಳಲ್ಲಿ ನ್ಯಾಯಾಲಯಕ್ಕೆ ಏನೂ ಬದಲಾವಣೆ ಅಗತ್ಯವಿಲ್ಲ ಎನಿಸಿದೆ!

ವಿಶ್ವವಿದ್ಯಾಲಯ ಧನ ಸಹಾಯ ಆಯೋಗವು ವಿಶ್ವ ವಿದ್ಯಾಲಯಗಳಲ್ಲಿ 'ಜ್ಯೋತಿಷ್ಯ ಶಾಸ್ತ್ರ' 'ಪೌರೋಹಿತ್ಯ' ಮುಂತಾದ ಕೋರ್ಸ್‌ಗಳನ್ನು ಆರಂಬಿಸುವಂತೆ ಸೂಚಿಸಿ ಲಖಿತ ಸುತ್ತೋಲೆಯನ್ನು ಹೊರಡಿಸಿ, ಹಲವು ವಿಶ್ವ ವಿದ್ಯಾಲಯಗಳು ಈ ಕೋರ್ಸುಗಳನ್ನು ಆರಂಭಿಸಲು ತೀರ್ಮಾನಿಸಿ ಆ ದಾರಿಯಲ್ಲಿ ಹೊರಟಿವೆ. ಈಗ ಜ್ಯೋತಿಷ್ಯ ಶಾಸ್ತ್ರ - ಖಗೋಳ ಶಾಸ್ತ್ರಗಳ ನಡುವೆ ಗೊಂದಲ ಮಾಡಿಕೊಂಡಿರುವವರು ಯಾರು ಎಂಬ ಮೂಲಭೂತ ಪ್ರಶ್ನೆ ಈಗ ಎದುರಾಗಿದೆ.

ನೈತಿಕತೆ ಮತ್ತು ಧಾರ್ಮಿಕತೆಯ ಪ್ರಶ್ನೆ

ವಿದ್ಯಾರ್ಥಿಗಳಿಗೆ ಮಾನವೀಯ ಮೌಲ್ಯಗಳು ಸಾಮಾಜಿಕ ಕಳಕಳಿ, ಆರೋಗ್ಯಕರವಾದ ರಾಷ್ಟ್ರಪ್ರೇಮ ಮುಂತಾದವುಗಳನ್ನು ಕಲಿಸುವ , ನೈತಿಕ ಶಿಕ್ಷಣ ಅವಶ್ಯವಾಗಿ ಬೇಕಾಗಿರುವುದಂತದ್ದು. ಆದರೆ ನೂತನ ರಾಷ್ಟ್ರೀಯ ಪಠ್ಯ ನೀತಿಯು ಇಂತಹ ನೈತಿಕತೆಯ ಮೂಲ ಆಧಾರ ಧಾರ್ಮಿಕತೆ ಎಂದು ಭಾವಿಸಿದೆ ಹೀಗಾಗಿ ಅದು ಮತಧರ್ಮಗಳ ಕುರಿತು ಪಠ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಉದ್ದೇಶ ಹೊಂದಿದೆ.

ಮತಧರ್ಮಗಳ ತಾತ್ವಿಕತೆ, ಸೈದ್ಧಾಂತಿಕ ಸಾರ, ಅವುಗಳ ವಿಮರ್ಶಾತ್ಮಕ ಅಧ್ಯಯನ, ಮತಧರ್ಮಗಳ ಸಕಾರಾತ್ಮಕ- ನಕಾರಾತ್ಮಕ ಅಂಶಗಳನ್ನು ಪರಿಶೀಲಿಸುವ ಚಿಕಿತ್ಸಕ ದೃಷ್ಟಿ ಇವುಗಳ ಬದಲಿಗೆ ಈ ಮತ ಧರ್ಮಗಳ ಕುರಿತು ಆರಾಧನಾ ಮನೋಭಾವ- ಹಾಗೂ ಅವನ್ನು ಕೊಂಡಾಡುವ ವೈಭವೀಕರಿಸುವ ಅಂಶಗಳು ಪಠ್ಯದಲ್ಲಿ ಸೇರಬೇಕೆ ಎಂಬ ಬಗೆಗೆ ಗಂಭೀರ ವಿಮರ್ಶೆ ಅಗತ್ಯವಾಗಿದೆ, 'ಧರ್ಮಗಳ ಬಗೆಗಿನ ಶಿಕ್ಷಣ' 'ಧಾರ್ಮಿಕ ಶಿಕ್ಷಣ' ಆಗಿ ಬಿಡುವ ಅಪಾಯ ವನ್ನು ತಳ್ಳಿಹಾಕುವುದು ಸಾಧ್ಯವಿಲ್ಲ. ಈ ವಿಷಯದಲ್ಲಿ ಸಾಕಷ್ಟು ಗೊಂದಲಗಳಿವೆ. ಇದೇ ಅಂಶವೇ ಶಿಕ್ಷಣದಲ್ಲಿ ಈಗಾಗಲೇ ಸಾಕಷ್ಟು ದುರ್ಬಳಕೆಯೂ ಆಗಿದೆ.



ಈ ಹೊರೆಯ ಮೇಲೊಂದು ವಿಷದ ಬರೆ

ನ್ಯಾಯಾಲಯವು ಧರ್ಮಗಳ ಕುರಿತ ಶಿಕ್ಷಣಕ್ಕೆ ಸಮ್ಮತಿ ಸೂಚಿಸಿದೆ. ಆದರೆ ಇದೇ ಸಮಯದಲ್ಲಿ ಈ ಶಿಕ್ಷಣ 'ಧಾರ್ಮಿಕ ನಿರ್ದೇಶನ' ವಾಗದಂತೆ, ಧರ್ಮದ ಹೆಸರಿನಲ್ಲಿ ಮೂಢ ನಂಬಿಕೆ, ಅಂಧಶ್ರದ್ಧೆಯನ್ನು ಪ್ರೇರೇಪಿಸದಂತೆ ನ್ಯಾಯಾಲಯದ ತೀರ್ಪು ಎಚ್ಚರಿಸಿದೆ.

ಶಿಕ್ಷಣದ ಸಮಾನ ಅವಕಾಶದ ಪ್ರಶ್ನೆ

ವಿದ್ಯಾರ್ಥಿಗಳ 'ಬುದ್ಧಿ ಮಟ್ಟ'ದ ಆಧಾರದ ಮೇಲೆ ಅವರನ್ನು ವರ್ಗೀಕರಣ ಮಾಡುವ ಶಿಕ್ಷಣ ನೀತಿಯ ಪ್ರಸ್ತಾವನೆಗೆ ನ್ಯಾಯಾಲಯ ಯಾವುದೇ ವಿರೋಧ ವ್ಯಕ್ತಪಡಿಸಿಲ್ಲ. ಅರ್ಜಿದಾರರು ಈ ಕುರಿತು ಆಕ್ಷೇಪವೆತ್ತಿದ್ದರು. ವಾಸ್ತವಿಕವಾಗಿ ಈ ಪ್ರಸ್ತಾವನೆಯು ಸಂವಿಧಾನದ 14ನೇ ವಿಧಿಯು ಖಾತ್ರಿಪಡಿಸುವ ಸಮಾನತೆಯ ಆಶಯಕ್ಕೆ ವಿರುದ್ಧವಾದ ಒಂದು ಅಂಶ ಎಂಬ ಅರ್ಜಿದಾರರ ಮನವಿಯನ್ನು ನ್ಯಾಯಾಲಯ ತಳ್ಳಿಹಾಕಿದೆ. ಹಾಗೆಯೇ ಲೇಖಕರ ಅನುಮತಿ ಇಲ್ಲದೆ ಪಠ್ಯಕ್ರಮದಲ್ಲಿ ಕೆಲವು ಭಾಗಗಳನ್ನು ತೆಗೆದು ಹಾಕಲು ಅವಕಾಶ ನೀಡಬಾರದೆಂದೂ ಅರ್ಜಿದಾರರ ಮನವಿ ಇತ್ತು. ಈ ಮನವಿಯನ್ನು ನ್ಯಾಯಾಲಯ ತಳ್ಳಿಹಾಕಿದೆ.

9ನೇ ತರಗತಿಯ ಇತಿಹಾಸ ಪಠ್ಯದಲ್ಲಿ ಈಗ ವೇದಕಾಲದ ಜನ ಜೀವನದ ಭಾಗದಲ್ಲಿ 'ವರ್ಣ'ಗಳ ವಿಚಾರವನ್ನು ಕೈಬಿಡಲು ಸೂಚಿಸಲಾಗಿದೆ. ವೇದಕಾಲದ ಸಮಾಜದಲ್ಲಿನ ಸಾಮಾಜಿಕ ಅಸಮಾನತೆಯ ಸಾಕ್ಷಿಯಾದ 'ವರ್ಣ ವ್ಯವಸ್ಥೆ'ಯ ಬಗೆಗಿನ ಪ್ರಸ್ತಾಪವನ್ನು ತೆಗೆದುಹಾಕಿ ಪ್ರಾಚೀನ ಭಾರತ ಇತಿಹಾಸವನ್ನು ವೈಭವೀಕರಿಸುವ ದುರುದ್ದೇಶ ಈ ಕ್ರಮದ ಹಿಂದಿರುವುದು ಸ್ಪಷ್ಟವಾಗಿದೆ. ಇದು ನಮ್ಮ ಇತಿಹಾಸ ಪರಂಪರೆಗಳ ಬಗೆಗೆ 'ಹೆಮ್ಮೆ' 'ಅಭಿಮಾನ' ಮೂಡಿಸುವ ಸಂಘಪರಿವಾರದ ಪ್ರಯತ್ನಗಳ ಭಾಗವೇ ಆಗಿದೆ.

ನ್ಯಾಯಾಲಯದ ತೀರ್ಪು ಬಂದ ಕೂಡಲೇ ದೇಶದ ಕೇಸರಿ ಪಡೆ - ಸಂಘ ಪರಿವಾರ ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳುತ್ತಾ ಶಿಕ್ಷಣ ಕೇಸರೀಕರಣದ ಬೊಬ್ಬೆ ಕೇವಲ ರಾಜಕೀಯ ಪ್ರೇರಿತ ಎಂಬುದಕ್ಕೆ ನ್ಯಾಯಾಲಯದ ತೀರ್ಪುಸಾಕ್ಷಿ ಎನ್ನುತ್ತಾ, ದೇಶದ ಪ್ರಗತಿಪರ ಶಿಕ್ಷಣ ತಜ್ಞರು, ಶಿಕ್ಷಣ ಪ್ರೇಮಿಗಳ ಮೇಲೆ ಹರಿಹಾಯ್ದಿದ್ದಾರೆ.

ಎಡಪಕ್ಷಗಳು ಸರ್ವೋಚ್ಚ ನ್ಯಾಯಾಲಯದ ಈ ತೀರ್ಪಿನ ಬಗೆಗೆ ವಿಷಾದ ವ್ಯಕ್ತಪಡಿಸಿವೆ. ಈ ವಿಚಾರವನ್ನು ಸಂವಿಧಾನದ ಪೂರ್ಣ ಪೀಠಕ್ಕೆ ಕೊಂಡೊಯ್ಯುವುದು ಅಗತ್ಯ ಎಂದು ಅವು ತಿಳಿಸಿವೆ.

ನ್ಯಾಯಾಲಯದ ಈ ತೀರ್ಪು ಇಡೀ ದೇಶದ ಎಲ್ಲ ಹಂತಗಳ ಶಿಕ್ಷಣ ವ್ಯವಸ್ಥೆಗಳ ಬಗೆಗಿನ ತೀರ್ಪು ಎಂಬಂತೆ ಕೋಮುವಾದಿಗಳು ಹಿಗ್ಗಿ ಹೀರೇಕಾಯಿಯಾಗಿದ್ದಾರೆ, ಹಲವು ಜನ ಶಿಕ್ಷಣ ಪ್ರೇಮಿಗಳು ತೀರ್ಪಿನಿಂದ ಗೊಂದಲಕ್ಕೊಳಗಾಗಿದ್ದಾರೆ.

1998ರಲ್ಲಿ ದೆಹಲಿಯಲ್ಲಿ ನಡೆದ ಶಿಕ್ಷಣ ಸಚಿವರುಗಳ ಸಮ್ಮೇಳನದಲ್ಲಿ ಸಮ್ಮೇಳನ ಆರಂಭದ ವಿಧಾನವೇ ವಿವಾದವಾಗಿ ಶಿಕ್ಷಣ ಕೇಸರೀಕರಣದ ಪಿತೂರಿ ಬಟಾಬಯಲಾಗಿ 16 ರಾಜ್ಯಗಳ ಶಿಕ್ಷಣ ಸಚಿವರು ಕೇಂದ್ರ ಸರ್ಕಾರದ ಈ ಸಂಚನ್ನು ವಿರೋಧಿಸಿ ಸಮ್ಮೇಳನ ಬಹಿಷ್ಕರಿಸಿ ಹೊರನಡೆದಿದ್ದರು.

ಆ ಸಮ್ಮೇಳನದಲ್ಲಿ ರಾಷ್ಟ್ರಗೀತೆಗೆ ಬದಲಾಗಿ ಸರಸ್ವತಿ ವಂದನೆಯೊಂದಿಗೆ ಸಮ್ಮೇಳನದ ಕಲಾಪವನ್ನು ಆರಂಬಿಸಲಾಯಿತು. ರಾಷ್ಟ್ರೀಯ ಪಠ್ಯಕ್ರಮ ನೀತಿಯಲ್ಲಿ ಅಂದು ಘೋಷಿಸಲಾಗಿದ್ದ ಅಂಶಗಳು ಆಘಾತಕಾರಿಯಾಗಿದ್ದವು.

- 3ನೇ ತರಗತಿಯ ನಂತರ ಪದವಿ ಹಂತದವರೆಗೆ ಸಂಸ್ಕೃತ ಭಾಷೆಯ ಕಲಿಕೆಯನ್ನು ಕಡ್ಡಾಯಗೊಳಿಸುವುದು.
- ಯಾವುದೇ ಸಾಮಾಜಿಕ ಹಿನ್ನೆಲೆಯನ್ನು ಪರಿಗಣಿಸದೆ ರಾಷ್ಟ್ರವ್ಯಾಪಿಯಾಗಿ ಎಲ್ಲೆಡೆ ಶಾಲಾ ಕಾಲೇಜುಗಳಲ್ಲಿ 'ಸರಸ್ವತಿ ವಂದನೆ' ಯನ್ನು ಕಡ್ಡಾಯಗೊಳಿಸುವುದು.
- ಹೆಣ್ಣು ಮಕ್ಕಳಿಗೆ 'ಗೃಹ ನಿರ್ವಹಣೆ' ಕೋರ್ಸನ್ನು ಆರಂಬಿಸುವುದು.

ಸಂಸ್ಕೃತ ಭಾಷೆಯನ್ನು ಕಡ್ಡಾಯಗೊಳಿಸುವುದು ಎಂದರೆ ಸಹಸ್ರಾರು ವರ್ಷಗಳ ಕಾಲ ದಲಿತ-ಶೂದ್ರ- ಮಹಿಳೆಯರಿಗೆ ಸಂಸ್ಕೃತ ಕಲಿಕೆಯನ್ನು ಶಿಕ್ಷಣವನ್ನು ವಂಚಿಸಿದ- ಶೋಷಕ ಜಾತಿವಾದಿ, ಪುರೋಹಿತಶಾಹಿ ವ್ಯವಸ್ಥೆಯ ದರ್ಪವನ್ನು ಈಗ ಮತ್ತೊಂದು ವಿಧಾನದಲ್ಲಿ

ಪುಟ 10 ಕ್ಕೆ

ದುಡಿಯುವ ವರ್ಗದ ಶತ

ಕಾರ್ಮಿಕ ಆಯೋ

1999'ರ ಅಕ್ಟೋಬರ್ 15ರಂದು ಡಾ.ರವೀಂದ್ರ ವರ್ಮಾರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ 2ನೇ ರಾಷ್ಟ್ರೀಯ ಕಾರ್ಮಿಕ ಆಯೋಗವು 2002'ರ ಜೂನ್ 2ರಂದು ತನ್ನ ವರದಿಯನ್ನು ಸರ್ಕಾರಕ್ಕೆ ನೀಡಿದೆ. 2 ಸಂಪುಟಗಳ 1751 ಪುಟಗಳುಳ್ಳ, ವರದಿಯು ಕಾರ್ಮಿಕ ಕಾನೂನುಗಳ ಪರಾಮರ್ಶೆ, ಕಾರ್ಮಿಕರ ಸಾಮಾಜಿಕ ಸುರಕ್ಷತೆ, ಮಹಿಳಾ ಮತ್ತು ಬಾಲ ಕಾರ್ಮಿಕರು, ಕೌಶಲ್ಯ ಅಭಿವೃದ್ಧಿ, ಆಡಳಿತ, ಅಸಂಘಟಿತ ವಲಯ ಇತ್ಯಾಧಿಯಾಗಿ 12 ಅಧ್ಯಾಯಗಳನ್ನು ಹೊಂದಿದೆ.

ಜಾಗತಿಕ ಬದಲಾವಣೆ ಮತ್ತು ತಂತ್ರಜ್ಞಾನದ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಪೂರಕ ಮಾರ್ಪಾಡ... ಕಾರ್ಮಿಕರಿಗೆ ಕನಿಷ್ಠ ಹಂತದ ರಕ್ಷಣೆ ಒದಗಿಸಲು ಅಗತ್ಯವಿರುವ ವಿಸ್ತೃತ ಕಾನೂನಿನ ರಚನ... ಕಾರ್ಮಿಕ ಆಯೋಗವು ಕಾರ್ಮಿಕರಿಗಿರುವ ಕನಿಷ್ಟ ಹಕ್ಕುಗಳನ್ನು ಕಿತ್ತುಕೊಳ್ಳುವ, ಜಾಗತೀ... ಮಾಡಿದೆ. ಅದರತ್ತ ಒಂದು ಸಮಗ್ರ ನೋಟ ಇಲ್ಲಿನ ಲೇಖನದಲ್ಲಿದೆ. ಕಾಂ. ವಿ.ಜೆ.ಕೆ.ನಾಯರ್ ... ಮಂಡಿಸಿದ ವಿಮರ್ಶಾತ್ಮಕ ಅಂಶಗಳ ಆಧಾರದಲ್ಲಿ ಈ ಲೇಖನ...

ಪ್ರಸ್ತುತ ಸಂಘಟಿತ ಕಾರ್ಮಿಕರ ಕಾನೂನುಗಳನ್ನು ಪರಾಮರ್ಶಿಸಿ, ಜಾಗತಿಕ ಬದಲಾವಣೆ, ತಂತ್ರಜ್ಞಾನದ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಪೂರಕ ಮಾರ್ಪಾಡುಗಳನ್ನು ಸೂಚಿಸಲೆಂದು ಮತ್ತು ಅಸಂಘಟಿತ ವಲಯದ ಕಾರ್ಮಿಕರಿಗೆ ಕನಿಷ್ಠ ಹಂತದ ರಕ್ಷಣೆ ಒದಗಿಸಲು ಅಗತ್ಯವಿರುವ ವಿಸ್ತೃತ ಕಾನೂನಿನ ರಚನೆಗೆ ಶಿಫಾರಸ್ಸುಗಳನ್ನು ನೀಡಲೆಂದು ಈ ಆಯೋಗವನ್ನು ಕೇಂದ್ರದ ಎನ್.ಡಿ.ಎ. ಸರ್ಕಾರ ರಚಿಸಿತು. ಆದರೆ, ಕೇಂದ್ರ ಕಾರ್ಮಿಕ ಸಂಘಟನೆಗಳೊಂದಿಗೆ ಮುಕ್ತ ಚರ್ಚೆ ಅಥವಾ ಅವರ ಅಭಿಪ್ರಾಯಗಳನ್ನು ಪರಿಗಣಿಸದ, ಆಯೋಗದ ಸದಸ್ಯರ ಆಯ್ಕೆ ಮತ್ತು ವಿಷಯ ಸೂಚಿಯನ್ನು ಸರ್ಕಾರ ಏಕಪಕ್ಷೀಯವಾಗಿ ನಿರ್ಧರಿಸಿದ ಕಾರಣದಿಂದಾಗಿ, ಆಯೋಗವು ವಿವಾದದ ಕೇಂದ್ರ ಸ್ಥಾನವಾಗಿದೆ.

ಅನಗತ್ಯ ಪ್ರಲಾಪ.

ಆಯೋಗದ ಸಂರಚನೆ ಹಾಗೂ ಕಾರ್ಯಸೂಚಿ, ಆಯೋಗವನ್ನು ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಬಿಡದು. ಕೇಂದ್ರದ NDA ಸರ್ಕಾರದ ಏಕ ಪಕ್ಷೀಯ ನಿರ್ಧಾರ ಸರಿಯಲ್ಲ ಎಂದು ತಮ್ಮ ತಾತ್ವಿಕ ವಿರೋಧವನ್ನು ವ್ಯಕ್ತಪಡಿಸಿದ ಸಿಐಟಿಯು ಮತ್ತಿತರೆ ಸಂಘಟನೆಗಳು ಆಯೋಗವನ್ನು ವಿರೋಧಿಸಿದವು; ಆಯೋಗದೊಂದಿಗೆ ಸಹಕರಿಸದೆ ಪ್ರತಿಭಟಿಸಿದವು. ಈ ಕುರಿತು ಆಯೋಗವು ತನ್ನ ವರದಿಯಲ್ಲಿ ಸಿಐಟಿಯು ಹಾಗು ಇತರೆ ಸಂಘಟನೆಗಳ ನಿಲುವು ಆಧಾರರಹಿತ ಮತ್ತು ಅನಗತ್ಯ ಪೂರ್ವಗ್ರಹಗಳಿಂದ ಕೂಡಿದ್ದು ಎಂದು ದಾಖಲಿಸಿದೆ.

ಇತಿಹಾಸ ಪುನರ್ ರಚಿಸುವ ಕಾಯಕ.

ವರದಿಯ ಮೊದಲ ಎರಡು ಅಧ್ಯಾಯಗಳು ಭಾರತದ ಕಾರ್ಮಿಕ ಸಂಘಟನೆಗಳ ಹುಟ್ಟು ಬೆಳವಣಿಗೆಯಿಂದ ಹಿಡಿದು ಇಂದಿನ ಜಾಗತೀಕರಣದ ಯುಗದವರೆಗೆ ಕಾರ್ಮಿಕ ಸಂಘಟನೆಗಳನ್ನು ವಿಮರ್ಶಿಸುವ ಯತ್ನ ನಡೆಸಿವೆ. ಎನ್.ಡಿ.ಎ ಸರ್ಕಾರದ ಕಾಯಕವಾದ ಇತಿಹಾಸ ಪುನರ್ ರಚಿಸುವ ಕಾಯಕವನ್ನು ಈ ವರದಿಯ ಮೂಲಕವು ಮಾಡಲು ಯತ್ನಿಸಿದೆ. ಈ ವರದಿಯ ಪ್ರಕಾರ BMS ಅನ್ನು ಮತ್ತದೇ ಏಕಮಾತ್ರ ಕಾರ್ಮಿಕ ಸಂಘಟನೆಯಾಗಿ, ಪ್ರತಿಬಿಂಬಿಸಲಾಗಿದೆ. ಮತ್ತೊಂದೆಡೆ ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಹಾಗೂ ರಾಷ್ಟ್ರೀಯ ಚಳುವಳಿಯ ನೀತಿಗಳು ಮತ್ತು



ಕಾರ್ಯಕ್ರಮಗಳ ವಿರುದ್ಧವಾಗಿ ಕಮ್ಯುನಿಸ್ಟ್ ಚಳುವಳಿ ಕಾರ್ಯನಿರ್ವಹಿಸಿತೆಂದು ದಾಖಲಿಸಲಾಗಿದೆ. ಕಾರ್ಮಿಕ ಆಯೋಗದ ವರದಿಯಲ್ಲೂ ಕೇಂದ್ರ ಸರ್ಕಾರ ತನ್ನ ಸಂಕುಚಿತ ಪಕ್ಷಪಾತವನ್ನು ಮೆರೆದು, ತನ್ನ ಇತಿಹಾಸ ಪುನರ್ ರಚಿಸುವ ಕಾಯಕವನ್ನೇ ಮುಂದುವರಿಸಲು ಯತ್ನಿಸಿದೆ.

ಅಧ್ಯಯನದ ವಾಸ್ತವಿಕತೆಗೆ ನಿಲುಕದ ಶಿಫಾರಸ್ಸುಗಳು.

ಆಯೋಗವು ವರದಿ ತಯಾರಿಸಲು ಅಧ್ಯಯನ ತಂಡಗಳನ್ನು ನೇಮಕ ಮಾಡಿಕೊಂಡಿತ್ತು. ಕಾನೂನುಗಳ ಪರಾಮರ್ಶೆ, ಅಸಂಘಟಿತ ವಲಯಗಳ ಕಾರ್ಮಿಕರ ಸಮಗ್ರ ಕಾನೂನು ರಚನೆ, ಸಾಮಾಜಿಕ ಸುರಕ್ಷತೆ, ಮಹಿಳೆ ಮತ್ತು ಬಾಲ ಕಾರ್ಮಿಕರು, ಸಾಮಾಜಿಕ ಮತ್ತದರ ಪರಿಣಾಮ ಕುರಿತ ಪ್ರಮುಖ 6 ವಿಷಯಗಳನ್ನು ಈ ತಂಡಗಳು ಪ್ರತ್ಯೇಕವಾಗಿ ಅಧ್ಯಯನ ನಡೆಸಿ ವಿವರವಾದ ವರದಿಯನ್ನು ಆಯೋಗಕ್ಕೆ ನೀಡಿವೆ.

ಜಾಗತೀಕರಣದ ಪರಿಣಾಮ ಕುರಿತ ಯೋಗದ ವರದಿ ಬಹಳ ವಿವರವಾಗಿ ವಿಶ್ವಬ್ಯಾಂಕ್ ಮತ್ತು IMF ಉತ್ತೇಜಿತ ಜಾಗತೀಕರಣದ ನಕಾರಾತ್ಮಕ ಅಂಶಗಳನ್ನು ಸಮರ್ಪಕವಾಗಿ ಬಿಂಬಿಸಿದೆ. ಜಾಗತೀಕರಣ ಕುರಿತ ಕಾರ್ಮಿಕ ಸಂಘಟನೆಗಳ ವಿರೋಧವನ್ನು ಅನುಮೋದಿಸುವ - ಪ್ರತಿಪಾದಿಸುವ ರೀತಿಯಲ್ಲೇ ಇದೆ. ಚೀನಾದಲ್ಲಿನ ಪರಿಸ್ಥಿತಿ ಕುರಿತು ಸಹಾ ವಿವರವಾಗಿ ತಿಳಿಸಿದೆ. ಆದರೆ, ಮುಂದಿನ ತನ್ನ ಶಿಫಾರಸ್ಸುಗಳು ಮಾತ್ರ ಇದಕ್ಕೆ ತದ್ವಿರುದ್ಧವಾಗಿ ಮೂಡಿ ಬಂದಿವೆ. ಅಧ್ಯಯನದ ವಾಸ್ತವಿಕತೆಗೆ ನಿಲುಕದ ಶಿಫಾರಸ್ಸುಗಳಾಗಿ, ಆಧಾರ ಹೀನವಾಗಿ ಮುಂದಿನ ಅಧ್ಯಾಯಗಳು, ಪ್ರಮುಖವಾಗಿ ಕಾರ್ಮಿಕ ಕಾನೂನುಗಳ ಪರಾಮರ್ಶೆ ಕುರಿತ ಅಧ್ಯಾಯಗಳು ಹೊರಹೊಮ್ಮಿವೆ. ಇತರೆ ಅನೇಕ ವಿಚಾರಗಳ ಕುರಿತು ತನ್ನ ಪ್ರಾಮಾಣಿಕ ಉದ್ದೇಶಗಳನ್ನು ಪ್ರಕಟಿಸಿದೆ. ಆದರೆ ಅವುಗಳ ಜಾರಿಗೆ ಸಂಬಂಧಿಸಿದಂತೆ ಕಾರ್ಯಯೋಜನೆ ಸೂಚಿಸುವಲ್ಲಿ ಆರಂಭದಲ್ಲೆ ಅಂತ್ಯ ಕಾಣುವಂತಿದೆ ವರದಿ.

ಜಾಗತಿಕ ಪೈಪೋಟಿಗೆ ಸಿದ್ಧತೆ: ಸುಲಿವ ಸಂಸ್ಕೃತಿಗೆ ಬದ್ಧತೆ!

ಆಯೋಗವು ತನ್ನ ಅಧ್ಯಾಯ 5ರಲ್ಲಿ ಜಾಗತೀಕರಣದ ಹಾದಿಯಲ್ಲಿ ಬಹಳ ದೂರ ಸಾಗಿ ಬಂದಿರುವ ನಾವು, ಪ್ರಸ್ತುತ ಪರಿಸ್ಥಿತಿಗೆ ಅನುಗುಣವಾಗಿ ಜಾಗತಿಕ ಪೈಪೋಟಿಯಲ್ಲಿ ಯಶಸ್ಸು ಸಾಧಿಸಲು, ಮಾಲಿಕ - ಕಾರ್ಮಿಕರ ನಡುವೆ ಸಹಭಾಗಿತ್ವದೊಂದಿಗೆ, ಕಾಯಕ ಸಂಸ್ಕೃತಿ (ದುಡಿಯುವ ಸಂಸ್ಕೃತಿ) ಬೆಳೆಸಿಕೊಳ್ಳುವ ಅಗತ್ಯವಿದೆ ಎಂದು ಹೇಳಿದೆ. ಸಮಾಜಕ್ಕೆ ತನ್ನ ಋಣ ತೀರಿಸುವ ನಿಟ್ಟಿನಲ್ಲಿ ಕಾರ್ಮಿಕರು, ತಮ್ಮ ಕೊಡುಗೆ ನೀಡಬೇಕು, ಉತ್ಪಾದನೆ ಹೆಚ್ಚಿಸಬೇಕು, ತನ್ನ ಸಂಬಳಕ್ಕೆ ತಕ್ಕ ದುಡಿಮೆಯನ್ನು ಸಮಾಜಕ್ಕೆ ಹಿಂದಿರುಗಿಸಿ ನೀಡುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕು. ಸಂಬಳಕ್ಕಿಂತ ಕಡಿಮೆ ದುಡಿಮೆ ಮಾಡುವಂತಹ, ನೈತಿಕ ಹೊಣೆಗಾರಿಕೆ ಹೀನತೆಯಿಂದ ಹೊರಬರಬೇಕು. ಭಾರತದ ಕಾರ್ಮಿಕರ ಕಾಯಕ ಸಂಸ್ಕೃತಿಯ ಬಗ್ಗೆ ವಿದೇಶಿಯರಿಗೆ ಇರುವ ಮೆಚ್ಚುಗೆಯನ್ನು ಉಳಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಮಾಲೀಕರು ಸದಾ ಕಾರ್ಮಿಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ, ದುಡಿಮೆಯ ಸಂಸ್ಕೃತಿಯನ್ನು ಬೆಳೆಸಿಕೊಳ್ಳಲು ಪೂರಕ ವಾತಾವರಣ ನಿರ್ಮಿಸಬೇಕು- ಎಂದೆಲ್ಲಾ ಹೇಳಿದೆ.

ಈ ಎಲ್ಲಾ ನಿಟ್ಟಿನಲ್ಲಿ ಸಾಮಾಜಿಕ ಅಭಿವೃದ್ಧಿ ಆರ್ಥಿಕ ಅಭಿವೃದ್ಧಿ ಸಾಧಿಸಲು, ಪೂರಕವಾದ ವಾತಾವರಣ ನಿರ್ಮಿಸಬೇಕಿದೆ. ಕಾರ್ಮಿಕ ಕಾನೂನುಗಳೆ ಅದಕ್ಕೆ ಅಡ್ಡಿ ಎಂದು ಹೇಳಲಾಗದು, ಅದರ ಜೊತೆಗೆ ತೊಡಕಾಗಿರುವ ಇತರೆ ಅಂಶಗಳು ಸಹಾ ಇವೆ. ಉದಾ.ಆಡಳಿತ ಕೌಶಲ್ಯ, ಮೂಲಭೂತ ಸೌಕರ್ಯ, ಪ್ರಾಮಾಣಿಕತೆ ಇತ್ಯಾಧಿಗಳ ಕೊರತೆ. ಈ ಎಲ್ಲಾ ಕಾರಣಗಳನ್ನು ಪರಿಗಣಿಸಿ ನಮ್ಮ ಉದ್ದೇಶ ಅಭಿವೃದ್ಧಿ ಸಾಧಿಸಲು ಈ ಪರಾಮರ್ಶೆ ಅಗತ್ಯವಾಗಿದೆ ಎಂಬ ಅಂಶವನ್ನು ಆಯೋಗ ಹೇಳ ಬಯಸುತ್ತದೆ.


ಕಾರ್ಮಿಕ ಕಾನೂನುಗಳೆ ಅಡ್ಡಿ ಎಂದು ಹೇಳ ಬಯಸುವ ಕೆಲವರು, ಇರುವ ಕಾನೂನುಗಳನ್ನೆ - ಅಸಂಘಟಿತ ವಲಯಕ್ಕೆ ಸಮರ್ಪಕವಾಗಿ ಜಾರಿ ಮಾಡದಿರುವುದೇ ಸಮಾಜದ ಅಭಿವೃದ್ಧಿಗೆ ಇರುವ ತೊಡಕು ಎಂಬುದನ್ನು ಪರಿಗಣಿಸುವುದಿಲ್ಲ. ಸಿಐಟಿಯು ಸದಾ ಕಾರ್ಮಿಕ ಕಾನೂನುಗಳ ಪರಾಮರ್ಶೆಗೆ ಸಿದ್ಧವಿದೆ. ಆದಕಾರಣವೇ ಅಖಿಲ ಭಾರತ ಸಿಐಟಿಯು ಪ್ರಧಾನ ಕಾರ್ಯದರ್ಶಿಗಳಾದ ಕಾ.M.K.ಪಂಧೆ ಜಿ.ರಾಮಾನುಜಂ ಸಮಿತಿಯ ಸಕ್ರಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದರು. ಆದರೆ ಬಂಡವಾಳಗಾರರಿಗೆ ಮನಬಂದಂತೆ

ಮೇ ದಿನದ ಪರಂಪರೆಗೂ ಕುತ್ತು

ನಮ್ಮಲ್ಲಿ ಅತಿ ಹೆಚ್ಚು ರಜಾ ದಿನಗಳಿವೆ. ಒಂದು ಅಧ್ಯಯನದ ಪ್ರಕಾರ ಒಟ್ಟು ವಾರದ 7 ದಿನಗಳಲ್ಲಿ ಸಾಮಾನ್ಯ ಸರ್ಕಾರಿ ನೌಕರರ ಸರಾಸರಿ 3 ದಿನಗಳು ಮಾತ್ರ ಕಾರ್ಯ ನಿರ್ವಹಿಸುತ್ತಾನೆ. ಸರ್ಕಾರಿ ಕಛೇರಿಗಳು ಈ ರೀತಿ ಕಾರ್ಯನಿರ್ವಹಿಸಿದರೆ, ಅವರ ಮೇಲೆ ಅವಲಂಬಿತವಾಗಿರುವ ಆರ್ಥಿಕ ಚಟುವಟಿಕೆಗಳೆಲ್ಲಾ ಸ್ಥಭ್ದವಾಗುತ್ತವೆ ಎಂದು ವರದಿ ಉಲ್ಲೇಖಿಸುತ್ತದೆ. ಆದಕಾರಣ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳನ್ನು ಸಮಾಧಾನವಾಗಿ 3 ದಿನ ರಾಷ್ಟ್ರೀಯ ರಜೆ, (ಸ್ವತಂತ್ರ ದಿನ, ಗಣರಾಜ್ಯದಿನ ಮತ್ತು ಗಾಂಧಿ ಜಯಂತಿ) ಉಳಿದಂತೆ ತಮ್ಮ ಸಾಂಸ್ಕೃತಿಕ ಹಿನ್ನಲೆಯ ದೃಷ್ಟಿಯಿಂದ ವಾರ್ಷಿಕ 2 ದಿನ ಸಾರ್ವತ್ರಿಕ ರಜೆಯನ್ನು ಆಯಾಯ ರಾಜ್ಯಗಳು ನೀಡಬಹುದು. ಉಳಿದಂತೆ 10 ಐಚ್ಛಿಕ (ನಿರ್ಬಂಧಿತ) ರಜೆಗಳನ್ನು ನೀಡುವುದು. ಕರ್ನಾಟಕದಂತ ರಾಜ್ಯಗಳಲ್ಲಿ ಮೇ ದಿನ ಮತ್ತು ರಾಜ್ಯೋತ್ಸವ ಎರಡೂ ಸಾರ್ವತ್ರಿಕ ರಜಾ ದಿನಗಳು. ಉಳಿದಂತೆ ಇಲ್ಲಿನ ಧಾರ್ಮಿಕ ರಜಾ ದಿನಗಳು ಯುಗಾದಿ, ದಸರಾ ದೀಪಾವಳಿ, ಗಣೇಶ ಇತ್ಯಾಧಿ ಇವುಗಳಿಗೆ ಏನು ಮಾಡುವುದು? ಊಹೆಗೆ ಕರ್ನಾಟಕದಲ್ಲಿ ದಸರಾ ನಾಡಹಬ್ಬ ಅದಕ್ಕೆ ರಜೆ ನೀಡೋಣ, ಮತ್ತು ಕರ್ನಾಟಕದ ರಾಜ್ಯೋತ್ಸವಕ್ಕೆ ರಜೆ ನೀಡೋಣ ಎಂದಾದರೆ, ಇರುವ ಮೇ ದಿನದ ಪರಂಪರೆಗೆ (ರಜೆಗೆ) ಕುತ್ತು ಎಂದಲ್ಲವೇ ಅರ್ಥ? ಹೇಗಿದ್ದರು ಕೇಂದ್ರದ ಬಿಜೆಪಿ, ಬಿಎಂಎಸ್ ಸಂಘ ಪರಿವಾರದ್ದು ಕಾರ್ಮಿಕ ವರ್ಗದ ಅಂತರ ರಾಷ್ಟ್ರೀಯತೆಯಲ್ಲಿ ನಂಬಿಕೆ ಇಲ್ಲದ, ಮೇ ದಿನದ ಕಾಂತ್ರಿಕಾರಿ ಅಂತರಾಷ್ಟ್ರೀಯ ಕಾರ್ಮಿಕ ದಿನದ ಪರಂಪರೆ ಒಪ್ಪದ 'ವಿಶ್ವಕರ್ಮ ದಿನ' ಪ್ರತಿಪಾದಿಸುವ ತಾತ್ವಿಕತೆ. ಹೀಗಾಗಿ ಒಂದೇ ಕಲ್ಲಲ್ಲಿ ಎರಡು ಹಕ್ಕಿ ಎಂಬಂತೆ ಬಹುಶಃ ಈ 5 ದಿನಗಳ ಸಾರ್ವತ್ರಿಕ ರಜೆಯು ಶಿಫಾರಸ್ಸು ನೀಡಲಾಗಿದೆ. ಇನ್ನುಳಿದಂತೆ ಧಾರ್ಮಿಕ ಅಲ್ಪಸಂಖ್ಯಾತರು, ಭಾಷಾ ಅಲ್ಪಸಂಖ್ಯಾತರು ಅವರು ಹಬ್ಬಗಳಂತೂ ಸಾರ್ವತ್ರಿಕ ಎನ್ನಿಸಲು ಸಾಧ್ಯವೇ ಇಲ್ಲಾ ಬಿಡಿ. ಸರ್ಕಾರಿ ಕಛೇರಿಗಳಲ್ಲಿ ಬೇಕಾದರೆ ಐಚ್ಛಿಕ ರಜೆ (ನಿರ್ಬಂಧಿತ) ಪಡೆದುಕೊಳ್ಳಬಹುದು. ಆದರೆ ಉತ್ಪಾದನೆಯ ಕೇಂದ್ರಗಳಾದ ಕಾರ್ಖಾನೆಗಳಲ್ಲಿ ಕೆಲವೆಡೆ ಒಬ್ಬರಿಲ್ಲದಿದ್ದರು, ಕಾರ್ಖಾನೆ ನಡೆಯದು, ಪರಿಣಾಮ ಕೆಲವರು ಮಾತ್ರ ಇರುವ ಅಲ್ಪಸಂಖ್ಯಾತರು ಅವರು ಧಾರ್ಮಿಕ ರಜೆ ಪಡೆದುಕೊಳ್ಳುವಂತಿಲ್ಲ. 5 ದಿನಗಳ ವಾರದ ಕೆಲಸದ ಪದ್ಧತಿ ಇದ್ದಲ್ಲಿ ಒಂದು ವೇಳೆ ರಜಾ ದಿನವೇನಾದರೂ ಬಂದಲ್ಲಿ ಶನಿವಾರದಂದು ಸಹಾ ಕೆಲಸ ಮಾಡಬೇಕೆಂಬುದು ಶಿಫಾರಸ್ಸಿನ ಒಂದು ಅಂಶವಾಗಿದೆ.

ನಗಳ ಸಾಧನೆ ಕಸಿಯುವ
ವ ಶಿಫಾರಸುಗಳು

ಚಿಸಲೆಂದು ಮತ್ತು ಅಸಂಘಟಿತ ವಲಯದ ಗಳನ್ನು ಮಾಡಲೆಂದು ನೇಮಿಸಲಾದ 2ನೇ ಜಮಾನರಿಗೆ ನಿಷ್ಟವಾದ ಶಿಫಾರಸುಗಳನ್ನು ಾರಿನಲ್ಲಿ ತ್ರಿಪ್ರಕ್ಷೀಯ ಸಮಿತಿಯ ಸಭೆಯಲ್ಲಿ



ಯಾರಿಗೆ ನಮನ? ಶ್ರೀಮಂತರಿಗೆ, ಸುಲಿಗೆಕೋರರಿಗೆ?

ಗಾರಿಕೆಗಳ ಮುಚ್ಚಲು, ಕಾರ್ಮಿಕರನ್ನು ರಿಟ್ರೆಂಚ್ ಮಾಡಲು, ಕೆಲಸಕ್ಕೆ ಸೇರಿಸಿಕೊಳ್ಳಲು ಮತ್ತು ಲಸದಿಂದ ತೆಗೆಯಲು (Hire & Fire) ಅವಕಾಶ ದಗಿಸಲು ಪರಾಮರ್ಶೆ ಮಾಡುವುದಾದರೆ ಅದಕ್ಕೆ ದ್ಧ ವಿರೋಧ ಸಿಐಟಿಯುನದಾಗಿದೆ ಎನ್ನುತ್ತಾರೆ ಂ.M.K.ಪಂಥೆ.

ಮಾಲೀಕರ ಮತ್ತು ಕಾರ್ಮಿಕರ ನಡುವೆ ಹಭಾಗಿತ್ವ, ಸಾಮರಸ್ಯ ಬೆಳೆಯುವುದು ್ರಿಪಕ್ಷೀಯತೆಯ (Tripartism) ಮೂಲಕ. ಆದರೆ ಸರ್ಕಾರ ವಹಿಸಬೇಕಾದ ಪಾತ್ರದಿಂದ ಅದು ದೂರ ಸರಿಯುವ ಮೂಲಕ ಇದಕ್ಕೆ ಅವಕಾಶ ದಗದು. ಉದಾ.ಈ ಆಯೋಗ ರಚಿಸುವಾಗಲೇ ಐಟಿಯು ನಂತಹ ಪ್ರಮುಖ ಕಾರ್ಮಿಕ ಂಘಟನೆಯ ಅಭಿಪ್ರಾಯವನ್ನು ಗಮನಿಸದೆ, ರ್ಕಾರ ಏಕಪಕ್ಷೀಯವಾಗಿ ನಡೆದುಕೊಂಡದ್ದು, ರ್ಕಾರದ ನಕಾರಾತ್ಮಕ ಪಾತ್ರಕ್ಕೆ ಸಾಕ್ಷಿ.

ವೇತನ ಎಂಬುದು ಕಾರ್ಮಿಕರು ಸೃಷ್ಟಿಸುವ ಮೌಲ್ಯದ ಬೆಲೆಯಾಗಿದೆ.

ಕೆ.ಎನ್.ಉಮೇಶ್

ಆದರೆ ವಾಸ್ತವದಲ್ಲಿ ಾರ್ಮಿಕರು ಸೃಷ್ಟಿಸುವ ಮೌಲ್ಯದ ಬೆಲೆಯನ್ನು ಪೂರ್ಣಪ್ರಮಾಣದಲ್ಲಿ ಅವರಿಗೆ ನೀಡದೆ, ಅದನ್ನು ಕದಿಯುವ, ಕಸಿಯುವ ರಿಪಾಠವೇ ಹೆಚ್ಚು. ಆದಕಾರಣ ಕಾರ್ಮಿಕರಲ್ಲ ಮಾಜದ ಋಣ ತೀರಿಸಬೇಕಿರುವವರು, ದಲಿಗೆ ಸಮಾಜ ಅವರು ಸೃಷ್ಟಿಸಿದ ಮೌಲ್ಯದ ೆಲೆಯನ್ನು ಸಮರ್ಪಕವಾಗಿ ಅವರಿಗೆ ಂತಿರುಗಿಸಬೇಕಿದೆ. ಋಣ ತೀರಿಸುವ, ೃತಿಕತೆಯ ಪಾಠ, ದುಡಿಮೆಯ ಸಂಸ್ಕೃತಿಯೆಂಬ ರಿಕಲ್ಪನೆಗಳ ಮೂಲಕ ಕಾಯಕವೇ ಕೈಲಾಸ, Work is Worship ಫಲ ಪ್ರತಿಫಲ ಅಪೇಕ್ಷಿಸದೆ ರ್ಮ ನಿಭಾಯಿಸು, ಎಂಬ ವಿಚಾರಗಳನ್ನು ರೋಕ್ಷವಾಗಿ ಭೋದಿಸುತ್ತಾ ಕಾರ್ಮಿಕನು ೃಷ್ಟಿಸುವ ಮೌಲ್ಯ ಅಪಹರಿಸಲು ಂಡವಾಳಗಾರರಿಗೆ ಅನುವುಗೊಳಿಸುವ ಉದ್ಧೇಶ ಈ ಪರಾಮರ್ಶೆಯದು. ಆದಕಾರಣವೇ ಆಯೋಗ ೈರ್ ಅಂಡ್ ಫೈರ್ ನೀತಿ ಬೇಕು ಎನ್ನುವ ಬದಲು, ಂತಹ ನೀತಿಗಳಿಂದ ಉಂಟಾಗುವ ಪರಿಣಾಮ ದುರಿಸಲು ಅವಶ್ಯಕ ವ್ಯವಸ್ಥೆ ರೂಪಿಸಬೇಕು ಎಂಬ ಉಪದೇಶ ನೀಡುತ್ತದೆ.

ಾರ್ಮಿಕರ ಹಕ್ಕುಗಳ ಕಸಿಯುವುದೇ ಪರಾಮರ್ಶೆಯ ತ್ರಾಸೆ.

ಕಾರ್ಮಿಕ ಕಾನೂನುಗಳ ಬದಲಾವಣೆ ಅಥವಾ ದ್ದುಪಡಿ ಕುರಿತಂತೆ, ಆಯೋಗವು ಮಾಲೀಕರು ಯಸಿದ್ದನ್ನು ಹಾಗೂ ಶ್ರೀ.ಯಶವಂತ್ ನ್ಹಾರವರ ಬಜೆಟ್ ಭಾಷಣಕ್ಕೆ ಹೊಂದಿಕೆಯಾಗುವಂತಹ ಶಿಫಾರಸ್ಸುಗಳನ್ನೇ ಂತಿಮವಾಗಿ ನೀಡಿದ್ದಾರೆ.

ೈರ್ ಅಂಡ್ ಫೈರ್ ರಾಜ್ ವ್ಯವಸ್ಥೆಯೆಡೆಗೆ.

00 ರವರೆಗೆ ಕಾರ್ಮಿಕರನ್ನು ಹೊಂದಿರುವ ಲ್ಲಾ ಸಂಸ್ಥೆಗಳು ಕಾರ್ಮಿಕರನ್ನು ನೇಮಿಸುವ - ಜಾಗೊಳಿಸುವ ಸ್ವಾತಂತ್ರ್ಯವನ್ನು ಮುಕ್ತವಾಗಿ ಡಲಾಗಿದೆ. (Freedom to Hire & Fire) ಲೇಆಫ್ (Lay Off) ಅಥವಾ ರಿಟ್ರೆಂಚ್‌ಮೆಂಟ್ (Retrentchment) ಗೆ ಈ ಹಿಂದಿನಂತೆ ಪೂರ್ವ ಅನುಮತಿಯ ಅಗತ್ಯವಿಲ್ಲ. ರಿಟ್ರೆಂಚ್‌ಮೆಂಟ್‌ಗೆ ಪೂರ್ವದಲ್ಲಿ 2 ತಿಂಗಳ ಪೂರ್ವದಲ್ಲೇ ಕಾರ್ಮಿಕರಿಗೆ ನೋಟೀಸ್ ನೀಡಲಾಗುತ್ತದೆ. ಈ ನಿಟ್ಟಿನಲ್ಲಿ ಕೈಗಾರಿಕಾ ವ್ಯಾಜ್ಯಗಳ ಕಾಯ್ದೆ (I.D.Act) ಯ ಅಧ್ಯಾಯ 5A ಯ ಭಾಗವಾಗಿಸಬೇಕು ಹಾಗೂ 5ಆ ಯನ್ನು ಸಂಪೂರ್ಣವಾಗಿ ತೆಗೆದುಹಾಕಬೇಕು. ಒಂದು ವೇಳೆ 300 ಕ್ಕಿಂತ ಹೆಚ್ಚು ಕಾರ್ಮಿಕರಿರುವ ಕಾರ್ಖಾನೆಗಳನ್ನು ಮುಚ್ಚಬೇಕಿದ್ದಲ್ಲಿ ಸೂಕ್ತ ಸರ್ಕಾರಕ್ಕೆ ಅನುಮತಿ ಕೋರಿ 90 ದಿನಗಳ ಪೂರ್ವದಲ್ಲಿ ಅರ್ಜಿಯ ಪ್ರತಿಯನ್ನು ಸಂಬಂಧಿತ ಕಾರ್ಮಿಕ ಸಂಘಕ್ಕೂ ನೀಡಬೇಕು. 60 ದಿನಗಳೊಳಗಾಗಿ ಸೂಕ್ತ ಸರ್ಕಾರ ಅನುಮತಿ ನೀಡದಿದ್ದರೆ, ಅನುಮತಿ ನೀಡಲಾಗಿದೆ ಎಂದು ಭಾವಿಸತಕ್ಕದ್ದು.

ಈ ರೀತಿ ಮುಚ್ಚುವ, ಲೇಆಫ್ ಘೋಷಿಸುವ, ರಿಟ್ರೆಂಚ್ ಮಾಡುವ ಕಾರ್ಖಾನೆಗಳ ಕಾರ್ಮಿಕರಿಗೆ ವಿವಿಧ ರೀತಿಯ ಪರಿಹಾರವನ್ನು ಸೂಚಿಸುವ ಮೂಲಕ ಮಾಲೀಕರಿಗೆ ಮಹತ್ತರ ಕೊಡುಗೆಗಳನ್ನು ಪೋಷಿಸಲಾಗಿದೆ. 3 ವರ್ಷಗಳ ಕಾಲ ಸತತ ರೋಗಗ್ರಸ್ತವಾದ, ಅಥವಾ ದಿವಾಳಿಗೆ ಅರ್ಜಿ ಸಲ್ಲಿಸಿರುವ ಅಥವಾ ಕಂಪನಿಯನ್ನು ವೈಂಡ್ ಆಫ್ ಮಾಡಲು ಅರ್ಜಿ ಸಲ್ಲಿಸಿರುವ ಕಂಪನಿಗಳ ಕಾರ್ಮಿಕರು ಸಲ್ಲಿಸಿರುವ ಪ್ರತಿವರ್ಷದ ಸೇವೆಗೆ 30 ದಿನಗಳಂತೆ ವೇತನ ಪರಿಹಾರವನ್ನು ಕಾರ್ಖಾನೆ ಮುಚ್ಚಿದಲ್ಲಿ ನೀಡಬೇಕು, ರಿಟ್ರೆಂಚ್ ಮಾಡುವುದಿದ್ದಲ್ಲಿ 45 ದಿನಗಳ ವೇತನ, ಅಂತೆಯೇ ಲಾಭದಾಯಕ ಉದ್ದಿಮೆಗಳನ್ನು ಮುಚ್ಚುವಾಗ 45 ದಿನಗಳ ವೇತನ ಹಾಗೂ ರಿಟ್ರೆಂಚ್ ಮಾಡುವುದಿದ್ದಲ್ಲಿ ಈ ಪರಿಹಾರ 60 ದಿನಗಳ ವೇತನವನ್ನು ಸಲ್ಲಿಸಿರುವ ಪ್ರತಿವರ್ಷದ ಸೇವೆಗೆ ನೀಡಬೇಕೆಂಬುದು ಆಯೋಗದ ಶಿಫಾರಸ್ಸು.


ಪಾತಾಳವ ಹೊಕ್ಕು ಸಂಪತ್ತನ್ನು ಹೆಕ್ಕುವ ಶ್ರಮಿಕರಿಗೆ ಎಲ್ಲಿದೆ ನ್ಯಾಯ?

ಹೇಗಿದೆ ನೋಡಿ ಮಾಲೀಕರಿಗೆ ನೀಡಲಾಗಿರುವ ಉದಾರ ಕೊಡುಗೆ, ಉದಾರೀಕರಣದ ಯುಗದಲ್ಲಿ ಹೈರ್ ಅಂಡ್ ಫೈರ್ ರಾಜ್ ವ್ಯವಸ್ಥೆಗೆ ಪೂರಕ ಪರಿಸ್ಥಿತಿ ನಿರ್ಮಾಣಕ್ಕೆ ತಳಹದಿ ಆಯೋಗದ ವರದಿ.

ಮುಷ್ಕರಗಳ ಮೇಲೆ ಅಘೋಷಿತ ನಿಷೇದ.

'ನಿಧಾನಗತಿಯ ಕೆಲಸ' (Go Slow) ಮತ್ತು 'Work to Rule' ರೀತಿಯ ಕ್ರಮಗಳನ್ನು ಕೆಟ್ಟ ನಡತೆ ಎಂದು ಪರಿಗಣಿಸಬೇಕು. ಆದಕಾರಣ ಅಗತ್ಯ ಸೇವಾ ವಲಯಗಳಾದ ನೀರು ಸರಬರಾಜು, ವೈದ್ಯಕೀಯ ಸೇವೆ, ಒಳಚರಂಡಿ, ವಿದ್ಯುತ್ ಮತ್ತು ಸಾರಿಗೆ ಇತರೆಡೆಗಳಲ್ಲಿ ಮಾಲೀಕರ ಮತ್ತು ಕಾರ್ಮಿಕರ ನಡುವೆ ವ್ಯಾಜ್ಯವಿದ್ದು, ಮಾತುಕತೆ ಮೂಲಕ ಬಗೆಹರಿಯದಿದ್ದಲ್ಲಿ "ಮುಷ್ಕರ ಮತ" ನಡೆಸಬೇಕು (Strike Ballot). ಶೇ.51ರಷ್ಟು ಕಾರ್ಮಿಕರು ಮುಷ್ಕರದ ಪರ ಇದ್ದರೆ, ಮುಷ್ಕರ ನಡೆದಿದೆ ಎಂದು ಭಾವಿಸಬೇಕು. ವ್ಯಾಜ್ಯವನ್ನು ಕಡ್ಡಾಯ arbitrationಗೆ ಒಳಪಡಿಸಬೇಕು. ಯಾವುದೇ ಮುಷ್ಕರವನ್ನು ಪರಿಗಣಿಸಲಾದ ಕಾರ್ಮಿಕ ಸಂಘ ಮಾತ್ರವೇ (Negotiating Agent) ಮುಷ್ಕರ ಮತ (Strike Ballot) ದಲ್ಲಿ ಒಟ್ಟು ಕಾರ್ಮಿಕರ ಶೇ.51 ರಷ್ಟು ಮುಷ್ಕರ ಮತ ಪಡೆದಿದ್ದಲ್ಲಿ ಮಾತ್ರ ನಡೆಸಬಹುದು.

ಇಲ್ಲವಾದಲ್ಲಿ ಅದನ್ನು ಕಾನೂನುಬಾಹಿರವೆಂದು ಪರಿಗಣಿಸಬೇಕೆಂದು ವರದಿ ಶಿಫಾರಸ್ಸು ಮಾಡಿದೆ. ಅಂತೆಯೆ ಕಾನೂನು ಬಾಹಿರ ಲಾಕ್‌ಔಟ್‌ಗಳ ಬಗ್ಗೆ ಸಹಾ ನಮೂದಿಸಿದೆ. ಕಾನೂನು ಬಾಹಿರ ಮುಷ್ಕರ ಹೂಡಿದ್ದಲ್ಲಿ ಒಂದು ದಿನದ ಮುಷ್ಕರಕ್ಕೆ 3 ದಿನಗಳ ಸಂಬಳವನ್ನು ದಂಡವಾಗಿ ಕಳೆದುಕೊಳ್ಳ ಬೇಕಾಗುತ್ತದೆ. ಕಾನೂನು ಬಾಹಿರ ಮುಷ್ಕರಕ್ಕೆ ನಾಯಕತ್ವ ನೀಡುವ ಕಾರ್ಮಿಕರ ಸಂಘದ ಪರಿಗಣನೆಯನ್ನು 2 ಅಥವಾ 3 ವರ್ಷಗಳ ಕಾಲ ನೊಂದಣಿಯನ್ನು ಮಾಡಿಸಿಕೊಳ್ಳದಂತೆ ಅನರ್ಹಗೊಳಿಸಬೇಕೆಂದು ಆಯೋಗ ಹೇಳಿದೆ.

ಕಾರ್ಮಿಕ ಸಂಘಗಳ ಅಸ್ತ್ರವಾದ ಮುಷ್ಕರವನ್ನು ನೇರವಾಗಿ ಅಲ್ಲದಿದ್ದರೂ, ಪರೋಕ್ಷವಾಗಿ ಇಲ್ಲದಂತೆ ಮಾಡಲು ಒಂದು ಅಘೋಷಿತ ನಿಷೇಧವನ್ನು ಹೇರಲಾಗಿದೆ. ಲಾಕ್‌ಔಟ್‌ಗಳನ್ನು ಮುಷ್ಕರಕ್ಕೆ ಹೋಲಿಸುವ ಯತ್ನ ನಡೆಸಲಾಗಿದೆ.

ಗುತ್ತಿಗೆ ಪದ್ಧತಿಗೆ ಒತ್ತು.

ಕಾರ್ಖಾನೆಗಳಲ್ಲಿ ಕಾರ್ಮಿಕರ ಸಂಖ್ಯೆಯನ್ನು ನಿಯಂತ್ರಿಸಲು ಸಡಿಲತೆ ಇರಬೇಕೆಂದು ಪ್ರಸ್ತಾಪಿಸುತ್ತಾ, ಮೂಲ ಉತ್ಪಾದನೆಯಲ್ಲಿ ಅಥವಾ ಸೇವೆಗಳಲ್ಲಿ ಗುತ್ತಿಗೆ ಕಾರ್ಮಿಕರನ್ನು ನೇಮಿಸಿಕೊಳ್ಳುವಂತಿಲ್ಲಾ ಆದರೆ ಕೆಲವು ಕಾಲಾವಧಿಗೆ ಸೀಮಿತವಾಗಿ ಅಗತ್ಯಬಿದ್ದಲ್ಲಿ ನೇಮಿಸಿಕೊಳ್ಳಬಹುದು. ಮೂಲ ಉತ್ಪಾದನೆಯ ವಲಯಗಳಲ್ಲದೆ ಇತರೆ ಸೇವೆಗಳಲ್ಲಿ ಉದಾಹರಣೆಗೆ ಕ್ಯಾಂಟೀನ್, ವಾಚ್ ಅಂಡ್ ವಾರ್ಡ್(ಸೆಕ್ಯುರಿಟಿ), ಸ್ವಚ್ಛ ಕಾರ್ಯಗಳಲ್ಲಿ ಬೇಕಾದರೆ ಗುತ್ತಿಗೆ ಕಾರ್ಮಿಕರನ್ನು ನೇಮಿಸಿಕೊಳ್ಳಬಹುದೆಂದು ವರದಿ ಹೇಳಿದೆ. ಈ ಸೇವೆಗಳಲ್ಲಿ ಒಂದು ವೇಳೆ ಕಾಯಂ ಕಾರ್ಮಿಕರಿದ್ದರೆ, ಗುತ್ತಿಗೆ ನೀಡುವಂತಿಲ್ಲ ಆದರೆ ಸಂಬಂಧಿತ ಪರಿಗಣಿಸಲಾದ ಕಾರ್ಮಿಕ ಸಂಘದಿಂದ ಚರ್ಚಿಸಿ, ಅದರ ಸಮ್ಮತಿಯೊಂದಿಗೆ ನೇಮಿಸಿಕೊಳ್ಳಬಹುದೆನ್ನುತ್ತದೆ ವರದಿ, ಅಂದರೆ ಗುತ್ತಿಗೆ ಕಾರ್ಮಿಕರ ನೇಮಕಕ್ಕೆ ಮುಕ್ತ ಅವಕಾಶ.

ಒಟ್ಟಾರೆ ಕಾರ್ಮಿಕರ ಸಂಖ್ಯೆಯನ್ನು ಕಡಿತ ಮಾಡಿ, ಗುತ್ತಿಗೆ ಕಾರ್ಮಿಕರನ್ನು ಹೆಚ್ಚಿಗೆ ಮಾಡಿಕೊಂಡು, ಉತ್ಪಾಧನೆಯಂತೆ ಉತ್ಪಾದನೆ ನಡೆಸಿ, ಲಾಭ ಜಾಸ್ತಿ ಮಾಡಿಕೊಂಡು, ಬೇಡವೆಂದಾಗ ಕಾರ್ಮಿಕರ ಸಂಖ್ಯೆ 300 ರೊಳಗೆ ಇದ್ದರೆ ಮುಚ್ಚಬಹುದಲ್ಲ, ಅದಕ್ಕೆ ಗುತ್ತಿಗೆ ಪದ್ಧತಿಗೆ ಒತ್ತನ್ನು ವರದಿಯ ಶಿಫಾರಸ್ಸು ನೀಡಿದೆ.

ಕಾರ್ಮಿಕರ ಐಕ್ಯತೆ ಮುರಿಯುವ ಯತ್ನ

ಮಹಿಳಾ ಕಾರ್ಮಿಕರಿಗೆ ಸದಸ್ಯತ್ವ ಆಧಾರಿತವಾಗಿ ಪ್ರತ್ಯೇಕ ಸಂಘವನ್ನು (MBO) ಕಾರ್ಮಿಕ ಸಂಘಗಳ ಕಾಯ್ದೆ ಅಡಿಯಲ್ಲಿ ನೊಂದಾಯಿಸಲು ಅವಕಾಶ ಕಲ್ಪಿಸಬೇಕೆನ್ನುತ್ತದೆ ವರದಿಯ ಶಿಫಾರಸ್ಸು. ಅಂತೆಯೇ ಹೆಚ್ಚು ವೇತನ ಪಡೆಯುವ ನೌಕರರು ಮತ್ತು ಸಂಬಳ ಆಧಾರಿತವಲ್ಲದ ಎಲ್ಲಾ ವಿಧದ ಸೂಪರ್‌ವೈಸರ್‌ಗಳನ್ನು ಕಾರ್ಮಿಕ ಕಾನೂನುಗಳ ವ್ಯಾಪ್ತಿಯಿಂದ ಹೊರಗೆ ಇಡಲು ಶಿಫಾರಸ್ಸು ಸೂಚಿಸಿದೆ. ಇದರ ಒಟ್ಟಿಗೆ ಪರಿಗಣಿಸಲ್ಪಡುವ ಕಾರ್ಮಿಕ ಸಂಘ (Bargaining Agent) ಆಯ್ಕೆಗೆ ಗುಪ್ತ ಮತದಾನದ ಅವಕಾಶ ಇಲ್ಲ ಈ ವರದಿಯ ಪ್ರಕಾರ. ಅಂದರೆ ಕಾರ್ಮಿಕರ ಐಕ್ಯತೆಯನ್ನು ಲಿಂಗಾಧಾರಿತವಾಗಿ,

ಶತಮಾನಗಳ ಸಾಧನೆ ಕಸಿಯಲು .... ಸಾರಲಾಗಿದೆ ಸಮರ

ಕಾರ್ಮಿಕ ಕಾನೂನುಗಳ ಬದಲಾವಣೆ, ಹೈರ್ ಅಂಡ್ ಫೈರ್‌ಗೆ ಮಾಲೀಕರಿಗೆ ಮುಕ್ತ ಅವಕಾಶ, ಮುಷ್ಕರಗಳ ಮೇಲೆ ಅಘೋಷಿತ ನಿಷೇಧ, ಎಲ್ಲಾ ಉದ್ಯೋಗಗಳನ್ನು ಗುತ್ತಿಗೆಗೆ ವಹಿಸಲು ಅನುವು, ಕಾರ್ಮಿಕ ಸಂಘಗಳ ಮಾನ್ಯತೆಗೆ ಗುಪ್ತ ಮತದಾನ ನಿರಾಕರಣೆ, ಮುಷ್ಕರ ಮತ್ತು ಲಾಕ್ ಔಟ್‌ಗಳನ್ನು ಒಂದೇ ರೀತಿ ಪರಿಗಣಿಸಿ ದಂಡ-ಶಿಕ್ಷೆ ವಿಧಿಸುವ ಆಯೋಗದ ಶಿಫಾರಸ್ಸುಗಳ ಮೂಲಕ ಬಂಡವಾಳಶಾಹಿ ವರ್ಗವು, ದುಡಿಯುವ ವರ್ಗದ ಶತಮಾನಗಳ ಅಂತರಾಷ್ಟ್ರೀಯ, ರಾಷ್ಟ್ರೀಯ ಹೋರಾಟದ ಫಲವಾಗಿ ಸಾಧಿಸಲಾಗದ ಹಕ್ಕುಗಳ ಸಾಧನೆಯನ್ನು ಕಸಿಯಲು ರಾಷ್ಟ್ರದ ದುಡಿಯುವ ವರ್ಗದ ಮೇಲೆ ಸಮರವನ್ನೇ ಸಾರಿದೆ.

ಈ ಸಮರದಲ್ಲಿ ಪ್ರತಿಯೊಬ್ಬರು ಯಾರು ಯಾರ ಪರವೆಂದು ನಿರ್ಧಿಷ್ಟವಾಗಿ ಘೋಷಿಸಿಕೊಳ್ಳಬೇಕಿದೆ. ದುಡಿಯುವ ವರ್ಗ ಅಭೂತಪೂರ್ವ ಐಕ್ಯತೆಯೊಂದಿಗೆ ಮಹತ್ತರ ತ್ಯಾಗ ಬಲಿದಾನಗಳಿಂದ ಗಳಿಸಿದ ಶತಮಾನಗಳ ಸಾಧನೆ ಉಳಿಸಿಕೊಳ್ಳಲು ಸನ್ನದ್ಧಾಗಿ, ಸಮರಕ್ಕಿಳಿಯಬೇಕಿದೆ. ಆಳುವ ವರ್ಗಗಳ ಪಿತೂರಿಯನ್ನು - ಆಯೋಗದ ಕಾರ್ಮಿಕ ವಿರೋಧಿ ನೀತಿಗಳು ಜಾರಿಯಾಗದಂತೆ ತಡೆದು ಹಿಮ್ಮೆಟ್ಟಿಸಬೇಕಿದೆ.

.......ಕಾರ್ಮಿಕ ಆಯೋಗದ ಶಿಫಾರಸುಗಳು

ಪುಟ 7 ರಿಂದ

ವೇತನ ಆಧಾರಿತವಾಗಿ, ಕೆಲಸದ ಆಧಾರಿತವಾಗಿ ಮುರಿಯಲು ಅವರ ಸಂಘಟಿತ ಶಕ್ತಿಯನ್ನು ಕುಗ್ಗಿಸಿ, ಮುಷ್ಕರದ ಅಸ್ತ್ರವನ್ನು ಇದ್ದು ಇಲ್ಲದಾಗಿಸುವ ಪ್ರಯತ್ನದಲ್ಲಿ ವರದಿ ತೊಡಗಿದೆ.

ಕೈಗಾರಿಕಾ ಸಂಬಂಧಗಳು.

ಪ್ರಸ್ತುತ ಕಾರ್ಮಿಕ ಕಾನೂನುಗಳನ್ನು 4 ಅಥವಾ 5 ಗುಂಪುಗಳಾಗಿ ವಿಂಗಡಿಸಿ, ಎಲ್ಲಾ ಕಾನೂನು ಪರಿಭಾಷೆಯಲ್ಲೂ 'ಕಾರ್ಮಿಕ' ಪದದ ಅರ್ಥ ಒಂದೇ ಇರಬೇಕು. ಕೈಗಾರಿಕಾ ಸಂಬಂಧಗಳು, ವೇತನಗಳು, ಸಾಮಾಜಿಕ ಸುರಕ್ಷತೆ, ಸಂರಕ್ಷತೆ, ಕಲ್ಯಾಣ ಮತ್ತು ಕೆಲಸದ ಸ್ಥಿತಿ ಮತ್ತು ಇತರೆಯಂತೆ ಗುಂಪುಗಳಾಗಿ ವಿಂಗಡಿಸಿದರು. ಪ್ರಸ್ತುತ ಇರುವ ವಿವಿಧ ಕಾನೂನುಗಳನ್ನೆಲ್ಲಾ ಒಂದೇ ಒಂದು ಸಮಗ್ರ ಕಾರ್ಮಿಕ ಕಾನೂನಿನ ಅಧಿನಿಯುಮದಡಿ ತರಬೇಕೆಂದು ಆಯೋಗ ಪ್ರಸ್ತಾಪಿಸಿದೆ. ಕೇಂದ್ರ ಹಾಗೂ ರಾಜ್ಯಗಳ ಎಲ್ಲಾ ಕಾರ್ಮಿಕ ಕಾನೂನಿಗೆ ಸಂಬಂಧಿತ ಕಾಯ್ದೆಗಳನ್ನು ಒಂದು ಸಮಗ್ರ ಕಾಯ್ದೆ/ ಕಾನೂನಿನ ಅಡಿ ತರುವುದು ಇದರ ಉದ್ದೇಶ. ಆಯೋಗ ಈ ಎಲ್ಲಾವನ್ನು ಒಟ್ಟಿಗೆ ಸೇರಿಸಿ 'ಕಾರ್ಮಿಕ ಮಾಲೀಕ ಸಂಬಂಧಗಳ ಕಾನೂನು' (Labour Management Relations Law) ಅಥವಾ 'ಕಾರ್ಮಿಕರ ಮಾಲೀಕರ ಸಂಬಂಧಗಳ ಕುರಿತ ಕಾನೂನು' (Law on Labour Management Relations) ಎಂದು ತರಬಹುದೆಂದು ಪ್ರಸ್ತಾಪಿಸಿದೆ. ಅಂತೆಯೆ 19 ಅಥವಾ ಅದಕ್ಕಿಂತ ಕಡಿಮೆ ಕಾರ್ಮಿಕರಿರುವ ಕಾರ್ಖಾನೆಗಳಿಗೆ ಬೇರೆಯೆ ಪ್ರತ್ಯೇಕ ಕಾನೂನನ್ನು ಪ್ರಸ್ತಾಪಿಸುತ್ತದೆ.

ಪ್ರತ್ಯೇಕ ಕಾರ್ಖಾನೆಗಳಿಗೆ ಪ್ರತ್ಯೇಕ ಕಾನೂನು, ಪ್ರತ್ಯೇಕ ವೇತನ ನಿಗದಿ ಮಂಡಳಿಗಳು (Wage Boards) ಅಗತ್ಯವಿಲ್ಲ ಎನ್ನುವುದು ಆಯೋಗದ ಶಿಫಾರಸ್ಸು. 1976'ರ ವ್ಯಾಪಾರ ಉತ್ತೇಜನ ಆಧಾರಿತ ನೌಕರರ (ಸೇವಾ ನಿಯಮಗಳ) ಕಾಯ್ದೆಯನ್ನು ರದ್ದು ಮಾಡಬೇಕೆನ್ನುತ್ತದೆ ಆಯೋಗ.

ಪರಿಗಣಿಸಲ್ಪಡುವ ಕಾರ್ಮಿಕ ಸಂಘದ (Negotiating Agent) ಆಯ್ಕೆ ಚೆಕ್ ಆಫ್ ಪದ್ಧತಿ ಮೂಲಕ ಮಾತ್ರ ಗುಪ್ತ ಮತದಾನ ಸಾಧುವಲ್ಲ ಎನ್ನುತ್ತದೆ ಆಯೋಗ. ಯಾವ ಸಂಘಕ್ಕೆ ಶೇ. 66 ರಷ್ಟು ಸದಸ್ಯರ ಚೆಕ್ ಆಫ್ ಲಭ್ಯತೆ ಇರುತ್ತದೋ ಅವರನ್ನು ಮಾನ್ಯ ಮಾಡಲಾಗುವುದು. ಶೇ.25 ಕ್ಕೂ ಹೆಚ್ಚು ಬೆಂಬಲವಿರುವ ಸಂಘಕ್ಕೆ ಪ್ರಮಾಣಾತ್ಮಕ ಪ್ರಾತಿನಿಧ್ಯ ನೀಡಲಾಗುವುದು.

ಅಂದರೆ ಮುಷ್ಕರಕ್ಕೆ ಗುಪ್ತ ಮತದಾನವನ್ನು ಕಡ್ಡಾಯ ಮಾಡುವ ಆಯೋಗ ಕಾರ್ಮಿಕರ Negotiating Agent ಆಯ್ಕೆ ಮಾಡುವಾಗ ಗುಪ್ತ ಮತದಾನ ಸಾಧುವಲ್ಲ ಎಂದರೆ, ಇದರ ಹಿಂದಿನ ಉದ್ದೇಶ ಕಾರ್ಮಿಕರ ಹಕ್ಕುಗಳ ಕಸಿಯುವುದೇ ಹೊರತು ಬೇರೇನೂ ಅಲ್ಲ.

ಮಹಿಳಾ ಕಾರ್ಮಿಕರು ಮತ್ತು ಬಾಲ ಕಾರ್ಮಿಕರು:

ಈ ಕುರಿತ ಅಧ್ಯಯನ ತಂಡ ಸಮಾನ ವೇತನ ಕಾಯ್ದೆ (ERA) ಕುರಿತು ವಿವರವಾದ ಹೇಳಿಕೆಯನ್ನು ನೀಡಿದ್ದರೂ ಸಹಾ ಆಯೋಗ ಮಾತ್ರ ಆ ಯಾವುದನ್ನು ತನ್ನ ಶಿಫಾರಸ್ಸಿನಲ್ಲಿ ಸೇರಿಸಿಲ್ಲ, ಮಾತ್ರವಲ್ಲ ಸಮಾನ ಕೆಲಸಕ್ಕೆ - ಸಮಾನ ವೇತನ ಎಂಬ ಸಂವಿಧಾನಿಕ ಪರಿಕಲ್ಪನೆ ಖಾತ್ರಿಗೆ ಯಾವುದೇ ಕ್ರಮ ಸೂಚಿಸಿದು.

ಅದೇ ರೀತಿ ಮಹಿಳೆಯರು ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಕುರಿತು ಅಧ್ಯಯನ ತಂಡ ಎಚ್ಚರಿಕೆವಹಿಸಬೇಕೆಂದರೆ, ಆಯೋಗವು ಯಾವುದೇ ವ್ಯವಸ್ಥೆಗೊಳಿಸಬೇಕೆನ್ನುವ ಶಿಫಾರಸ್ಸು ಮಾಡಿದೆ. ಒಂದು ವೇಳೆ ಮಾಲೀಕರು ಇದನ್ನು ತೆರೆಯಲು ಸಾಮರ್ಥ್ಯರಲ್ಲದಿದ್ದರೆ ಸರ್ಕಾರಿ ಸಂಸ್ಥೆಗಳು, ಪಂಚಾಯಿತಿ, ನಗರ ಸಭೆಗಳು ಇದಕ್ಕೆ ವ್ಯವಸ್ಥೆ ಗೊಳಿಸಬೇಕೆನ್ನುತ್ತದೆ. ಜನತೆಯ ತೆರಿಗೆ ಹಣದಿಂದ ಮಾಲೀಕರ ಕರ್ತವ್ಯಗಳನ್ನು ಸರ್ಕಾರ ನಿಭಾಯಿಸಬೇಕೆನ್ನುತ್ತದೆ ವರದಿ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ನಡೆಸುವ ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ICDS) ಅನ್ನು ಮುಕ್ತ ಕಂಠದಿಂದ ಹೊಗಳುವ ಆಯೋಗ, ಅಂಗನವಾಡಿ ಕಾರ್ಯಕರ್ತೆಯರು-ನೌಕರರ ವೇತನ ಅಭದ್ರತೆಯ ಬಗ್ಗೆ ಅಸಹಾಯಕತೆ ವ್ಯಕ್ತಪಡಿಸುತ್ತದೆ. ವಿಶ್ವಬ್ಯಾಂಕ್ ಅಣತಿಯಂತೆ



ಸಾಧನೆಗಳ ಉಳಿಸಲು ಸಾಗಲಿ ಸಮರ

ಕಾರ್ಖಾನೆಯಲ್ಲಿ 5 ಕ್ಕಿಂತ ಹೆಚ್ಚು ಮಹಿಳಾ ಕಾರ್ಮಿಕರಿದ್ದರೆ, ಸೂಕ್ತ ವ್ಯವಸ್ಥೆಯನ್ನು ಆಡಳಿತ ಮಂಡಳಿ ಮಾಡಿದರೆ ರಾತ್ರಿ ಪಾಳಿಯಲ್ಲಿ ಮಹಿಳಾ ಕಾರ್ಮಿಕರ ಕೆಲಸವನ್ನು ನಿರ್ಬಂಧಿಸುವ ಅಗತ್ಯವಿಲ್ಲ ಎನ್ನುತ್ತದೆ. ಆದರೆ ಸರ್ವೋಚ್ಚ ನ್ಯಾಯಾಲಯದ ಕೆಲಸದ ಜಾಗದಲ್ಲಿ ಲೈಂಗಿಕ ಕಿರುಕುಳ ಕುರಿತ ತೀರ್ಪು ಆಧಾರಿತ 'ಲೈಂಗಿಕ ನಡತೆ'ಯ ಪರಿಭಾಷೆಯನ್ನು ID Act ನ Vc ಗೆ ಸೇರಿಸಬೇಕೆನ್ನುವ ಅಧ್ಯಯನ ತಂಡದ ವರದಿಯನ್ನು ಮಾತ್ರ ಆಯೋಗ ಅನುಮೋದಿಸಿಲ್ಲ.

ಹೆರಿಗೆ ಭತ್ಯೆಯನ್ನು ಕನಿಷ್ಠ ರೂ.2000 ನಿಗದಿ ಪಡಿಸಲು ಸೂಚಿಸಿರುವ ಆಯೋಗ, ಹೆಚ್ಚು ಮಕ್ಕಳನ್ನು ಹೆರುವ ಪದ್ಧತಿಯನ್ನು ನಿರುತ್ತೇಜಿಸುತ್ತದೆ. ಆದರೆ ವಾಸ್ತವದಲ್ಲಿ ಮಕ್ಕಳ ಆಯ್ಕೆ ಮಹಿಳಾ ಕಾರ್ಮಿಕರ ಆಯ್ಕೆಯಾಗದೆ ಅವರ ಗಂಡಂದಿರ ಅಥವಾ ಅತ್ತೆ ಮಾವಂದಿರ ಆಯ್ಕೆಯಾಗಿರುತ್ತದೆ ಎಂಬುದನ್ನು ಆಯೋಗ ಮರೆತಂತಿದೆ.

20ಕ್ಕಿಂತ ಹೆಚ್ಚು ಮಹಿಳಾ ಕಾರ್ಮಿಕರಿರುವ ಕಡೆ ಕ್ರೆಚ್‌ಗಳನ್ನು (creches) ಶಿಶು ಪಾಲನೆಗೆ ಅಂಗನವಾಡಿ ನೌಕರರ ವೇತನ ಹೆಚ್ಚಳಕ್ಕೆ ಅಂಗನವಾಡಿ ಫಲಾನುಭವಿಗಳಿಂದ (ಬಹುತೇಕ ಬಡತನ ರೇಖೆಗಿಂತ ಕೆಳಗಿರುವವರು) ಕೊಡುಗೆ ಪಡೆಯಲು ಸೂಚಿಸುತ್ತದೆ.

ಅಸಂಘಟಿತ ವಲಯಕ್ಕೆ ಪ್ರತ್ಯೇಕ ಕಾನೂನು:

ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಅಸಂಘಟಿತ ಕಾರ್ಮಿಕರ ಸಂಖ್ಯೆ ಕುರಿತು ಆಘಾತ ವ್ಯಕ್ತಪಡಿಸುವ ಆಯೋಗ, ಪೀಠಿಕೆಯಲ್ಲಿ ಕೈಗಾರಿಕಾ ವಲಯದಲ್ಲಿ ಶೇ.90.6ರಷ್ಟು ಮತ್ತು ಕೃಷಿ ವಲಯದಲ್ಲಿ ಶೇ.99.2ರಷ್ಟು ಅಸಂಘಟಿತ ಕಾರ್ಮಿಕರಿದ್ದಾರೆ ಎಂಬ ವರದಿಯನ್ನು 1991ರ ಜನಗಣತಿಯಾಧಾರದಲ್ಲಿ ನೀಡುತ್ತದೆ.

ಭೂಸುಧಾರಣೆ ತರದಿರುವುದು, ತಂದರು ಜಾರಿಗೊಳಿಸದಿರುವುದು, ಕನಿಷ್ಠ ವೇತನ - ಕಡ್ಡಾಯ ವೇತನ ನಿಗದಿಗೊಳಿಸದಿರುವುದು, ನಿಗದಿಯಾಗಿರುವಲ್ಲಿ ಜಾರಿಮಾಡದಿರುವುದರ ಬಗ್ಗೆ ವಿವರಿಸುವ ಆಯೋಗ ಇದರ ಪರಿಹಾರಕ್ಕೆ ಸಾಮಾಜಿಕ ಸುರಕ್ಷತೆಯ ವ್ಯವಸ್ಥೆಯನ್ನು ರಚಿಸುವ ಮತ್ತು ಇಡೀ ಅಸಂಘಟಿತ ವಲಯಕ್ಕೆ ಒಟ್ಟಾರೆ ಕನಿಷ್ಠ ಕೂಲಿ ವೇತನ ಭದ್ರತೆ, ಸಾಮಾಜಿಕ ಸುರಕ್ಷತೆ, ಕೆಲಸದ ಭದ್ರತೆ ಒದಗಿಸುವ ಹಿನ್ನಲೆಯಲ್ಲಿ ಸಮಗ್ರ ಶಾಸನ ರೂಪಿಸಲು ಸೂಚಿಸುತ್ತದೆ. ರಾಷ್ಟ್ರೀಯ ಕನಿಷ್ಠ ವೇತನ ನಿಗದಿ, ಹಾಗೂ ಅದಕ್ಕಿಂತ ಕಡಿಮೆ ಯಾವುದೇ ರಾಜ್ಯದ ಕನಿಷ್ಠ ವೇತನ ಇರಕೂಡದು ಎನ್ನುತ್ತದೆ.

ಸಾಮಾಜಿಕ ಸುರಕ್ಷಿತ.

ಭಾರತ ಸರ್ಕಾರ ಈ ಹಿಂದೆಯೆ 'ಸಾಮಾಜಿಕ ಸುರಕ್ಷತೆ' ಕುರಿತು 'ಕಾರ್ಯಪಡೆ' ರಚಿಸಿತ್ತು. ಕಾರ್ಯ ಪಡೆಯು ಸಹಾ ತನ್ನ ವರದಿಯನ್ನು 2000'ದ ಮೇ ನಲ್ಲಿಯೇ ನೀಡಿತ್ತು. ಆದರೆ ಸರ್ಕಾರ ಕಾರ್ಮಿಕ ಆಯೋಗದ ವರದಿಯ ನಿರೀಕ್ಷೆಯಲ್ಲಿ ಅದನ್ನು ಪರಿಗಣಿಸಿರಲಿಲ್ಲ.

ಆಯೋಗದ ಅಧ್ಯಯನ ತಂಡವು ಅಭಿವೃದ್ಧಿ ಹೊಂದಿದ ದೇಶಗಳು ತಮ್ಮ ಒಟ್ಟಾರೆ ರಾಷ್ಟ್ರೀಯ ಉತ್ಪನ್ನದಲ್ಲಿ ಶೇ.40 ರಷ್ಟನ್ನು ಸಾಮಾಜಿಕ ಸುರಕ್ಷತೆಗೆ ವೆಚ್ಚ ಮಾಡುತ್ತಿರುವುದನ್ನು ನಮೂದಿಸುತ್ತಾ, ಭಾರತದಲ್ಲಿ ಇದು ಕೇವಲ 1.8 ರಷ್ಟಿದೆ ಎಂದು ಹೇಳಿದೆ.

ಈ ಹಿನ್ನಲೆಯಲ್ಲಿ ಆಯೋಗವು 'ಸಾಮಾಜಿಕ ಸುರಕ್ಷತೆ'ಯನ್ನು 'ಮೂಲಭೂತ ಮಾನವ ಹಕ್ಕನ್ನಾಗಿ' ಪರಿಗಣಿಸಿದೆ. ಆಯೋಗ ಸೂಚಿಸಿರುವ ಸಾಮಾಜಿಕ ಸುರಕ್ಷತೆ 4 ಹಂತದ್ದಾಗಿದೆ.

1. ಸರ್ಕಾರದ ಹಣದಿಂದ ಪ್ರಯೋಜಿಸಲಾದ ಸಾಮಾಜಿಕ ನೆರವು
2. ಫಲಾನುಭವಿಗಳು ಕೊಡುವ ಕೊಡುಗೆ ಮತ್ತು ಸರ್ಕಾರದ ಅನುದಾನದಿಂದ ನಡೆಯುವವು
3. ಪೂರ್ಣವಾಗಿ ಫಲಾನುಭವಿಗಳ ಕೊಡುಗೆಯಿಂದ ನಡೆಯುವ ಸಾಮಾಜಿಕ ವಿಮೆ
4. ಸ್ವಯಂ ಯೋಜನೆಗಳು.

ಆಯೋಗ ಅಂತಿಮವಾಗಿ ಸಾಮಾಜಿಕ ಸುರಕ್ಷತೆಗೆ ಸಂಬಂಧಿಸಿದಂತೆ ಅಂತರ ರಾಷ್ಟ್ರೀಯ ಕಾರ್ಮಿಕ ಸಂಘಟನೆ ಗೊತ್ತುವಳಿಗಳನ್ನು ಅನುಮೋದಿಸಲು ಸಧ್ಯ ಸಾಧ್ಯವಾಗದು ಎಂದಿದೆ, ಅದೆ ಸಮಯದಲ್ಲಿ ಹೆಚ್ಚು ಫಲಾನುಭವಿಗಳ ಕೊಡುಗೆಯಿಂದ ನಡೆಯುವ ಸಾಮಾಜಿಕ ವಿಮೆಗೆ ಆಧ್ಯತೆ ನೀಡಬೇಕೆನ್ನುತ್ತದೆ.

ಅಲಂಕಾರಿಕ ಮಾತುಗಳು.

ಸಾಮಾಜಿಕ ಸುರಕ್ಷತೆಯ ಭಾಗವಾಗಿ ಅಸಂಘಟಿತ ವಲಯದ ಕಾರ್ಮಿಕರಿಗೆ ಗುರುತಿನ ಚೀಟಿ ನೀಡಬೇಕು. ಇದನ್ನು ಮಾಲೀಕರು ನೀಡಬೇಕು, ಇಲ್ಲವಾದಲ್ಲಿ ಗ್ರಾಮ ಪಂಚಾಯಿತಿ ವರೆಗೆ, ಇದನ್ನು ಕೊಡಿಸುವ ವ್ಯವಸ್ಥೆಗೆ ಮಾಲೀಕರು ಸಹಕರಿಸಬೇಕು ಎನ್ನುತ್ತದೆ ಆಯೋಗ. ಅಂತೆಯೇ ನಿರುದ್ಯೋಗ- ಉದ್ಯೋಗ ಕಡಿತದ ಬಗ್ಗೆ ಕಾರ್ಮಿಕ ಸಂಘಟನೆಗಳಷ್ಟೆ ನಿರ್ದಾಕ್ಷಿಣ್ಯವಾಗಿ ಪರಿಸ್ಥಿತಿಯನ್ನು ಟೀಕಿಸುವ ಆಯೋಗವು ನಿರುದ್ಯೋಗ ಭತ್ಯೆ ನೀಡಬೇಕೆನ್ನುವ, ಅದಕ್ಕೆ ಸೂಕ್ತ ವ್ಯವಸ್ಥೆ ರೂಪಿಸಬೇಕು ಎಂದು ಶಿಫಾರಸ್ಸು ಮಾಡಿದೆ. ಅಂತೆಯೇ ಸ್ವಯಂ ನಿವೃತ್ತಿ ಮೂಲಕ, ಕಾರ್ಖಾನೆಗಳ ಮುಚ್ಚುವಿಕೆ, ರಿಟ್ರೆಂಚ್‌ಮೆಂಟ್ ಮೂಲಕ ಹಾಗೂ ಆರ್ಥಿಕ ಸುಧಾರಣೆ ಹೆಸರಿನಲ್ಲಿ ನಡೆಯುತ್ತಿರುವ ಉದ್ಯೋಗ ಕಡಿತ (Down Sizing) ಮೂಲಕ ಹೊರದೂಡಲ್ಪಡುತ್ತಿರುವ ಉದ್ಯೋಗಹೀನರಿಗೆ, ಉದ್ಯೋಗಾವಕಾಶಗಳ ನಿರ್ಮಾಣ ಮತ್ತೆ ಇತರ ಉದ್ಯೋಗ ನಡೆಸಲು ಅಗತ್ಯವಿರುವ ಸೂಕ್ತ ತರಬೇತಿ ನೀಡಬೇಕೆನ್ನುತ್ತದೆ ಆಯೋಗ.

ಆದರೆ ಈ ಎಲ್ಲಾ ಶಿಫಾರಸ್ಸುಗಳು, ಕೇವಲ ಅಲಂಕಾರಿಕವಾಗಿಯಷ್ಟೆ ಇವೆ. ಏಕೆಂದರೆ ಕೇಂದ್ರದ ಎನ್.ಡಿ.ಎ. ಸರ್ಕಾರ ಮಾತ್ರ ತನಗೆ ಪ್ರಿಯವಾದ ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಪರ ಕಾರ್ಮಿಕ ಕಾನೂನುಗಳ ತಿದ್ದುಪಡಿಯ ಶಿಫಾರಸ್ಸುಗಳನ್ನು ಆಯ್ಕೆ ಮಾಡಿಕೊಂಡು ಉಳಿದಂತವನ್ನು ಉಲ್ಲೇಖಿಸದು ಕೂಡ ಎಂಬುದಕ್ಕೆ ಅವರ ಆಡಳಿತವೇ ಸಾಕ್ಷಿಯಾಗಿದೆ.

.......ಬ್ರೆಜಿಲ್‌ನಲ್ಲಿ ಬೇರೂರಿರುವ ಭೂರಹಿತ ಕೃಷಿ ಕಾರ್ಮಿಕರ ಚಳುವಳಿ

11ನೇ ಪುಟದಿಂದ

ವಿರೋಧಿಸುವುದರಲ್ಲಿ ಎಮ್.ಎಸ್.ಟಿ ಮುಂಚೂಣಿಯಲ್ಲಿದೆ. ಈ ಕಾರ್ಯಕ್ರಮದ ಪ್ರಕಾರ ಭೂರಹಿತರಿಗೆ ಭೂಮಿ ಕೊಳ್ಳಲು ಸಾಲ ಕೊಡಲಾಗುತ್ತದೆ. (ಭಾರಿ ಬಡ್ಡಿದರದಲ್ಲಿ) ಆದರೆ ಭೂಮಾಲಿಕರು ಭೂಮಿ ಮಾರಬೇಕು ಎಂದೇನು ಕಡ್ಡಾಯವಿಲ್ಲ. ಇದು ಬ್ರೆಜಿಲ್‌ನ ಸಂವಿಧಾನ-ವಿರೋಧಿ ಕಾರ್ಯಕ್ರಮ ಎಂದು ಎಮ್.ಎಸ್.ಟಿ ಬಲವಾದ ಚಳುವಳಿ ಹೂಡಿದೆ.

ಎಮ್.ಎಸ್.ಟಿ ಪರಿಸರಪ್ರಿಯ ಕೃಷಿ ವಿಧಾನಗಳಲ್ಲಿ ಹಲವು ಪ್ರಯೋಜನಗಳನ್ನು ಮಾಡಿದೆ. ಬೀಜ-ಕೃಷಿ ಉತ್ಪನ್ನ- ಆಹಾರದ ವ್ಯಾಪಾರದಲ್ಲಿ ತೊಡಗಿರುವ ದೈತ್ಯ ಬಹುರಾಷ್ಟ್ರೀಯ ಕಂಪನಿಗಳ ಪ್ರಾಬಲ್ಯಕ್ಕೆ ನೇರ ಸವಾಲು ಹಾಕಿದೆ. ಹಲವು ಕಡೆ ಅದರ ಗೋಣು ಮುರಿಯುವ (ಅವರ ಉತ್ಪನ್ನಗಳನ್ನು ಬಹಿಷ್ಕಾರ ಹಾಕುವ) ಕ್ರಮ ಕೈಗೊಂಡಿದೆ. ಕಾರ್ಗಿಲುಗಳು, ಮೊನ್ಸಾಂಡೊಗಳು, ನಡುಗುವಂತೆ ಮಾಡಿದೆ. ಕೃಷಿ ಮಾತ್ರವಲ್ಲ ಪಶುಸಂಗೋಪನೆಯಲ್ಲೂ, ಹಲವು ಸೃಜನಾತ್ಮಕ ಕೆಲಸಗಳನ್ನು ಮಾಡಿವೆ.

ಎಮ್.ಎಸ್.ಟಿ ನಿರ್ವಾತದಲ್ಲಿ ಬೆಳೆದ ಚಳುವಳಿ ಅಲ್ಲ. 70ರ 80 ರ ದಶಕದಲ್ಲಿ 'ವಿಮೋಚನಾ ಧಾರ್ಮಿಕ' (ಕ್ರಿಶ್ಚಿಯನ್ ಎಡ--) ಮತ್ತು ಸೋಷಲಿಸ್ಟ್ ಚಳುವಳಿ ಸಿದ್ಧ ಮಾಡಿದ ಭೂಮಿಯ ಮೇಲೆ ಮೂಡಿ ಬಂದಿದೆ. ಎಮ್.ಎಸ್.ಟಿ ಬೆಂಗಾವಲಿಗೆ ಬ್ರೆಜಿಲ್‌ನ ಪ್ರಮುಖ ಎಡಪಕ್ಷ ವರ್ಕರ್ಸ್ ಪಾರ್ಟಿ, ಚರ್ಚಿನ ದೊಡ್ಡ ಭಾಗ, ಬುದ್ಧಿಜೀವಿಗಳು ಟ್ರೇಡ್‌ಯೂನಿಯನ್‌ಗಳು ನಿಂತಿವೆ. ಬ್ರೆಜಿಲ್‌ನಲ್ಲಿ ಭೂಮಿ ಹೋರಾಟ ಪ್ರಜಾಸತ್ತಾತ್ಮಕ ಚಳುವಳಿಯ ಮುಖ್ಯ ವಿಷಯವಾದ್ದರಿಂದ ಎಲ್ಲಾ ಶಕ್ತಿಗಳಿಗೂ ಎಮ್.ಎಸ್.ಟಿ ಚಳುವಳಿಯಲ್ಲಿ ಪ್ರಧಾನ ಪಾತ್ರವಹಿಸಿದೆ. ಉತ್ತರ ಅಮೇರಿಕಾ, ಯುರೋಪುಗಳ ಪ್ರಗತಿಪರ ಚಳುವಳಿಯಿಂದಲೂ ಎಮ್.ಎಸ್.ಟಿ ಗೆ ಗಮನಾರ್ಹ ಅಂತರಾಷ್ಟ್ರೀಯ ಬೆಂಬಲ, ಸೌಹಾರ್ದತೆ ದೊರಕಿದೆ.

ಬುಶ್ ಸಿದ್ಧಾಂತ : ವಿಶ್ವಯಜಮಾನಿಕೆಯ ದುರಹಂಕಾರದ ನಗ್ನ ಪ್ರದರ್ಶನ

ಇಡೀ ವಿಶ್ವದ ಮೇಲೆ ಪ್ರಾಬಲ್ಯ ಸ್ಥಾಪಿಸುವುದೇ ಅಮೇರಿಕಾದ ನಿಲುವೆಂದು, ತಮಗೆ ಇನ್ನು ಯಾರೂ ಸಾಟಿಯಿಲ್ಲ ತಾನೇ ಸೂಪರ್ ಪವರ್ ಎಂದೆಲ್ಲಾ ದುರಂಹಕಾರಿ ಮಾತುಗಳನ್ನು ಅಮೆರಿಕಾ ಅಧ್ಯಕ್ಷ ಬುಶ್ ಕೊಚ್ಚಿಕೊಂಡಿದ್ದಾರೆ. ಅವರು ಸಂಸತ್ತಿಗೆ ಮಂಡಿಸಿರುವ ರಾಷ್ಟ್ರೀಯ ಭದ್ರತಾ ಸಮರತಂತ್ರ ಹಿಂದಿನ ಯಾವುದಕ್ಕಿಂತಲೂ ಅತ್ಯಂತ ಅಪಾಯಕಾರಿಯಾದದ್ದು. ಇದಕ್ಕೆ ಬಿಜೆಪಿ ಹಲ್ಲುಗಿಂಜಿ ಅನುಮೋದಿಸಿದೆ.

ಮುಂಬರುವ ದಿನಗಳಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಜಾಗತಿಕ ಕಾರ್ಯತಂತ್ರವೆಂದೆ ಅಮೆರಿಕನ್ ಸಾಮ್ರಾಜ್ಯಶಾಹಿಯಿಂದ ಇಡೀ ವಿಶ್ವದ ಮೇಲೆ ಸಂಪೂರ್ಣ ಪ್ರಾಬಲ್ಯ - ಈ ಅಂಶವನ್ನು ಅಧ್ಯಕ್ಷ ಬುಶ್ ಸ್ಪಷ್ಟವಾಗಿ, ಅತ್ಯಂತ ದುರಹಂಕಾರದಿಂದ ಸಾರಿದ್ದಾರೆ. ಅಮೆರಿಕಾದ ಪ್ರತಿಯೊಬ್ಬ ಅಧ್ಯಕ್ಷ ಪ್ರತಿ ವರ್ಷ ಅಲ್ಲಿಯ ಸಂಸತ್ತಿಗೆ ಒಂದು ಸಮರ ತಂತ್ರವನ್ನು ಸಲ್ಲಿಸಬೇಕು. ಅಧ್ಯಕ್ಷ ಬುಶ್ ಈ ಬಾರಿ 33 ಪುಟಗಳ ವರದಿಯನ್ನು ಸಲ್ಲಿಸಿದ್ದಾರೆ. 'ಅಮೆರಿಕಾ ಸಂಯುಕ್ತ ಸಂಸ್ಥಾನಗಳ ರಾಷ್ಟ್ರೀಯ ಭದ್ರತಾ ಸಮರ ತಂತ್ರ' ಎಂಬ ಈ ದಾಸ್ತಾವೇಜು ಬುಶ್‌ರ ಸಿದ್ಧಾಂತವನ್ನು ಪ್ರತಿಪಾದಿಸುವಂತದ್ದು.

ಈ ಸಮರ ತಂತ್ರ ಇದುವರೆಗೆ ಯಾವುದೇ ಅಮೇರಿಕನ್ ಅಧ್ಯಕ್ಷ ಮುಂದಿಟ್ಟ ಸಮರ ತಂತ್ರಕ್ಕಿಂತ ಅತ್ಯಂತ ಆಕ್ರಮಣಕಾರಿ ಹಾಗೂ ಸಾಮ್ರಾಜ್ಯಶಾಹಿ ಮಹತ್ವಕಾಂಕ್ಷೆಯಿಂದ ಕೂಡಿದೆ. ಎಂಭತ್ತರ ದಶಕದ ಆರಂಭದಲ್ಲಿ ಅಧ್ಯಕ್ಷ ರೇಗನ್ ಮುಂದಿಟ್ಟ ಕಮ್ಯುನಿಸ್ಟ್ ವಿರೋಧಿ 'ಧರ್ಮಯುದ್ಧ' ವನ್ನೂ ಇದು ಮೀರಿಸುತ್ತದೆ. ಎಷ್ಟೆಂದರೆ ನ್ಯೂಯಾರ್ಕ್ ಟೈಮ್ಸ್ ದೈನಿಕ ಕೂಡ ಈ ಪ್ರಬಂಧ ರೋಮನ್ ಸಾಮ್ರಾಜ್ಯದ ಅಥವಾ ನೆಪೋಲಿಯನ್ ತಯಾರಿಸಿರುವ ಘೋಷಣೆಯಂತೆಯೇ ಇರುತ್ತದೆ ಎಂದು ಸಂಪಾದಕೀಯ ಟಿಪ್ಪಣಿ ಮಾಡಿದೆ.

ಈ ಬುಶ್ ಸಿದ್ಧಾಂತದ ಮುಖ್ಯಾಂಶಗಳೇನು? ಇದರಲ್ಲಿ ಎರಡು ಹೊಸ ಅಂಶಗಳಿವೆ ಒಂದು ತನ್ನ ವಿರುದ್ಧ ವೈಷಮ್ಯ ಹೊಂದಿರುವ ದೇಶಗಳು ಅಥವಾ ಭಯೋತ್ಪಾದಕರ ಗುಂಪುಗಳ ಮೇಲೆ ಸಾಮೂಹಿಕ ವಿನಾಶಕ ಶಸ್ತ್ರಾಸ್ತ್ರಗಳನ್ನು ಅಭಿವೃದ್ಧಿಪಡಿಸುತ್ತಿರುವವರ ಮೇಲೆ ಮೊದಲೇ ಕಾರ್ಯಾಚರಣೆ ನಡೆಸುವ ಹಕ್ಕು ಅಮೇರಿಕಾ ಸಂಯುಕ್ತ ಸಂಸ್ಥಾನಕ್ಕೆ ಇದೆ. ಎರಡನೆಯದು, ಅದು ತನ್ನ ಮಿಲಿಟರಿ ಹಿರಿಮೆಗೆ ಶೀತಲ ಸಮರದ ವೇಳೆ ಬಂದಂತ ಸವಾಲುಗಳನ್ನು ಬರಲು ಎಂದೂ ಬಿಡುವುದಿಲ್ಲ.

ಈ ಹಿಂದೆ ಅಮೇರಿಕಾದ ಸಮರತಂತ್ರಗಳಲ್ಲಿ ತಡೆ ಮತ್ತು ವಿಸ್ತರಣೆಯಾಗದಂತೆ ನೋಡಿಕೊಳ್ಳುವುದರ ಬಗ್ಗೆ ಒತ್ತು ಇರುತ್ತಿತ್ತು. ಆದರೆ ಈಗ ತನ್ನ ಶತ್ರುಗಳು ಎಂದು ಅದಕ್ಕೆ ಕಂಡುಬಂದರೆ ಯಾವುದೇ ದೇಶ ಅಥವಾ ಪ್ರದೇಶಗಳ ಮೇಲೆ ಯಾವುದೇ ಪ್ರಚೋದನೆ ಯಿಲ್ಲದೆ ಅಗತ್ಯವಿದ್ದರೆ ಏಕಾಂಗಿಯಾಗಿಯಾದರೂ ಧಾಳಿ ಮಾಡುವ ಹಕ್ಕು ತಮಗಿದೆ ಎಂದು ಅದು ಹೇಳಿಕೊಂಡಿದೆ. ಈ ಬಾರಿ ಅಂತರ್‌ರಾಷ್ಟ್ರೀಯ ಕಾನೂನುಗಳನ್ನು ಪಾಲಿಸುವ ಅಥವಾ ರಾಷ್ಟ್ರೀಯ ಸಾರ್ವಭೌಮತೆಯನ್ನು ಗೌರವಿಸುವ ನಟನೆ ಕೂಡ ಇಲ್ಲ. ಈ ಮೂಲಕ ಸೆಪ್ಟೆಂಬರ್ 11ರ ನಂತರ ತನ್ನ ನಿಲುವಿಗೆ ಅದು 'ಸಮರತಂತ್ರ'ದ ಸ್ಥಾನ ನೀಡಿದೆ.


ಸ್ವಾರ್ಥಿ ಸಿದ್ಧಾಂತದ ಜ್ಯಾರಿ- ಇಂತಹ ಒಂದು ಸ್ವಾರ್ಥಿ ಸಿದ್ಧಾಂತದ ಆಧಾರದ ಮೇಲೆಯೇ ಇರಾಕ್ ಮೇಲೆ ಅದಕ್ಕೆ ಸಾಮೂಹಿಕ ವಿನಾಶದ ಶಸ್ತ್ರಾಸ್ತ್ರಗಳನ್ನು ತಯಾರಿಸುವ ಸಾಮರ್ಥ್ಯವಿದೆ ಎಂಬ ನೆಪವೊಡ್ಡಿ ಯುದ್ಧ ಘೋಷಿಸಲಾಗುವುದು. ಭಯೋತ್ಪಾದನೆಯ ವಿರುದ್ಧ ಜಾಗತೀಕ ಸಮರದ ಹೆಸರಲ್ಲಿ ಅದು ನಡೆಸುವ ಕಾರ್ಯಾಚರಣೆಗಳಲ್ಲಿ ಎಲ್ಲಾ ದೇಶಗಳೂ ಅದರೊಂದಿಗೆ ಸಹಕರಿಸಬೇಕಂತೆ. ಇಲ್ಲವಾದರೆ ಸಹಕರಿಸುವ ಒತ್ತಡ ತರಲಾಗುವುದು. ಈ ಸಾಮ್ರಾಜ್ಯಶಾಹಿ ಆದೇಶಗಳನ್ನು ಪಾಲಿಸುವಂತೆ ಮಾಡುವುದಕ್ಕಾಗಿ ಜಗತ್ತಿನ ಎಲ್ಲೆಡೆ ಮಧ್ಯಏಶ್ಯಾದಲ್ಲಿ, ಪಶ್ಚಿಮ ಏಶ್ಯಾದಲ್ಲಿ, ದಕ್ಷಿಣ ಏಶ್ಯಾದಲ್ಲಿ, ಆಗ್ನೇಯ ಏಶ್ಯಾದಲ್ಲಿ ಮತ್ತು ಆಫ್ರಿಕಾದಲ್ಲಿ ಅವೆುರಿಕನ್ ಪತ್ರಿಕೆಗಳನ್ನು ಕೂಡಿಹಾಕಿರುವುದು!

ಈ ಸಿದ್ಧಾಂತದ ಜ್ಯಾರಿ ಪಶ್ಚಿಮ ಏಶ್ಯಾದಲ್ಲಿ, ವಿಶೇಷವಾಗಿ ಇರಾಕ್‌ನಲ್ಲಿ ಕಾಣಬರುತ್ತಿದೆ. 112 ಶತಕೋಟಿ ಬ್ಯಾರೆಲ್‌ಗಳಷ್ಟು ತೈಲ ನಿಕ್ಷೇಪ ಇರುವ ಇರಾಕ್ ಅದರ ಪ್ರಮುಖ ಗುರಿ ಏಕೆಂದರೆ ಇರಾಕ್ ಅದರ ಯಜಮಾನಿಕೆಯನ್ನು ನಿರಾಕರಿಸಿದೆ, ಪ್ರತಿರೋಧಿಸಿದೆ, ಆದ್ದರಿಂದಲೇ ಪಶ್ಚಿಮ ಏಶ್ಯಾದಲ್ಲಿ ಒಂದು ಬಲಿಷ್ಟ ಇರಾಕ್ ಇರಬಾರದು.

ಪ್ರಕಾಶ್ ಕಾರಟ್

ಸವಾಲನ್ನು ಸಹಿಸುವುದಿಲ್ಲ!- ಅಮೇರಿಕನ್ ಸಾವಮ್ರಾಜ್ಯಕ್ಕೆ ಯಾವ ಸವಾಲನ್ನೂ ಸಹಿಸಿಕೊಳ್ಳುವುದಿಲ್ಲ ಎಂದಿದೆ ಬುಶ್ ಸಿದ್ಧಾಂತ. ಸೋವಿಯತ್ ಒಕ್ಕೂಟದ ಪತನದ ನಂತರ ಅಮೇರಿಕಾ ಪಡೆದ ಅಪಾರ ಹಿರಿಮೆಗೆ ಸವಾಲು ಹಾಕಿ ಅದರ ಸಮಕ್ಕೆ ಬರುವ ಯಾವ ವಿದೇಶೀ ಶಕ್ತಿಗೂ ಅವಕಾಶ ಕೊಡುವ ಆಶಯ ತಮಗೆ ಇಲ್ಲ ಎಂದು ಬುಶ್ ಸಾರಿದ್ದಾರೆ. ಯಾವುದೇ ದೇಶ ತನ್ನ ಸರಿಸಮನಾದ ಮಿಲಿಟರಿ ಸ್ಥಾನಮಾನ ಸಾಧಿಸಲು ಪ್ರಯತ್ನಿಸಿದರೆ ಆದೇಶವನ್ನು ವೈರಿ ದೇಶವೆಂದು ಪರಿಗಣಿಸಿ ಅದರ ವಿರುದ್ಧ ಕಾರ್ಯಾಚರಣೆ ನಡೆಸಲಾಗುವುದು ಎಂದು ಯಾವುದೇ ಹಿಂಜರಿಕೆಯಿಲ್ಲದೆ ಬುಶ್ ಸಾರಿದ್ದಾರೆ. ಚೀಣಾ ಇಂತಹ ಒಂದು ಗುರಿ.

ಈ ಕಾರ್ಯತಂತ್ರದ ಮೂಲಕ ಬುಶ್ ಆಡಳಿತ ಶಸ್ತ್ರಾಸ್ತ್ರಮಿತಿ ಸಂಧಿಗಳನ್ನೆಲ್ಲಾ ಅಥವಾ ಪರಮಾಣು


ನುಚ್ಚು ನೂರಾಗಿಸಬೇಕಾದ ಬುಶ್ ಕನಸು

ನಿಶ್ಶಸ್ತ್ರೀಕರಣವನ್ನು ಪಾಲಿಸುವ ನಟನೆಯನ್ನು ಕೂಡಾ ಮೂಲೆಗೆಸೆದಿದೆ. 1972ರ ಕ್ಷಿಪಣಿ ನಿರೋಧ ಎ.ಬಿ.ಎಂ. ಸಂಧಿಯನ್ನು ಕೈಬಿಟ್ಟಿರುವ ಬುಶ್‌ರ ನಿರ್ಧಾರಕ್ಕೆ ಈ ದಾಸ್ತಾವೇಜು ಮಂಜೂರಾತಿಯ ಮುದ್ರೆ ಒತ್ತಿದೆ. ಪರಮಾಣು ಮತ್ತು ಕ್ಷಿಪಣಿ ತಂತ್ರಜ್ಞಾನದ ರಂಗದಲ್ಲಿ ಕೇವಲ ತನ್ನದೇ ಹಿರಿಮೆ ಸಾಧಿಸುವ ಹೊಸ ಕ್ಷಿಪಣಿ ವ್ಯವಸ್ಥೆ ರೂಪಿಸುವ ಪ್ರಯತ್ನಕ್ಕೂ ಅನುಮತಿಯ ಮುದ್ರೆಯೊತ್ತಿದೆ. ಈ ಹಿಂದೆ ಪೆಂಟಗಾನ್ ತಯಾರಿಸಿದ "ಪರಮಾಣು ನಿಲುವಿನ ಪರಾಮರ್ಶೆ" ಪರಮಾಣು ಅಸ್ತ್ರಗಳನ್ನು ಮೊದಲು ಬಳಸಬಹುದು. ಪರಮಾಣು ಅಸ್ತ್ರಗಳಲ್ಲಿನ ದೇಶಗಳ ವಿರುದ್ಧವೂ ಬಳಸಬಹುದು ಎಂಬುದನ್ನು ಅನುಮೋದಿಸಿತ್ತು. ಈಗ ಈ ಸಿದ್ಧಾಂತ ಇರಾಕ್ ವಿರುದ್ಧ ಯುದ್ಧದಲ್ಲಿ ಪರಮಾಣು ಶಸ್ತ್ರಾಸ್ತ್ರಗಳನ್ನು, ಇತರ ಇಂತಹ ಕಾರ್ಯಾಚರಣೆಗಳನ್ನು ಬಳಸಬಹುದು ಎಂದು ಸೂಚನೆ ನೀಡಿದೆ. ಬುಶ್‌ರವರ ರಾಷ್ಟ್ರೀಯ ಭದ್ರಾತಾ ಸಲಹೆಗಾರರಾದ ಕೊಂಡೆಲಿಝಾರೈಸ್ ಇದನ್ನು ಇನ್ನಷ್ಟು ಸ್ಪಷ್ಟಗೊಳಿಸಿದ್ದಾರೆ. "ಈಗ ನಾವು ಹೊಂದಿರುವ ಮಿಲಿಟರಿ ಶಕ್ತಿಯನ್ನು ಉಳಿಸಿಕೊಳ್ಳುವಾಗ ಅದನ್ನು ನಾವು ಸ್ವಾತಂತ್ರ್ಯಕ್ಕೆ ಅನುಕೂಲವಾದ ಶಕ್ತಿಗಳ ಸಮತೋಲನಕ್ಕೆ ಬೆಂಬಲವಾಗಿ ಮಾಡುತ್ತೇವೆ ಎಂಬರ್ಥದಲ್ಲಿ ಅಮೇರಿಕಾ ಸಂಯುಕ್ತ ಸಂಸ್ಥಾನ ಒಂದು ಅತ್ಯಂತ ವಿಶಿಷ್ಟ ದೇಶ ಎಂದು ಸಾರಿರುವ ಅವರು "ಆದರೆ ಹಿಂದೆ ಸೋವಿಯತ್ ಒಕ್ಕೂಟ ಸಾಧಿಸಿದಂತೆ ಇನ್ನೊಬ್ಬ ಪ್ರತಿಸ್ಪರ್ಧಿಗೆ ಅಮೆರಿಕಾದೊಂದಿಗೆ ಮಿಲಿಟರಿ ಸಮಾನತೆ ಸಾಧಿಸುವ ಅವಕಾಶ ನೀಡುವ ಪ್ರಶ್ನೆ ಬಂದರೆ, ಅಮೆರಿಕಾ ಖಂಡಿತಾ ಅದಕ್ಕೆ ಅವಕಾಶ ನೀಡುವುದಿಲ್ಲ ಎಂದಿದ್ದಾರೆ.

ಯಾವುದೇ ದೇಶ ತನ್ನನ್ನು ಸರಿಗಟ್ಟುವುದನ್ನು ಅಮೆರಿಕಾ ಸಹಿಸುವುದಿಲ್ಲ. ಇಂತಹ ದೇಶಗಳು ಚೀನಾದಂತಹ ವಿಶ್ವಶಕ್ತಿಯಾಗಿ ಮೂಡಿ ಬರುತ್ತಿರುವ ದೇಶವಾಗಲೀ ಇರಾಕ್ ನಂತಹ ಪ್ರಾದೇಶಿಕ ಶಕ್ತಿಗಳಾಗಲೀ ಅದಕ್ಕೆ ವೈರಿಗಳಾಗಿ ಬಿಡುತ್ತಾರೆ. ಅವುಗಳ ವಿರುದ್ಧ ಮಿಲಿಟರಿ ಕಾರ್ಯಾಚರಣೆ ನಡೆಸುವ ಹಕ್ಕು ಅದಕ್ಕಿದೆಯಂತೆ!

ಐ.ಎಂ.ಎಫ್. ವಿಶ್ವಬಾಂಕ್‌ಗಳಂತಹ ಸಂಸ್ಥೆಗಳನ್ನು, ವಿದೇಶಿನೆರವನ್ನು ಅಮೆರಿಕಾದ ಹಿತಸಾಧನೆಗೆ ಬಳಸಲಾಗುವುದು. ಎಂದು ಯಾವುದೇ ಮುಚ್ಚುಮರೆಯಿಲ್ಲದೆ ಈ ಬುಶ್ ಸಿದ್ಧಾಂತ ಸಾರಿದೆ. ಬಹುದೇಶೀಯ ಸಹಕಾರ ಅಮೇರಿಕನ್ ಹಿತಾಸಕ್ತಿಗಳನ್ನು ಈಡೇರಿಸುವವರೆಗೆ ಸರಿ, ಇಲ್ಲವಾದರೆ ತನ್ನ ಹಿತಾಸಕ್ತಿ ಸಾಧಿಸಲು ಅದು ಪ್ರತಿಬಾರಿಯೂ ಏಕಪಕ್ಷೀಯ ಕ್ರಮ ಕೈಗೊಳ್ಳುತ್ತದೆ ಎಂಬ ಸಂದೇಶವನ್ನು ಈ ದಸ್ತಾವೇಜು ನೀಡಿದೆ. ಅಮೇರಿಕಾದ ಇಚ್ಛೆಯನ್ನು ಜಾರಿಗೊಳಿಸುವುದು ಈ ಬುಶ್ ಸಿದ್ಧಾಂತದ ಕೆಲಸ!

ಹಲ್ಲುಗಿಂಜುತ್ತಿರುವ ಭಾರತ ಸರಕಾರ- ಅವೆುರಿಕಾದ ಸಂಸತ್ತಿಗೆ ಸಲ್ಲಿಸಿದ ಈ ಸಮರತಂತ್ರದ ದಸ್ತಾವೇಜಿಗೆ ಸಂಬಂಧಪಟ್ಟಂತೆ ಒಂದು ಅರೆ ಟಿಪ್ಪಣಿಯನ್ನು ಗಮನಿಸಿ. ಇದು ಭಾರತಕ್ಕೆ ಸಂಬಂಧಪಟ್ಟದ್ದು. ಬುಶ್ ಆಡಳಿತದ ಈ 'ಲಂಗುಲಗಾಮಿಲ್ಲದ ದುರಹಂಕಾರದ ಪ್ರದರ್ಶನಕ್ಕೆ ಇಡೀ ಜಾಗತಿಕ ಸಮುದಾಯ ಗಾಬರಿಯಿಂದ ಪ್ರತಿಕ್ರಿಯಿಸಿದರೆ ಬಿಜೆಪಿ ನೇತೃತ್ವದ ಸರಕಾರ ಹಲ್ಲುಗಿಂಜುತ್ತಾ ಅನುಮೋದಿಸಿದೆ. ಇತ್ತೀಚಿನವರೆಗೆ ವಿದೇಶಾಂಗ ಮಂತ್ರಿಯಾಗಿದ್ದು ಈಗ ಹಣಕಾಸು ಮಂತ್ರಿಯಾಗಿರುವ ಜಸ್ವಂತ್ ಸಿಂಗ್ ಆ ವೇಳೆಗೆ ಐಎಂಎಫ್ ವಿಶ್ವಬ್ಯಾಂಕ್ ಸಭೆಯಲ್ಲಿ ಭಾಗವಹಿಸಲು ವಾಶಿಂಗ್ಟನ್‌ನಲ್ಲಿದ್ದರು. ಶಾಲಿನ್ ಪಾವೆಲ್‌ರನ್ನು ಭೇಟಿ ಮಾಡಿದ ನಂತರ ಮಾತಾಡುತ್ತಾ ಅವರು ಈ ಬುಶ್ ಸಿದ್ಧಾಂತದಲ್ಲಿ ಆಕ್ರಮಣಕಾರಿಯಾದ್ದು ಅಥವಾ ಹೊಸದು ಏನೂ ಕಾಣಸುತ್ತಿಲ್ಲ' ಎಂದರು ಮೊದಲೇ ಧಾಳಿ ನಡೆಸುವ ಹಕ್ಕು ಪ್ರತಿಯೊಂದು ದೇಶಕ್ಕೂ ಇದೆ. ವಿಶ್ವಸಂಸ್ಥೆಯ ಸನ್ನದಿನಲ್ಲಿರುವ ಸ್ವಯಂರಕ್ಷಣೆಯ ಹಕ್ಕಿನಂತದ್ದು ಇದು ಎಂದು ಅವರು ಹೇಳಿದ್ದಾರೆ. ಹೀಗೆ ಅಮೆರಿಕಾದ ಆಕ್ರಮಿ ನಿಯಮವನ್ನು ಕಣ್ಣುಮುಚ್ಚಿ ಬೆಂಬಲಿಸಿದ ಮೊದಲ ಸರಕಾರ ವಾಗಿಬಿಟ್ಟಿದೆ ಈ ಭಾರತದ ಸರಕಾರ. ಈ ಹಿಂದೆ ಬುಶ್‌ರವರ "ರಾಷ್ಟ್ರೀಯ ಕ್ಷಿಪಣಿ ರಕ್ಷಣೆ" ವ್ಯವಸ್ಥೆಯನ್ನು ಸ್ವಾಗತಿಸುವಲ್ಲಿ ಕೂಡಾ ಇದೇ ಭಾರತ ಸರ್ಕಾರ ಸರ್ವಾ ಪ್ರಥಮವಾಗಿತ್ತಲ್ಲವೇ?

ಪಚಿಂಗ್ ಸೂಪರ್ ಶಕ್ತಿ- ಅಮೇರಿಕನ್ ಸಂಸತ್ತಿಗೆ ಸಲ್ಲಿಸಿದ ಬುಶ್ ಸಿದ್ಧಾಂತ ಒಂದು ಸ್ವಯಂ-ಆಪಾದನೆಯ ದಸ್ತಾವೇಜು. ಅಮೇರಿಕಾ ಒಂದು ಪಚಿಂನ ಸೂಪರ್ ಶಕ್ತಿ ಎಂದು ಅದು ಸಾರಿಕೊಂಡಿದೆ. ನಮಗೆ ಮುನ್ನೆಚ್ಚರಿಕೆ ನೀಡಿರಲಿಲ್ಲ ಎಂದೂ ಈಗ ಯಾರೂ ದೂರುವಂತಿಲ್ಲ. ಇರಾಕಿನ ಮೇಲೆ ಒಂದು ವಿನಾಶಕಾರಿ ಯುದ್ಧ ಹೇರುವ ಬುಶ್‌ರ ನಿರಂತರ ಪ್ರಯತ್ನದಲ್ಲಿ ವಿಶ್ವ ಇಂತಹ ಒಂದು ಅತ್ಯಂತ ಒರಟಾದ, ಅಧಿಕಾರ ಮದತುಂಬಿದ ಸಿದ್ಧಾಂತದ ಪರಿಣಾಮಗಳನ್ನು ವೀಕ್ಷಿಸುತ್ತಿದೆ. ಇನ್ನೊಂದು ಮುನ್ನೆಚ್ಚರಿಕೆ ಇದೆ ಅದೀಗ ಆರಂಭವಾಗಿದೆಯಷ್ಟೆ.

ಸುಳ್ಳು ಮತ್ತು ಅಪಪ್ರಚಾರ : ಆರ್.ಎಸ್.ಎಸ್. ಶೈಲಿ

ಮಹಾತ್ಮಾಗಾಂಧಿಯವರ ಹುಟ್ಟುಹಬ್ಬದಂದು ಅವರನ್ನು ಹತ್ಯೆಗೈದ ಆರ್.ಎಸ್.ಎಸ್‌ನವರು ಮತ್ತೊಂದು ದೇಶವಿರೋಧಿ ಸಾಹಸಕ್ಕೆ ಕೈಹಾಕಿದ್ದಾರೆ. ಎಡಪಂಥೀಯರ ಬಗ್ಗೆ ಸುಳ್ಳು ಮತ್ತು ಅಪಹಾಸ್ಯದಿಂದ ಕೂಡಿದ್ದ ಪುಸ್ತಕವೊಂದನ್ನು ಬಿಡುಗಡೆ ಮಾಡುತ್ತಾ ಆರ್.ಎಸ್.ಎಸ್ ಮುಖ್ಯಸ್ಥರು ತಾವು ಗೋಬೆಲ್ಸನ ಮರಿಮಕ್ಕಳೆಂದು ಮತ್ತೊಮ್ಮೆ ಸಾಬೀತುಪಡಿಸುತ್ತಾ ಗೋಬೆಲ್ಸನ ಸೂತ್ರದಂತೆ ಒಂದು ಸುಳ್ಳನ್ನು ಪದೇ ಪದೇ ಗಟ್ಟಿಯಾಗಿ ಹೇಳಿ ಸತ್ಯವಾಗಿಸಲು ಹೊರಟಿದ್ದಾರೆ. ಪ್ರಧಾನ ಮಂತ್ರಿಗಳಾದಿಯಾಗಿ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರು ಎನ್.ಸಿ.ಇ.ಆರ್.ಟಿ ಪಠ್ಯಪುಸ್ತಕಗಳಲ್ಲಿ ಪಠ್ಯವಸ್ತುವಿಗೆ ಸಂಬಂಧಿಸಿ ಸುಪ್ರಿಂ ಕೋರ್ಟಿನ ತೀರ್ಪನ್ನು ನಗ್ನವಾಗಿ ತಿರುಚಿ, ತಪ್ಪಾಗಿ ಅರ್ಥೈಸಿ ಭಾರತೀಯ ಶಿಕ್ಷಣವನ್ನು ಕೋಮುವಾದೀಕರಿಸುವ ತಮ್ಮ ಕುಖ್ಯಾತ ಯೋಜನೆಗೆ ಅಂಗೀಕಾರವೆಂಬಂತೆ ಚಿತ್ರಿಸುತ್ತಿದ್ದಾರೆ. ಕೇಂದ್ರೀಯ ಶೈಕ್ಷಣಿಕ ಸಲಹಾ ಮಂಡಳಿ (ಸಿ.ಎ.ಬಿ.ಇ)ಯು ಸಂವಿಧಾನಾತ್ಮಕ ಸಮಿತಿಯಲ್ಲದ್ದರಿಂದ ಅದನ್ನು ಕೇಳದೆ ಪಠ್ಯ ರಚನೆ ಮಾಡಿದ್ದು ಸಂವಿಧಾನ ಬಾಹಿರವಲ್ಲ ಎಂದು ಸುಪ್ರಿಂ ಕೋರ್ಟ್ ಹೇಳಿದೆ ಎಂದು ಮತ್ತೆ ಮತ್ತೆ ಪುನರ್‌ವರ್ತಿಸಲಾಗುತ್ತಿದೆ. ಆದರೆ ಅದೇ ಸಂದರ್ಭದಲ್ಲಿ ದಾರ್ಮಿಕ ಶಿಕ್ಷಣವನ್ನು ಯಾವುದೇ ಕಾರಣಕ್ಕೂ ವಿಕೃತಗೊಳಿಸಬಾರದೆಂಬ ಎಚ್ಚರಿಕೆಯನ್ನು ಸುಪ್ರಿಂ ಕೋರ್ಟ್ ನೀಡಿದೆ.

ಕೀಳುಮಟ್ಟಕ್ಕಿಳಿದ ನಾಯಕರು

ಆದರೆ ಈ ಸಂದರ್ಭದಲ್ಲಿ ಶಿಕ್ಷಣವನ್ನು ವಿಕೃತಗೊಳಿಸುವಿಕೆ ಹುಂಬತನದಿಂದ ನಡೆದಿದೆ. ಆರ್.ಎಸ್.ಎಸ್ ಮುಖ್ಯಸ್ಥರು ಎಡ ಶಕ್ತಿಗಳನ್ನು ಹಲ್ಲಿಯ ಬಾಲಕ್ಕೆ ಹೋಲಿಸುವುದರ ಮೂಲಕ ತಾನು ಮಾತ್ರ ಅಷ್ಟೊಂದು ಕೆಳಮಟ್ಟಕ್ಕಿಳಿಯಲು ಸಾಧ್ಯ ಎಂದು ತೋರಿಸಿಕೊಂಡಿದ್ದಾರೆ. ಆದರೆ ಕೆಲವು ಸರೀಸೃಪಗಳ ಬಾಲದಲ್ಲೇ ಚುಚ್ಚುವ ಮುಳ್ಳಿರುವುದು ಎಂಬುದನ್ನು ಆರ್‌ಎಸ್‌ಎಸ್‌ಗೆ ಮನವರಿಕೆ ಮಾಡಿಕೊಡಬೇಕಾಗಿದೆ.


ಕೇಂದ್ರ ಮಂತ್ರಿಗಳು ಎಡಪಂಥೀಯ ಬುದ್ಧಿಜೀವಿಗಳನ್ನು ಉಗ್ರಗಾಮಿಗಳಿಗೆ ಹೋಲಿಸುವ ತಮ್ಮ ಅಸಹ್ಯಕರ ಮಾತುಗಳನ್ನು ಪುನರುಚ್ಚರಿಸಿದ್ದಾರೆ. ಕಳೆದ ಕಾಲು ಶತಮಾನದಿಂದ ಎಡರಂಗಕ್ಕೆ ಮತ ನೀಡುತ್ತಿರುವ ಪಶ್ಚಿಮ ಬಂಗಾಳದ ಜನತೆಯನ್ನು ಕೂಡ ಹೀಯಾಳಿಸುವ ಮಟ್ಟಕ್ಕೆ ಅವರು ಇಳಿದಿದ್ದಾರೆ.

ಎಡಪಂಥೀಯರ ವಿರುದ್ಧ ಅವರು ಮಾಡುತ್ತಿರುವ ಟೀಕೆಗಳಲ್ಲಿ ಕೆಲವಕ್ಕೆ ಈಗಲೇ ಉತ್ತರಿಸಬೇಕಾಗಿದೆ. ಒಂದನೆಯದು ಕಮ್ಯುನಿಸ್ಟರು ಸ್ವಾತಂತ್ರ್ಯ ಚಳುವಳಿಯಲ್ಲಿ ವಹಿಸಿದ ಪಾತ್ರಕ್ಕೆ ಸಂಬಂಧಿಸಿದ್ದು, ಎರಡನೆಯದು ದೇಶವಿಭಜನೆಗೆ ಸಂಬಂಧಿಸಿದ್ದು.

ಸ್ವಾತಂತ್ರ್ಯ ಚಳುವಳಿಯಲ್ಲಿ ಕಮ್ಯುನಿಸ್ಟರು ಮಹತ್ತರ ಪಾತ್ರ ಈಗಾಗಲೇ ಶ್ರೀಮಂತವಾಗಿ ದಾಖಲೆಗೊಂಡಿರುವುದರಿಂದ ಅದರ ವಿವರಣೆ ಬೇಡ. 50ನೇ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಆಗಿನ ರಾಷ್ಟ್ರಪತಿ ಡಾ. ಶಂಕರ್‌ದಯಾಳ್‌ಶರ್ಮಾ ಹೇಳಿದಂತೆ ಸೆಪ್ಟೆಂಬರ್ 5 1942ರಲ್ಲಿ ಕಾನ್ಪುರ, ಅಹಮದಾಬಾದ್ ಇತರೆ ಕಡೆಗಳ ಕಾರ್ಮಿಕರ ಹೋರಾಟದ ನಂತರ ಬ್ರಿಟೀಷ್ ಸರ್ಕಾರದ ಕಾರ್ಯದರ್ಶಿಗಳು ಲಂಡನ್ನಿಗೆ ಕಳುಹಿಸಿದ ವರದಿಯಲ್ಲಿ ಹೀಗೆ ಹೇಳಿದ್ದಾರೆ" ಭಾರತ ಕಮ್ಯುನಿಸ್ಟ್ ಪಕ್ಷದ ಸದಸ್ಯರಲ್ಲಿ ಬಹಳಷ್ಟು ಜನರು ತಾವು ಬ್ರಿಟೀಷ್ ವಿರೋಧಿ ಕ್ರಾಂತಿಕಾರಿ ಮನೋಭಾವಗಳಿಂದ ಕೂಡಿದ್ದಾರೆ ಎಂಬುದನ್ನು ಸಾಬೀತುಪಡಿಸುತ್ತಲೇ ಇದ್ದಾರೆ" ಎಂದು ಹೇಳಿದ್ದಾರೆ.

ಆದರೆ ಇದಕ್ಕೆ ತದ್ವಿರುದ್ಧವಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಆರ್.ಎಸ್.ಎಸ್. ಪಾತ್ರ ಒಂದು ಬಹಿರಂಗ ಸತ್ಯ. 1942ರ ಕ್ವಿಟ್ ಇಂಡಿಯಾ ಚಳುವಳಿಯ ಸಮಯದಲ್ಲಿ ಬಾಂಬೇ ಗೃಹ ಇಲಾಖೆ ಗಮನಿಸಿದಂತೆ "ಸಂಘವು (ಆರ್.ಎಸ್.ಎಸ್) ಕಾನೂನಿನ ಚೌಕಟ್ಟಿನಲ್ಲೇ ಕೆಲಸ ಮಾಡುತ್ತಿದೆ. 1942ರಲ್ಲಿ ನಡೆದ ಯಾವುದೇ ಪ್ರತಿಭಟನೆಯಲ್ಲಿ ಸಂಘವು ಭಾಗವಹಿಸಲಿಲ್ಲ ಎಂಬುದು ಸತ್ಯವಾಗಿದೆ" ಅದರ ಪ್ರಮುಖ ನಾಯಕ ನಾನಾಜಿ ದೇಶ್‌ಮುಖ್‌ರವರ ಹೀಗೆ ಕೇಳುತ್ತಾರೆ ನೋಡಿ "ಸಂಘವು ಒಂದು ಸಂಘಟನೆಯಾಗಿ ಸ್ವಾತಂತ್ರ್ಯ ಚಳುವಳಿಯಲ್ಲೇಕೆ ಭಾಗವಹಿಸಬೇಕು?" ಈ ಮೇಲಿನ ಹೇಳಿಕೆ ಅವರು ಸ್ವಾತಂತ್ರ್ಯ ಚಳುವಳಿಯಲ್ಲಿ ವಹಿಸಿದ ಪಾತ್ರ ಅರ್ಥವಾಗುತ್ತದೆ.

ಸ್ವಾತಂತ್ರ್ಯ ಚಳುವಳಿಯಲ್ಲಷ್ಟೇ ಅಲ್ಲ, ದೇಶ ವಿಭಜನೆಗೂ ಆರ್.ಎಸ್.ಎಸ್ ನ ಕಾಣಿಕೆಯೇ ಪ್ರಧಾನವಾದುದು. ಮುಸ್ಲಿಂಲೀಗ್ ಆ ಬೇಡಿಕೆಯನ್ನು ಇಡುವ ಮೊದಲೆ ಮುಸಲ್ಮಾನರದು ಬೇರೆ ರಾಷ್ಟ್ರೀಯತೆ ಹಿಂದೂಗಳದು ಬೇರೆ ರಾಷ್ಟ್ರೀಯತೆ ಹಾಗಾಗಿ ಅವರು ಬೇರೆ, ನಾವು ಬೇರೆ ಇರುವುದೇ ಒಳ್ಳೆಯದೆಂದು ದ್ವಿರಾಷ್ಟ್ರ ಸಿದ್ಧಾಂತವನ್ನು ಪ್ರತಿಪಾದಿಸಿದವರು ಕೂಡ ಇವರೆ. ಆದರಿಂದ ಇವರಿಗೆ ಕಮ್ಯುನಿಷ್ಟರಿಗೆ ಬುದ್ಧಿ ಹೇಳುವ ಯಾವ ನೈತಿಕತೆಯೂ ಇಲ್ಲ.



ಕಥೆ 3

ಒಂದು ಮಂಚದ ಕಥೆ

ಡಾ.ಆರ್.ವಿ.ಭಂಡಾರಿ

ಶಾಲೆ ಬಿಟ್ಟ ನಾಗೇಶ ಒಣೆಯ ಆರು ಮನೆಯ ದನಕರುಗಳನ್ನು ಅಡವಿಗೆ ಮೇಯಿಸಲು ಕರೆದೊಯ್ಯತೊಡಗಿದ. ಅಲ್ಲಿಗೆ ತನ್ನಂತೆ ಬಂದ ವಾರಗೆಯ ಹುಡುಗರೊಂದಿಗೆ ಆಟ. ಅಲ್ಲಿಯೂ ಮಂಚದ ಕನಸು. ದನ ಕಾಯುವಲ್ಲಿ ನಿಗಾ ಕಮ್ಮಿಯಾಗಿ ಹುಲಿಗುರ್ಕ ಒಡೆಯರ ಹಸುವನ್ನು ಹಿಡಿದು ಒಯ್ದಿತು, ಮುಂದೆ ಒದೆತ... ಅವ್ವನಿಗೆ ಅನಾರೋಗ್ಯ, ಆದರೂ ದುಡಿತ, ಹೀಗಾಗಿ ನಾಗೇಶನ ಮೇಲೆ ಸಂಸಾರದ ಹೊಣೆ. ಸ್ವಂತ ಮನೆಯಿಲ್ಲದ ನಾಗೇಶ ಸರಕಾರಿ ಭೂಮಿ ಅತಿಕ್ರಮಿಸಿ ಮನೆ ಕಟ್ಟಿದ...

ನಾವು ಬಾವಿ ತೋಡಿಕೊಂಡು, ಗೋಡೆ ಹಾಕಿದವು. ಮುರಿಗೆ ಮುರಿ. ಅವರ ಮನೆಗೆ ನಾನು, ನನ್ನ ಮನೆಗೆ ಅವರು. ಮಣ್ಣಿನದೇ ಮನೆ. ಅಗಲವಾಗಿ ಗೋಡೆ ಹಾಕಿದ್ದರಿಂದ ಮಜಭೂತೇ ಇತ್ತು. ಮಾಡಿಗೆ ಹಂಚು ಹಾಕಬೇಕೆಂದು ಆಲೋಚನೆ ಇತ್ತು. ಆದರೆ ಅದಕ್ಕೆ ಹಣ ಸಾಕಾಗುತ್ತಿರಲಿಲ್ಲ. ಆದ್ದರಿಂದ ಮುಂದೆಲ್ಲಾದರೂ ಹಂಚು ಹೊದೆಸಲು ಅನುಕೂಲ ಆಗಲೆಂದು, ತೆಂಗಿನ ಪಟ್ಟಿಯ ಪಕಾಸು, ಜಂತಿ ಮಾಡಿಸಿದೆ.

ಅದೇ ಹೊತ್ತಿನಲ್ಲಿ ಮೇಲಿನ ಮನೆ ಗುರುಪಾದಣ್ಣ ಹೇಳಿದ್ದ, "ಹಂಚು ಹಾಕಿಸ್ತ ರೀಪ್ ಬೇಕಾದರೆ ಹೇಳು, ಸೊಯಿಲಿ ಕೊಡಸ್ತೆ, ಮತ್ತೆ ಡಿಪೋಕ್ಕೆ ಹೋದರೆ ತುಟ್ಟಿ. ಅದೂ ಚಲೋ ಜಾತೀದು ಸಿಕ್ಕುದಿಲ್ಲ" ನನಗೂ ಹೌದೆನ್ನಿಸಿತು. ಆದರೆ ಹಾಕೆ ಮನಸ್ಸು ಒಪ್ಪಲಿಲ್ಲ. ಬೇಡ ಎಂದಿದ್ದೆ. ಡಿಪೋದಿಂದಲೇ ತಂದು ಹಾಕಿದ್ದೆ. ಕಿಡಕಿ ಹಳೆಯದು ನನಗೆ ಸಿಕ್ಕಿತು, ಬಾಗಿಲಿಗೆ ಮಾತ್ರ ಡಿಪೋದಿಂದ ತರಲು ಆಗಲಿಲ್ಲ. ಉಪಾಯವೇ ಇಲ್ಲ ಎಂದು ಊರಿನ ಆಚಾರಿಗೇ ಗುತ್ತಿಗೆ ಕೊಟ್ಟು ಮಾಡಿಸಿದೆ. ಕಟ್ಟಿಗೇ ಅವರದ್ದೇ.

ಈಗ ನನ್ನ ಮನೆ ಮೊದಲಿನ ತಟ್ಟಿ ಗುಬ್ಬಿಯಿಂದ ಇಲ್ಲಿಗೆ ಬಂತು. ಅವ್ವ, ಸಣ್ಣಕ್ಕ, ತಾವೇ ದರೆ ಅಗೆದು ಮಣ್ಣು ಸಾಣಿಸಿದ್ದರು. ನಾನು ನೀರು ಹಾಕಿ, ಮಣ್ಣು ತುಳಿದು, ಹದಗೊಳಿಸಿಕೊಟ್ಟಿದ್ದೆ. 'ಸುಣ್ಣದ ಮಣ್ಣನ್ನು ಹಾಕಿ ಕೈಗುಳ್ಳೆ ಬಂದು ಹೋಯಿತು ಮಗಾ' ಎಂದು ಅವ್ವ 'ಉಫ್' ಎಂದು ಕೈ ಊದಿಕೊಳ್ಳುತ್ತಿದ್ದಳು. ನೆಲಕ್ಕೆ ಜಾಜು ಹಾಕಿ, ಮೂರು ಮೂರು ಸಾರೆ ವರೆದು ಫಳಫಳಗೊಳಿಸಿದ್ದರು. ಅದನ್ನು ನೋಡಿ, 'ಆಹಾ! ಇಂಥ ಮನೆಗೆ ಒಂದು ಮಂಚ ಬೇಡವೇ?' ಅನ್ನಿಸಿತ್ತು. ಮಂಚವನ್ನು ಇಡಲೆಂದೇ ಮುಂದಾಲೋಚನೆಯಿಂದ ನನಗಾಗೇ ಒಂದು ಮೋರಿ ತಯಾರಿಸಿಕೊಂಡಿದ್ದೆ.

ಅಂಗಳ ಮತ್ತು ಹಿಂದುಗಡೆಯ ಮೂಲೆಯಲ್ಲಿ ಒಂದೊಂದು ತೆಂಗಿನ ಸಸಿ, ಕಾಲು ತೊಳೆಯುವಲ್ಲಿ ಬಾಳೆಗಿಡ, ಬಚ್ಚಲ ಹಿಂದೆ ಬಸಳೆ ನೆಟ್ಟಿದ್ದೆ. ಅಂಗಳದ ಅಂಚಿಗೆ ನಾಲ್ಕಾರು ಹೂಗಿಡ. 'ಹೂ ಮುಡಿವವಳು ಯಾ ಭಾಗ್ಯವತಿಯೊ' ಎಂದು ಅಮ್ಮ ನಗುತ್ತಿದ್ದಳು.

ಹಾಗೆ ಒಂದು ವರ್ಷ ಕಳೆಯುವಷ್ಟರಲ್ಲೇ ಒಂದು ದನ ತೆಗೆದುಕೊಂಡೆವು. ಸಣ್ಣದಾಗಿ ಪಟ್ಟಾಗಿತ್ತು. ತರಪಿನಲ್ಲಿ ತೆಗೆದುಕೊಂಡದ್ದರಿಂದ ಸೋಯಿಲಿ ಸಿಕ್ಕಿತು. ಅದು ಕಟ್ಟಿ ಕರುಹಾಕಿದ ಮೇಲೆ ನಮಗೆ ಹಾಲಿನ ಚಿಂತೆಯೂ ಇರಲಿಲ್ಲ. ಗೋಮಯಕ್ಕಾದರೂ ಒಂದು ಬಾಲ ಬೇಕು ಎನ್ನುತ್ತಿದ್ದ ಅವ್ವನ ಆಶೆಯೂ ನೆರವೇರಿತ್ತು. ಅವರಿವರು ಗಂಟಿಕರು ಸಾಕುವುದನ್ನು ನೋಡುತ್ತಿದ್ದ ಅವ್ವ ಮತ್ತು ಸಣ್ಣಕ್ಕರಿಗೆ ಬಹಳ ಸಂತೋಷವಾಗಿಬಿಟ್ಟಿತು. ಹಸುವನ್ನು ಮತ್ತು ಅದರ ಪುಟೀಕರುವನ್ನು ಮಕ್ಕಳಂತೆ ಆರೈಕೆ ಮಾಡುತ್ತಿದ್ದರು. ಅವ್ವ ಇದ್ದುದರಲ್ಲೇ ತುಸು ಹಾಲು ಉಳಿಸಿ ಮಾರುತ್ತಿದ್ದಳು. ಹೀಗೆ ತುಸು ಹಣ ಉಳಿಯುತ್ತಿದ್ದಂತೆ, ನನ್ನಲ್ಲಿ ಒಂದೊಂದು ಸಲ ಮಂಚ ಮೂಡಿಬರುತ್ತಿತ್ತು. ಆದರೆ ಅವ್ವನಿಗೆ ಸಣ್ಣಕ್ಕನ ಮದುವೆಯ ಚಿಂತೆ ಹೆಚ್ಚಾಗುತ್ತಲೇ ಇತ್ತು. ಅದು ನನ್ನ ಜವಾಬ್ದಾರಿಯೂ ಆಗಿತ್ತು.

ನನಗೆ ಹದ್ನೈದು ವರ್ಷಕ್ಕೆ ಮದುವೆಯಾಯಿತು. ಅದಕ್ಕೆ ಕಾರಣ ಸಣ್ಣಕ್ಕನ ಮದುವೆ. ಅಂದರೆ, ನನ್ನ ಮದುವೆಯೊಟ್ಟಿಗೆ ಸಣ್ಣಕ್ಕನ ಮದುವೆಯೂ ನಡೆಯಿತು. ನನ್ನ ಅವ್ವನ ದುಃಖವೊಂದು ನಿವಾರಣೆಯಾಯಿತು.

ಅದಕ್ಕೆ ಕಾರಣರಾದವರು ನಮ್ಮ ಕಲಾಯಿ ಸಾಯ್ಬರು. ಅವರ ಹೆಸರು ಏನೆಂದು ನಮಗೆ ಗೊತ್ತೇ ಇರಲಿಲ್ಲ. ನಾವು ಪ್ರೀತಿಯಿಂದ, 'ಕಲಾಯಿ ಸಾಯ್ಬರು' ಎಂದು ಕರೆಯುತ್ತಿದ್ದೆವು. ಅವರು ಹಳದೀಪುರದವರು. ಬೇಸಿಗೆಯಲ್ಲಿ ಎರಡು-ಮೂರು ತಿಂಗಳು ನಮ್ಮೂರಿನಲ್ಲಿ ಅವರು ಠಿಕಾಣಿ ಹೂಡುತ್ತಿದ್ದರು. ಊರ ಮೇಲೆಲ್ಲ ತಿರುಗಿ ಹಳೆಯ ಪಾತ್ರೆಗಳಿಗೆ ಕಲಾಯಿ ಹಾಕುತ್ತಿದ್ದರು. ಅವರಿಗೆ ನನ್ನ ಅಪ್ಪನ ಪರಿಚಯ ಚೆನ್ನಾಗಿ ಇತ್ತು. ಆತನ ಬಗ್ಗೆ ಆದರ ಕೂಡ. ಹೀಗಾಗಿ ನನ್ನ ಅಪ್ಪನ ಸಾವು ಅವರಿಗೂ ದುಃಖದಾಯಕವೆ. ಆದ್ದರಿಂದ ನನ್ನ ಅವ್ವನನ್ನು ಕಂಡಾಗೆಲ್ಲ, 'ಹೆಂಗಿದ್ದಿ ತಂಗಿ, ಮಕ್ಕಳು ಹೇಂಗವರೆ? ದೇವ್ರು ಒಳ್ಳೇದ ಮಾಡ್ತಾನೆ' ಎಂದು ಆಕಾಶ ನೋಡುತ್ತಿದ್ದರು. 'ನಿನ್ನ ತಾಯಿಗೆ ಏನು ಹುಶಾರಿಲ್ಲ?' ಎಂದು ಕೇಳಿದಾಗ, ನಾನೇ ಸಣ್ಣಕ್ಕನ ಮದುವೆಯ ಚಿಂತೆಯ ವಿಷಯ ಹೇಳಿದ್ದೆ. ಅವರು ಒಂದು ಸಂಬಂಧ ತಂದಿದ್ದರು.

ಹಳದೀಪುರದಲ್ಲಿ ಅವರ ಪರಿಚಯದ ಮನೆಯ ಮಗಳು. ಅವಳ ತಾಯಿ ಕಾಯಿಲೆಯಲ್ಲಿ ಸತ್ತುಹೋಗಿದ್ದಳು. ಹೆಂಡತಿ ಸತ್ತು ವರ್ಷ ಮುಗಿಯುವುದರೊಳಗೇ ಮದುವೆಯಾಗಿ ಬಿಡಬೇಕೆಂಬ ಗಂಡು ರೂಢಿಯಂತೆ ಮರುಮದುವೆಯಾದ ಅವಳ ಅಪ್ಪ. ಆಮೇಲೆ ಶುರುವಾಯಿತು ಕಾಟ. ಆ ಕಾಟ ತಡೆಯಲಾರದೆ ಬಳಲಿದ್ದಳು. ಅವಳನ್ನು ಹೇಗಾದರೂ ಮಾಡಿ ದಾಟಿಸಬೇಕೆಂಬುದು ತಂದೆಯ ವಿಚಾರವಾಗಿತ್ತು. ಮದುವೆಗೆ ಬಂದ ತಮ್ಮನೊಬ್ಬನಿದ್ದ ಅವರಿಗೆ. ಅವನಿಗೂ ಬೇಗ ಮದುವೆ ಮಾಡಬೇಕೆಂಬ ಒತ್ತಡ ಇತ್ತು. ಆ ತಮ್ಮನಿಗೆ ಸಣ್ಣಕ್ಕನನ್ನು ಕೊಡುವುದು ಮತ್ತು ನನಗೆ ಅವರ ಮಗಳನ್ನು ಕೊಡುವುದು ಎಂದು ಕಲಾಯಿ ಸಾಯ್ಬರು ಮಾಡಿದ ನೆಂಟಸ್ತನ. ಅಪರೂಪಕ್ಕೊಮ್ಮೆ ಎಲ್ಲಾದರೂ ಸಾಂತಪ್ಪನ ಮಗಳು ಭೆಟ್ಟಿಯಾಗುತ್ತಿದ್ದಳು. ಆಗ ಚೆಂದಾಗಿ ನಕ್ಕು ಮಾತಾಡುತ್ತಿದ್ದಳು. ಆದರೆ ಮತ್ತೇನೂ ಇರಲಿಲ್ಲ. ಆದರೂ ಅವಳ ನೆನಪು ನನ್ನನ್ನು ಕಾಡಿತು. ಆದರೆ ಸಣ್ಣಕ್ಕನ ಜವಾಬ್ದಾರಿಯೂ ನನ್ನದಾಗಿತ್ತು. ಅವ್ವನ ಚಿಂತೆ ಬೇರೆ. ನಾನು ಒಪ್ಪಿದೆ. ಹೀಗಾಗಿ ಮದುವೆ ನಡೆದುಹೋಯಿತು.

ಈ ಮದುವೆಯಿಂದ ನನಗೇನೂ ಹಾನಿಯಾಗಲಿಲ್ಲ. ನನ್ನ ಹೆಂಡತಿಯಾಗಿ ಬಂದವಳು ರಮಾ. ಅವಳು ಸಾತ್ವಿಕಳಾಗಿದ್ದಳು. ನಾನು ನಾಲ್ಕನೇ ತರಗತಿ ಪಾಸಾಗಿದ್ದರೆ, ರಮಾ ಆರನೇ ತರಗತಿ ಪಾಸಾಗಿದ್ದಳು. ಮುಂದೆ ಮಲತಾಯಿಯ ಸೇವೆಗಾಗಿ ಶಾಲೆ ಬಿಡಬೇಕಾಗಿ ಬಂದಿತ್ತಂತೆ.

ಆದರೆ ಗಂಡನಿಗಿಂತ ಹೆಚ್ಚು ಕಲಿತವಳೆಂಬ ಜಂಬ ಅವಳದಾಗಿರಲಿಲ್ಲ. ಅಡಿಗೆ ಊಟದಲ್ಲಿ ಚೊಕ್ಕ, ರುಚಿಯಾಗಿ ಮಾಡುತ್ತಿದ್ದಳು. ಮೀನ ಪಳ್ದಿ ಮಾಡುವುದರಲ್ಲೂ ಎತ್ತಿದ ಕೈ. ಪೇಟೆಯವಳಲ್ಲವೆ?

ಮುಂದುವರಿಯುವುದು

ಅನಿಸಿಕೆ ಬರೆದು ಕಳಿಸಿ

ಈ ಕಥೆಯ ಬಗ್ಗೆ ವಿಮರ್ಶೆ, ಅಭಿಪ್ರಾಯಗಳನ್ನು ಆಹ್ವಾನಿಸುತ್ತೇವೆ. ಕಥೆ ಪೂರ್ಣ ಪ್ರಕಟಗೊಂಡ ಬಳಿಕ ಚಿಕ್ಕದಾಗಿ ಚೊಕ್ಕವಾಗಿ ಬರೆದು ಕಳಿಸಿ.

- ಸಂ.

......ಕೇಸರೀಕರಣದ ತೀರ್ಪು

ಪುಟ ಐದರಿಂದ

ಮುಂದುವರಿಸುವುದು ಎಂದೇ ಅರ್ಥವಲ್ಲವೆ?


ಗಂಡು ಮಕ್ಕಳಿಗೆ ಇಲ್ಲದ ಗೃಹ ನಿರ್ವಹಣೆ ಕೋರ್ಸನ್ನು ಹೆಣ್ಣು ಕಲಿಸುವುದೆಂದರೇನು? ಕುಟುಂಬ ಹೊರಗಿನ ಸಾಮಾಜಿಕ - ಸಾಂಸ್ಕೃತಿಕ-ಆರ್ಥಿಕ -ರಾಜಕೀಯ ಬದುಕಿನಲ್ಲಿ ಮಹಿಳೆಗೆ ಅಂಥ ಮಹತ್ವದ ಪಾತ್ರವೇನಿಲ್ಲ. ಕುಟುಂಬದ ಇತರ ಸದಸ್ಯರ 'ಸೇವೆಗೈಯ್ಯುವ' 'ಗೃಹ ನಿರ್ವಹಣೆ'ಗೆ ಆಕೆ ಸೀಮಿತವಾಗಬೇಕೆಂಬ 'ಮನುವಾದಿ' ಚಿಂತನೆಯ ಪ್ರೇರಣೆ ಈ ಕ್ರಮದ ಹಿಂದೆ ಇಲ್ಲವೆ?

ಸರಸ್ವತಿ ವಂದನೆಯನ್ನು ಶಾಲಾ-ಕಾಲೇಜುಗಳಲ್ಲಿ ಏಕೆ ಹಾಡಬೇಕು. ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ವೈಚಾರಿಕ ಮನೋಭಾವ ರೂಪಿಸುವ ಪರಿಯೇ ಇದು? ಶಿಕ್ಷಣ ಸಚಿವರುಗಳ ಸಮ್ಮೇಳನದಲ್ಲಿ ಆದಂತೆ ಶಾಲಾ-ಕಾಲೇಜುಗಳಲ್ಲೂ 'ರಾಷ್ಟ್ರಗೀತೆ'ಗೆ ಈ 'ಸರಸ್ವತಿ ವಂದನೆ' ಪರ್ಯಾಯವೇ? ಸರಸ್ವತಿ ವಂದನೆಯನ್ನು ಕಡ್ಡಾಯಗೊಳಿಸುವುದು ಎಂದರೆ ದೇಶದ ಬಹುಧರ್ಮಿಯವೂ ಸಾಮಾಜಿಕ -ಸಾಂಸ್ಕೃತಿಕವಾಗಿ ವೈವಿಧ್ಯಮಯವೂ ಆದ ಭಾರತದ ಬಹುಮುಖಿ ಸಂಸ್ಕೃತಿಯನ್ನು ಜಾತ್ಯಾತೀತ ಮೌಲ್ಯವನ್ನು ಧಿಕ್ಕರಿಸಿದಂತೆ ಅಲ್ಲವೆ?

ಭಾರತೀಯ ಜನತಾ ಪಕ್ಷ ಅಧಿಕಾರ ನಡೆಸಿರುವ ನಡೆಸುತ್ತಿರುವ ರಾಜ್ಯಗಳಲ್ಲಿ ಶಾಲಾ ಪಠ್ಯಗಳಲ್ಲಿ ಇತಿಹಾಸ-ಸಮಾಜಶಾಸ್ತ್ರ- ನೈತಿಕ ಶಿಕ್ಷಣ ಕಡೆಗೆ ಗಣಿತ- ವ್ಯಾಕರಣಗಳಲ್ಲೂ ಮತಾಂಧತೆಯ ವಿಷವನ್ನು ಈಗಾಗಲೇ ಬೆರೆಸಲಾಗಿದೆ.

ಹಿಂದೆ ಉತ್ತರ ಪ್ರದೇಶದ ಇತಿಹಾಸ ಪಠ್ಯದಲ್ಲಿ 'ಆರ್ಯರನ್ನು ಭಾರತದ ಮೂಲ ನಿವಾಸಿಗಳು' ಎಂದು ಸಾಧಿಸಲು ಹೆಣಗಿಲ್ಲವೆ?

ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್.ಎಸ್.ಎಸ್) ನಡೆಸುವ ಸರಸ್ವತಿ ಶಿಶು ಮಂದಿರಗಳಲ್ಲಿ ಕಲಿಸಲಾಗುವ 4ನೇ ತರಗತಿ ಪಠ್ಯ 'ಗೌರವ ಗಾಥಾಂ' ದಲ್ಲಿ 'ಕುತುಬ್ ಮಿನಾರ್'ನ್ನು ಸಮುದ್ರ ಗುಪ್ತ ಕಟ್ಟಿಸಿದ ಎಂದು ವಿವರಿಸಲಾಗಿದೆಯಲ್ಲ? "ಅಕ್ಬರನ ನಾಲಿಗೆ ಸಿಹಿಯಾಗಿದ್ದರೂ ಆತನೂ ವಿದೇಶಿಯನೇ' ಎಂದು ರಾಣಾ ಪ್ರತಾಪನು ಮರೆಯಲಿಲ್ಲ' ಎಂಬ ಮಾತುಗಳ ಅರ್ಥವೇನು?



ಉತ್ತರ ಪ್ರದೇಶದ ತರಗತಿ ಒಂಭತ್ತು ಹಾಗೂ ಹತ್ತಕ್ಕೆ ನಿಗದಿಗೊಳಿಸಲಾಗಿದ್ದ 'ಇತಿಹಾಸ ಪಠ್ಯ ಪುಸ್ತಕಗಳನ್ನು ಹಾಗೂ ಎರಡು ಗಣಿತ ಪಠ್ಯ ಪುಸ್ತಕಗಳನ್ನು 'ರಾಷ್ಟ್ರೀಯ ಸಂಚಾಲನ ಸಮಿತಿಯ' ಮೌಲ್ಯ ಮಾಪನ ಮತ್ತು ತೀವ್ರ ಆಕ್ಷೇಪದ ನಂತರ ಹಿಂತೆಗೆದುಕೊಂಡ ತೀರಾ ಇತ್ತೀಚಿನ ಇತಿಹಾಸ ಇದೆಯಲ್ಲ!! ಇದೇ ಆಕ್ಷೇಪದ ಪರಿಣಾಮವಾಗಿ ಗಣಿತದ ಪಠ್ಯಗಳಿಂದ ಆಕ್ಷೇಪಾರ್ಹ ವೇದ ಗಣೀತದ ಅಂಶಗಳನ್ನು ಕೈಬಿಡಲಾಗಿದೆ ಎಂಬ ಇತಿಹಾಸವನ್ನು ಸಂಘ ಪರಿವಾರದ ಸ್ನೇಹಿತರು ಮರೆತಿದ್ದಾರೆಯೇ?

ಈ ಶಿಕ್ಷಣ ಕೇಸರೀಕರಣ ಕೇವಲ ಅನ್ಯಧರ್ಮಿಯರನ್ನು ಕುರಿತು ಅಸಹನೆ - ಮತ್ತು ದ್ವೇಷ ಕಾರುವ ಗುರಿಯನ್ನಷ್ಟೇ ಹೊಂದಿಲ್ಲ. ಸಾಮಾಜಿಕ ಪ್ರಗತಿಯ ದೃಷ್ಟಿಯಿಂದ ಅತ್ಯಂತ ಆಕ್ಷೇಪಾರ್ಹವಾದ ಪ್ರತಿಗಾಮಿ ಸಾಂಮಾಜಿಕ ವಿಚಾರಗಳನ್ನು ಪ್ರತಿಪಾದಿಸುತ್ತಿದೆ ಎಂಬುದನ್ನು ಪ್ರಜ್ಞಾವಂತರಾದ ಯಾರಾದರೂ ಮರೆಯುವುದು ಸಾಧ್ಯವೇ?

ಗುಜರಾತ್ ರಾಜ್ಯದ 6ನೇ ತರಗತಿಯ ಸಮಾಜಶಾಸ್ತ್ರ ಪಠ್ಯದಲ್ಲಿ ಬಾಲ್ಯವಿವಾಹವನ್ನು ಸಮರ್ಥಿಸಲಾಗಿದೆ. ಇದಕ್ಕೆ ಸಣ್ಣ ವಯಸ್ಸಿನಲ್ಲೇ ಮದುವೆಯಾಗಿ ದಂಪತಿಗಳು ಒಟ್ಟಿಗೆ ಬೆಳೆಯುವುದರಿಂದ ಮುಂದಿನ ಸಾಂಸಾರಿಕ ಜೀವನದಲ್ಲಿ ಸಾಮರಸ್ಯದಿಂದ ಬದುಕು ನಡೆಸುವುದು ಸಾಧ್ಯ ಎಂಬುದು ಸಮರ್ಥನೆ. 'ಜನಾಂಗೀಯ ರಕ್ತ ಪರಿಶುದ್ಧತೆ' ಹಾಳಾಗುವ ಕಾರಣದಿಂದ ಅಂತರ ಜಾತೀಯ ವಿವಾಹಗಳು ಸ್ವಾಗತಾರ್ಹವಲ್ಲ ಎನ್ನುತ್ತದೆ ಇದೇ ಪಠ್ಯ. ಹಿಂದೂ ಸಂಸ್ಕೃತಿಯ ಉನ್ನತ ಪರಂಪರೆ ಎಂಬ ನೆಲೆಯಲ್ಲಿ ಸತಿ ಪದ್ಧತಿಯ ಕುರಿತು ವೈಭವೀಕರಣದ ಮಾತುಗಳಿವೆ.

ಇದೇ ಪಠ್ಯದಲ್ಲಿ ಮತ್ತೊಂದು ಬಹು ಮುಖ್ಯವಾದ ವಿಚಾರವಿದೆ. ದಲಿತ ಸಮುದಾಯದ ಸಾಮಾಜಿಕ - ಆರ್ಥಿಕ ಹಿಂದುಳಿದಿರುವಿಕೆಗೆ ಈ ಪಠ್ಯ ಅದ್ಭುತವಾದ ಕಾರಣವೊಂದನ್ನು ಪತ್ತೆ ಹಚ್ಚಿದೆ. ಶಿಕ್ಷಣವನ್ನು ಪಡೆಯುವ ವಿಚಾರದಲ್ಲಿ ದಲಿತ ಸಮುದಾಯದ ನಡುವೆ ಇರುವ ನಿರಾಸಕ್ತಿಯೇ ದಲಿತರ ಹಿಂದುಳಿದಿರುವಿಕೆಯ ಕಾರಣ!!

ಶಿಕ್ಷಣ ಕೇಸರೀಕರಣದ ಆರೋಪ ರಾಜಕೀಯ ಪ್ರೇರಿತ ಎನ್ನುವ ಸಂಘಪರಿವಾರದ ಜನ ಈ ಬಗೆಗೆ ಏನೆನ್ನುತ್ತಾರೆ. ಇವು ಕೇಸರೀಕರಣ ಅಲ್ಲವೆ?

ಬಿ.ಜೆ.ಪಿ. ನೇತೃತ್ವದಲ್ಲಿರುವ ರಾಜ್ಯ-ಕೇಂದ್ರ ಸರ್ಕಾರಗಳ ಕೃಪೆಯಿಂದಾಗಿ ದೇಶದ ವಿಶ್ವ ವಿದ್ಯಾಲಯಗಳಿಗೆ ಈಗ 'ಪುರೋಹಿತ'ರನ್ನು ಜ್ಯೋತಿಷಿಗಳನ್ನು ತಯಾರಿಸುವ ಘನ ಜವಾಬ್ದಾರಿ ಬಂದಿದೆ.

ಮಾನವ ಸಂಪನ್ಮೂಲ ಖಾತೆ ಮಂತ್ರಿಗಳಾದ ಡಾ. ಮುರಳಿ ಮನೋಹರ ಜೋಷಿ, ಉಮಾ ಭಾರತಿ, ಅಡ್ವಾಣಿ, ಮುಂತಾದ ಮಹಾನುಭಾವರ ಕೃಪೆಯಿಂದಾಗಿ ಮುಂದೆ ವಿಶ್ವ ವಿದ್ಯಾಲಯಗಳಲ್ಲಿ ನಮ್ಮ ದೇಶದ ಪ್ರಾಚೀನ ಮಹಾ ವಿದ್ಯೆ ಎಂಬ ನೆಲೆಯಲ್ಲಿ ವಿಶ್ವ ವಿದ್ಯಾಲಯಗಳಿಗೆ, 'ಮಾಟಗಾರರನ್ನು' ತಯಾರಿಸಿ ದೇಶ ವಿದೇಶಗಳಲ್ಲಿ ಭಾರತದ ಹೆಮ್ಮೆಯ ವಿದ್ಯೆಯನ್ನು ಪ್ರಸರಿಸುವ ಜವಾಬ್ದಾರಿ ಬರಬಹುದು.

ಮತ್ತು ಆಗಲೂ ದೇಶದ ಸಂವಿಧಾನಕ್ಕೆ ವಿರೋಧವಾದದ್ದು ಇದರಲ್ಲಿ ಏನೂ ಇಲ್ಲ ಎಂಬ ಕೋರ್ಟುಗಳ ತೀರ್ಪು ಬರಬಹುದು. ಶಿಕ್ಷಣದ ಕೇಸರೀಕರಣ ನಡೆದಿಲ್ಲ ಎಂಬ ವ್ಯಾಖ್ಯಾನಗಳು ಬರಬಹುದು ಅದನ್ನು ಎದುರಿಸಲು ನಾವು ಸಜ್ಜಾಗಿರಬೇಕಾದ ಪರಿಸ್ಥಿತಿ ಬಂದಿದೆ.

ಜಾಗತೀಕರಣದ ವಿರುದ್ಧ ಚಳುವಳಿಗೆ 'ಹೊಸ ಮಾದರಿ'

ಬ್ರೆಜಿಲ್‌ನಲ್ಲಿ ಬೇರೂರಿರುವ ಭೂರಹಿತ ಕೃಷಿ ಕಾರ್ಮಿಕರ ಚಳುವಳಿ

ಬ್ರೆಜಿಲ್‌ನಲ್ಲಿ ಸಾಮ್ರಾಜ್ಯಶಾಹಿ ಜಾಗತೀಕರಣದ ವಿರುದ್ಧ ಅತ್ಯಂತ ಸಫಲ ವ್ಯಾಪಕ ಚಳುವಳಿ ಬೇರೂರಿದ್ದು ಸುದ್ದಿ ಮಾಡುತ್ತಿದೆ. 1984ಲ್ಲಿ ಸ್ಥಾಪಿತವಾಗಿ, ಬೆಳೆದು, ಬೇರೂರಿರುವ ಚಳುವಳಿ ಹತ್ತು ಲಕ್ಷ ಜನರನ್ನು ಒಳಗೊಂಡಿದ್ದು, ಎರಡುವರೆ ಲಕ್ಷ ಕುಟುಂಬಗಳಿಗೆ ಭೂಗ್ರಹಣ ಮೂಲಕ ಕೃಷಿ ಭೂಮಿ ಒದಗಿಸಿದೆ. ಸರಕಾರಿ ಕೃಷಿ ಕೈಗೊಂಡು ಆಹಾರ ಉತ್ಪಾದಿಸುತ್ತಿದೆ. ತನ್ನದೇ ಆದ ಸ್ಕೂಲುಗಳು, ಕೃಷಿ ತರಬೇತಿ ಶಾಲೆಗಳು, ತನ್ನದೇ ಕೃಷಿ ನೀತಿ ಹೊಂದಿದೆ. ಭೂರಹಿತ ಕೃಷಿ ಕಾರ್ಮಿಕರಿಗೆ ಮಾತ್ರವಲ್ಲ ಬ್ರೆಜಿಲ್‌ನಲ್ಲಿ ಜಾಗತೀಕರಣಕ್ಕೆ ಬದಲಿ ರೂಪಿಸಲು ಹೊರಟಿರುವ ಎಡ-ಪ್ರಗತಿಪರ ರಾಜಕೀಯ ಶಕ್ತಿಗಾಗಿ, ಬುದ್ಧಿಜೀವಿಗಳಿಗೆ, ಕಾರ್ಮಿಕರ ಯೂನಿಯನ್‌ಗಳಿಗೆ, ವಿಮೋಚನಾ 'ಧಾರ್ಮಿಕತೆ' ಚಳುವಳಿಯ ಚರ್ಚಿನ ಪಾದ್ರಿಗಳಿಗೆ-ಕಾರ್ಯಕರ್ತರಿಗೆ ಅವರ ಕೆಲಸಗಳಲ್ಲಿ ಕೇಂದ್ರಬಿಂದುವಾಗಿ ಬೆಳೆದಿದೆ. ಕೃಷಿಯಲ್ಲಿ ಮೂಗುತೂರಿಸಿ ಕೆಡಿಸುತ್ತಿರುವ ಜಾಗತೀಕರಣದ ವಿರುದ್ಧ ಹೋರಾಟಕ್ಕೆ ಇದು ಹೊಸ ಮಾದರಿಯಾಗಬಹುದು ಎಂದು ಇಡೀ ಜಗತ್ತು ಈ ಚಳುವಳಿಯತ್ತ ನೋಡುತ್ತಿದೆ.

ಶರತ್‌ಚಂದ್ರ

ಇರೊನ್ ಡೊಮಿಂಗೋಸ್ ಸಾವ್ರೋ ಪಾಲೋ ಈ ಫ್ಯಾಕ್ಟರಿಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಆತ ಭೂಮಿ ಕಳೆದುಕೊಂಡು ನಗರಕ್ಕೆ ವಲಸೆ ಹೋಗಲು ಆತನಿಗೆ ಶೋಫ್ಯಾಕ್ಟಂ ಕೊಡುತ್ತಿದ್ದ ಕೂಲಿ ಎರಡು ಹೊತ್ತು ಮಾಡಿದ್ದರೂ ಸಾಲುತ್ತಿರಲಿಲ್ಲ. ಬ್ರೆಜಿಲ್‌ನ ಭೂರಹಿತ ಕೃಷಿ ಕಾರ್ಮಿಕರ ಚಳುವಳಿ (MST - MOVIMENTO DOS TRABALHADORES RURRAIS SEM TERRA ಬ್ರೆಜಿಲ್‌ನ ಭಾಷೆಯಲ್ಲಿ)ಯ ಕಾರ್ಯಕರ್ತನೊಬ್ಬ ಇದಕ್ಕಿಂತ ಉತ್ತಮ ಜೀವನ ಸಾಧ್ಯ ಎಂದು ತಿಳಿಹೇಳಿದ.

ಒಂದು ಬೆಳಗು ಡೊಮಿಂಗೊನ್‌ನ ಕುಟುಂಬ (ತಂದೆ, ತಾಯಿ, ಹೆಂಡತಿ, ಮಕ್ಕಳು) ನಾಲ್ಕು ನೂರು ಕುಟುಂಬಗಳು ನಡೆಸಿದ ಭೂಗ್ರಹಣ ಚಳುವಳಿಯಲ್ಲಿ ಸೋತು ಬ್ರೆಜಿಲ್‌ನ ದಕ್ಷಿಣದ ಪ್ರಾಂತ್ಯಗಳಲ್ಲೊಂದಾದ ರಿಯೋ ಗ್ರಾಂಡ್ ಡೊ ಸುಲ್‌ನಲ್ಲಿ ಖಾಲಿ ಬಿದ್ದಿದ್ದ ಭಾರಿ ಫಾರ್ಮು ಒಂದನ್ನು ಇವರು ಆಕ್ರಮಿಸಿಕೊಂಡರು. ನಾಲ್ಕು ಗಂಟೆಗೆ ಬೆಳಿಗ್ಗೆ ಈ ಕುಟುಂಬಗಳು ಫಾರ್ಮು ಹೊಕ್ಕು ಬೆಳಿಗ್ಗೆ ಹೊತ್ತಿಗೆ ಹೊತ್ತು ಮೂಡುವುದರೊಳಗೆ ಕಪ್ಪು ಪ್ಲಾಸ್ಟಿಕ್ ಟೆಂಟ್‌ಗಳು ಆಗಲೇ ಬೇರೂರಿದ್ದವು. ಕರಿಯ ಪ್ಲಾಸ್ಟಿಕ್ ಟೆಂಟ್‌ಗಳು ಎಮ್.ಎಸ್.ಟಿ ಚಳುವಳಿಯ 'ಟ್ರೇಡ್‌ಮಾರ್ಕ್'ನಂತೆ ಆಗಿದೆ.

ಈಗ ಡೊಮಿಂಗೋಸ್ ಎಮ್.ಎಸ್.ಟಿಯ ಸಕ್ರಿಯ ಸದಸ್ಯರಲ್ಲೊಬ್ಬ ಈಗ ಆತನ ತನ್ನ ಅರ್ಧ ಸಮಯವನ್ನು ಎಮ್.ಎಸ್.ಟಿ ನಡೆಸುವ ತಾಂತ್ರಿಕ ಸ್ಕೂಲ್‌ನಲ್ಲಿ ಕೃಷಿ ಸಹಕಾರಿ ನಡೆಸಲು ಬೇಕಾದ ನೈಪುಣ್ಯ ಕಲಿಯುತ್ತಿದ್ದಾನೆ. ಉಳಿದರ್ಧ ಸಮಯ ತನ್ನ ಕಾಲೋನಿಯ ಹೊಲಗಳಲ್ಲಿ ದುಡಿಯುತ್ತಾನೆ. ನಾನು ಕಲಿತದ್ದು ತಕ್ಷಣ ಪ್ರಯೋಗ ಮಾಡುತ್ತಿದ್ದೇನೆ' ಎನ್ನುತ್ತಾನೆ.



ನೂರಾರು-ಸಾವಿರಾರು ಇಂತಹ ಕಾಲೋನಿಗಳು ಲಕ್ಷಾಂತರ ಡೊಮಿಂಗೊಗಳ ಈ ಸಫಲ-ಕಥೆ ಹಿಂದೆ ಇರುವ ಸಂಘಟನೆ ಎಮ್.ಎಸ್.ಟಿ ಇದರಿಂದಾಗಿಯೇ ಎಮ್.ಎಸ್.ಟಿ ಪಶ್ಚಿಮ ಗೋಲಾರ್ಧದಲ್ಲಿ ಅತ್ಯಂತ ದೊಡ್ಡ, ಸಫಲ ಜನ ಚಳುವಳಿಯಾಗಿ ಹೊಮ್ಮಿದೆ. ಸಾಮ್ರಾಜ್ಯಶಾಹಿ ಜಾಗತೀಕರಣದ ಹೋರಿಯನ್ನು ಅದರ ಹಿತ್ತಲಲ್ಲೇ, ಅದರ ಕೊಂಬು ಹಿಡಿದು ಬಗ್ಗಿಸುವುದರಲ್ಲಿ ಸಫಲವಾಗಿದೆ. 1984ರಲ್ಲಿ ಸ್ಥಾಪಿತವಾದ ಈ ಸಂಸ್ಥೆ ಎರಡುವರೆ ಲಕ್ಷ ಕುಟುಂಬಗಳಿಗೆ ಕೃಷಿ ಭೂಮಿ ಒದಗಿಸುವುದರಲ್ಲಿ ಸಫಲವಾಗಿದೆ. ಎಮ್.ಎಸ್.ಟಿಯ ಕಾಲೋನಿಗಳಲ್ಲಿ ಸಾವಿರ ಸ್ಕೂಲುಗಳು ಮತ್ತು ಚೆನ್ನಾಗಿ ಲಾಭದಿಂದ ನಡೆಯುತ್ತಿರುವ ಕೃಷಿ ಸಹಕಾರಿಗಳ ಜಾಲವನ್ನೇ ಸ್ಥಾಪಿಸಿದೆ.

ಬ್ರೆಜಿಲ್ ಜಗತ್ತಿನ ಅತೀ ದೊಡ್ಡ (ವಿಸ್ತಾರ, ಜನಸಂಖ್ಯೆಯಲ್ಲಿ) ಆರ್ಥಿಕವುಳ್ಳ ದೇಶಗಳಲ್ಲಿ ಒಂದು. ಅತೀ ದೊಡ್ಡ ಅಸಮಾನತೆಗಳುಳ್ಳ ದೇಶ ಸಹ. ಅದರಲ್ಲೂ ಭೂ ಒಡೆತನದಲ್ಲಿ ಈ ಅಸಮಾನತೆ ಕಣ್ಣಿಗೆ ಹೊಡೆಯುವಂತೆ ಕಾಣುತ್ತದೆ. ಬ್ರೆಜಿಲ್‌ನ ಮೂರನೇ ಎರಡು-ಭಾಗ ಕೃಷಿ ಯೋಗ್ಯ ಜಮೀನು ಜನಸಂಖ್ಯೆಯ ಕೇವಲ ಶೇಕಡಾ 3 ಜನರ ಒಡೆತನದಲ್ಲಿದೆ. ಕೃಷಿಯೋಗ್ಯ ಜಮೀನಿನ ಶೇಕಡಾ 54 ಭಾಗ ಎರಡು-ಸಾವಿರ ಎಕ್ರೆ ಅಥವಾ ಇನ್ನೂ ಹೆಚ್ಚು ವಿಸ್ತಾರ ಇರುವ ಭಾರೀ ದೊಡ್ಡ ಕೃಷಿ -ಫಾರ್ಮುಗಳು. ಮೂರನೇ ಒಂದು ಭಾಗದಷ್ಟು ಹೊಲಗಳು 20 ಎಕ್ರೆ ಮತ್ತು ಕಡಿಮೆ ವಿಸ್ತಾರ ಇರುವವು. ಬ್ರೆಜಿಲ್‌ನ 17 ಕೋಟಿ ಜನಸಂಖ್ಯೆಯಲ್ಲಿ, ಎರಡೂವರೆ ಕೋಟಿ ಗ್ರಾಮೀಣ ಜನ (48 ಲಕ್ಷ ಕುಟುಂಬಗಳು) ಭೂರಹಿತ ಕೃಷಿ ಕೂಲಿಕಾರರು.

ಈ ಭೂ ಒಡೆತನದಲ್ಲಿ ಕೇಂದ್ರೀಕರಣದ ಒಂದು ಭಯಾನಕ ದುಷ್ಪರಿಣಾಮವೆಂದರೆ ಸುಮಾರು 72 ಕೋಟಿ ಎಕ್ರೆಯಷ್ಟು ಕೃಷಿ-ಯೋಗ್ಯ ಜಮೀನು ಖಾಲಿ ಬಿದ್ದಿದೆ. ಹೆಚ್ಚೆಂದರೆ ಜಾನುವಾರುಗಳಿಗೆ ಮೇಯುವ ಹುಲ್ಲುಗಾವಲುಗಳಾಗಿವೆ. ಇದು ಒಟ್ಟು ಕೃಷಿಯೋಗ್ಯ ಜಮಿನಿನ ಶೇಕಡಾ 60 ಭಾಗ ಎಂದಾಗ, ಸಮಸ್ಯೆಯ ಗಂಭೀರತೆ ತಿಳಿಯುತ್ತದೆ. ದೊಡ್ಡ ಫಾರ್ಮುಗಳಲ್ಲಿ (ಅದರಲ್ಲಿ ಮುಖ್ಯವಾಗಿ ರಫ್ತುಗಾಗಿ ಉತ್ಪಾದನೆ ಮಾಡುವ ಹಾಗೂ ಭೂಮಿಯ ವ್ಯಾಪಾರಕ್ಕಾಗಿಯೇ ಇರುವವು) ಈ ಥರ ಖಾಲಿ ಬಿಟ್ಟ ಭೂಮಿಯ ಶೇಕಡಾವಾರು ಇನ್ನೂ ಹೆಚ್ಚು - ಶೇಕಡಾ 88!

ಭೂ-ಒಡೆತನವನ್ನು ವಿಪರೀತ ಕೇಂದ್ರೀಕರಣ ಮತ್ತು ಖಾಲಿ ಬಿದ್ದ ಕೃಷಿ ಯೋಗ್ಯ ಜಮೀನುಗಳ ಅವಳಿ ಸಮಸ್ಯೆ ಬ್ರೆಜಿಲ್‌ನ ಒಡೆತನದ ಹಸಿವು ಮತ್ತು ಆರೋಗ್ಯಕರ ಆಹಾರದ ಅಭಾವದ ಮಹಾಮಾರಿಗೆ ಕಾರಣವಾಗಿದೆ.

ಬ್ರೆಜಿಲ್‌ನ್ನು ಕಾಡುತ್ತಿರುವ ಈ ಭೀಕರ ಸಮಸ್ಯೆಗೆ ನೇರ ಕಾರ್ಯಾಚರಣೆ ಮತ್ತು ಸ್ವಾವಲಂಬನೆ ಆಧಾರಿತ ಪರಿಹಾರ ಕಂಡುಕೊಂಡದ್ದು-ಎಮ್.ಎಸ್.ಟಿ ಯನ್ನು ಅತ್ಯಂತ ಸಫಲ ಮತ್ತು ದೊಡ್ಡ ಚಳುವಳಿಯನ್ನಾಗಿಸಿದೆ. ಸಹಕಾರಿ ಪದ್ಧತಿಯಲ್ಲಿ ವ್ಯವಸಾಯ ಮಾಡುವುದು - ಎಮ್.ಎಸ್.ಟಿ ಕಂಡುಕೊಂಡ ಪರಿಹಾರ.

1985ರಲ್ಲಿ ದಕ್ಷಿಣದ ಪ್ರಾಂತ್ಯ ರಿಯೋ ಗ್ರಾಂಡ್ ಡೊ ಸುಲ್‌ನಲ್ಲಿ ಆರಂಭವಾದ ಈ ಧೈರ್ಯಶಾಲಿ ಭೂಗ್ರಹಣ ಚಳುವಳಿಗಳು ಈಗ ಸಾವಿರಾರು ಬಾರಿ ಪುನರಾವರ್ತನೆಯಾಗಿದೆ.

ಎಮ್.ಎಸ್.ಟಿಯ ನೇರ ಕಾರ್ಯಾಚರಣೆಯ ಕಾರ್ಯಕ್ರಮ ಬಹಳ ಸರಳ ಸುಮಾರು 300-400 ರಷ್ಟು ಭೂರಹಿತ ಕುಟುಂಬಗಳನ್ನು ಗುರುತಿಸಿ ಅವರನ್ನು ಕಾರ್ಯಾಚರಣೆಗೆ ತಯಾರು ಮಾಡುವುದು. ಆ ಪ್ರದೇಶದಲ್ಲಿ ಖಾಲಿ ಬಿದ್ದಿರುವ ಭಾರೀ ಫಾರ್ಮುಗಳನ್ನು ಗುರುತಿಸುವುದು, ಒಂದು ದಿನ ಬೆಳಗು ಕೃಷಿ-ಉಪಕರಣಗಳು, ಟೆಂಟುಗಳನ್ನು ತೆಗೆದುಕೊಂಡು ಹೋಗಿ ಅಲ್ಲಿ ಒಂದು ಕಾಲೋನಿ ಸ್ಥಾಪಿಸುವುದು. ಸಹಕಾರಿ ರೂಪದಲ್ಲಿ ಕೃಷಿಯಲ್ಲಿ ತೊಡಗುವುದು. ಆ ಕಾಲೋನಿ ಹಾಗೂ ಹೊಲದ ಒಡೆತನವನ್ನು ಕಾನೂನುಬದ್ಧವಾಗಿ ಕೊಡಲು ಒತ್ತಾಯಿಸುವುದು. ಅದಕ್ಕಾಗಿ ಪ್ರಚಾರ-ಪ್ರಕ್ಷೋಭೆ ನಡೆಸುವುದು. ಈ ಸರಳ ನೇರ ಕಾರ್ಯಾಚರಣೆಯ ಕಾರ್ಯಕ್ರಮ ಹೆಚ್ಚು ಕಡಿಮೆ ಎಲ್ಲಾ ಇಂತಹ ಪ್ರಯತ್ನಗಳಲ್ಲಿ ಸಫಲವಾಗಿದೆ ಎಂದರೆ ಯಾರಿಗಾದರೂ ಆಶ್ಚರ್ಯವಾಗುವಂಥಹುದೇ.

1988ರವರೆಗೆ ಬ್ರೆಜೀಲ್‌ನಲ್ಲಿ ಇದ್ದ ಸರ್ವಾಧಿಕಾರವನ್ನು ಸೋಲಿಸಿದ ಮೇಲೆ ರಚಿತವಾದ ಸಂವಿಧಾನ ಭೂಮಿ ಇಡೀ ಸಮಾಜದ ಒಳಿತಿಗಾಗಿ ಇರಬೇಕು ಎನ್ನುತ್ತದೆ. ಭೂಮಿಯ ಹಂಚಿಕೆಗೆ ಆಧಾರವನ್ನು ಒದಗಿಸುತ್ತದೆ ಆದರೆ ಭೂಮಿ ಪಡೆಯಲು ವರ್ಷಗಳೇ ಕಾಯಬೇಕಾಗಬಹುದು. ಎಮ್.ಎಸ್.ಟಿ ಭೂಗ್ರಹಣ ಚಳುವಳಿಯಲ್ಲಿ ಭಾಗವಹಿಸಿದ ಸುಮಾರು 70 ಸಾವಿರ ಕುಟುಂಬಗಳು (ಒಟ್ಟು ಭೂಗ್ರಹಣ ಮಾಡಿದ ಕುಟುಂಬಗಳ ಸುಮಾರು ಮೂರನೇ ಒಂದು ಭಾಗ) ಇನ್ನೂ ಕಾನೂನುಭದ್ದ ಪಟ್ಟಾಕ್ಕೆ ವರ್ಷಗಳಿಂದ ಕಾಯುತ್ತಿದ್ದಾರೆ.

ಶಿಕ್ಷಣ ಆರೋಗ್ಯ ಸೇವೆಯಲ್ಲಿ ಸ್ವಾವಲಂಬನೆ

ಭೂರಹಿತ ಕುಟುಂಬಗಳಿಗೆ ಭೂಮಿ ಮತ್ತು ಅದರ ಮೇಲಿನ ಪಟ್ಟಾ ಒದಗಿಸಿದ ಕೂಡಲೇ ಎಮ್.ಎಸ್.ಟಿ ಕೆಲಸ ಮುಗಿಯಿತು ಎಂದಲ್ಲ. ಅದೇ ಎಮ್.ಎಸ್.ಟಿ ಯ ವಿಶಿಷ್ಟತೆಗಳಲ್ಲೊಂದು. ಇಂತಹ ಭೂರಹಿತ ಕುಟುಂಬಗಳಿಗೆ ಕೊಡಲು ಮನಸ್ಸಿಲ್ಲದ, ಮನಸ್ಸಿದ್ದರೂ ಕೊಡುವ ಕಾಳಜಿ ವಹಿಸದ ಬ್ರೆಜಿಲ್ ಸರ್ಕಾರದ ಬದಲು, ಎಲ್ಲಾ ಸಾಮಾಜಿಕ ಸೇವೆಗಳನ್ನು ಎಮ್.ಎಸ್.ಟಿ ಒದಗಿಸುವ ವ್ಯವಸ್ಥೆ ಮಾಡುತ್ತದೆ. ಎಮ್.ಎಸ್.ಟಿಯ 1600 ಕಾಲೋನಿಗಳಲ್ಲಿ (ಇವು ಬ್ರೆಜಿಲ್‌ನ 23 ರಾಜ್ಯಗಳಲ್ಲಿ ಹಂಚಿಹೋಗಿವೆ) ಪ್ರಾಥಮಿಕ ಆರೋಗ್ಯ ಸೇವೆ ಮಾತ್ರವಲ್ಲ, ಆರೋಗ್ಯ ಸೇವಾ ಕಾರ್ಯಕರ್ತರ ತರಬೇತಿ ಕೇಂದ್ರಗಳನ್ನು ನಡೆಸುತ್ತಿದೆ. ಎಮ್.ಎಸ್.ಟಿ ಸಂಘಟಿಸಿರುವ ಶೈಕ್ಷಣಿಕ ಸೇವೆ ಸಹ ಅಗಾಧ. ಒಂದುವರೆ ಲಕ್ಷ ಮಕ್ಕಳಿಗೆ ಒಂದೇ ಬಾರಿಗೆ ಶಿಕ್ಷಣ ಕೊಡಲಿಲ್ಲ, 3800 ಶಿಕ್ಷಕರುಳ್ಳ 1200 ಶಾಲೆಗಳನ್ನು ಎಮ್.ಎಸ್.ಟಿ ನಡೆಸುತ್ತಿದೆ. 25 ಸಾವಿರ ಜನರಿಗೆ ವಯಸ್ಕರ-ಶಿಕ್ಷಣ, ಶಿಕ್ಷಕರ ತರಬೇತಿ ಕೇಂದ್ರ ಮತ್ತು ತಾಂತ್ರಿಕ ಶಿಕ್ಷಣವನ್ನೂ ಎಮ್.ಎಸ್.ಟಿ ಒದಗಿಸಿದೆ. ದಕ್ಷಿಣ ಪ್ರಾಂತ್ಯ ಒಂದರ ವೆರಾನೊಪೊಲಿಸ್ ಎಂಬ ಪಟ್ಟಣದಲ್ಲಿ ಕಾಲೆಜೊಂದನ್ನು ಸ್ಥಾಪಿಸಲಾಗಿದೆ. ಇತರ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ಪಡೆಯಲು ಬಯಸುವ ಎಮ್.ಎಸ್.ಟಿ ಕಾಲೇಜುವಾಸಿಗಳಿಗೆ ಸ್ಕಾಲರ್‌ಶಿಪ್‌ಗಳನ್ನು ಒದಗಿಸುವ ವ್ಯವಸ್ಥೆ ಇದೆ.

ಇದಕ್ಕೆಲ್ಲ ಹಣ ಎಲ್ಲಿಂದ ಬರುತ್ತದೆ ಎಂದು ಆಶ್ಚರ್ಯವಾಗಬಹುದು. ಎಮ್.ಎಸ್.ಟಿ ತನ್ನ ಸಾವಿರಕ್ಕೂ ಹೆಚ್ಚು ಕೃಷಿ ಸಹಕಾರಿಗಳ ಎಲ್ಲಾ ಆರ್ಥಿಕ ಚಟುವಟಿಕೆಗಳನ್ನು (ಉತ್ಪಾದನೆ, ಮಾರಾಟ ಇತ್ಯಾದಿ) ಸಂಯೋಜಿತ ಬರುವ ಆದಾಯದಲ್ಲೇ ಎಲ್ಲವನ್ನೂ ನಡೆಸುತ್ತಿದೆ. ಈ ಕೃಷಿ- ಸಹಕಾರಿಗಳು ಸಾವಿರಾರು ಜನರಿಗೆ ಉದ್ಯೋಗ ಸಹ ಒದಗಿಸಿವೆ. ಎಮ್.ಎಸ್.ಟಿಯ ವಾರ್ಷಿಕ ವಹಿವಾಟು ಸುಮಾರು 5 ಕೋಟಿ ಡಾಲರುಗಳು. ಇದರಲ್ಲಿ ಬಹುಭಾಗ ಸದಸ್ಯರಿಗೆ ಆದಾಯವಾಗಿ ಹೋಗುತ್ತದೆ. ಸುಮಾರು 2 ಕೋಟಿ ಡಾಲರುಗಳಷ್ಟು ಹಣವನ್ನು ಸಾಮಾಜಿಕ ಸೇವೆ ಮತ್ತು 250 ಮೂಲಭೂತ ಅವಶ್ಯಕತೆಗಳಿಗೆ ಎಮ್.ಎಸ್.ಟಿ ಖರ್ಚು ಮಾಡುತ್ತದೆ.

ಎಮ್.ಎಸ್.ಟಿ ಮೇಲೆ ದಾಳಿ

ಎಮ್.ಎಸ್.ಟಿ ಇಷ್ಟೆಲ್ಲ ಜನಪರ ಕೆಲಸ ಮಾಡುತ್ತಿರುವಾಗ ಬ್ರೆಜಿಲ್‌ನ ಆಳುವವರು, ಶ್ರೀಮಂತರು ಕೈಕಟ್ಟಿ ಕುಳಿತಿದ್ದಾರೆ ಎಂದು ಕೊಂಡಿರಾ? ಇಲ್ಲ ಎಮ್.ಎಸ್.ಟಿ ಯ ಕಾಲೋನಿಗಳು, ಸದಸ್ಯರೂ ಕಾರ್ಯಕರ್ತರು, ನಾಯಕರು ದಿನಾ ಬ್ರೆಜಿಲ್‌ನ ಮಿಲಿಟರಿ ಪೋಲೀಸ್ ಭೂಮಾಲಿಕರ ಖಾಸಗಿ ಸೈನ್ಯಗಳಿಂದ ದಾಳಿ ಎದುರಿಸುತ್ತಿವೆ. 1988 ರಿಂದೀಚೆಗೆ 1517 ಎಮ್.ಎಸ್.ಟಿ ಕಾರ್ಯಕರ್ತರು, ನಾಯಕರು ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ- ಇಂತಹ ದಾಳಿಗಳಲ್ಲಿ ನೂರಾರು ಜನ ಗಾಯಗೊಂಡಿದ್ದಾರೆ.

1989ರಲ್ಲಿ ಎಮ್.ಎಸ್.ಟಿ ಕಾರ್ಯಕರ್ತರಿಗೂ, ಭೂಮಾಲಿಕರಿಗೂ ನಡೆದ ಒಂದು ಘರ್ಷಣೆಯಲ್ಲಿ ಭೂಮಾಲಿಕ ಮತ್ತು ಆತನ ಅಂಗರಕ್ಷಕ ಸತ್ತ. ಇದನ್ನು ಕೊಲೆ ಆಪಾದನೆಯಾಗಿ ಎಮ್.ಎಸ್.ಟಿ ಯ ಪ್ರಮುಖ ನಾಯಕರಲ್ಲೊಬ್ಬನಾದ ಜೋನ್ ರೈನ್‌ಹಾ ಮೇಲೆ ಹಾಕಲಾಯಿತು. ವರ್ಷಗಳ ಕಾಲ ಕೇಸು ನಡೆದು 1997ರಲ್ಲಿ ಆತನಿಗೆ ಕೋರ್ಟು ಶಿಕ್ಷೆ ವಿಧಿಸಿತು. ಭಾರಿ ಪ್ರತಿಭಟನೆ, ಕೋರ್ಟು ಹೋರಾಟಗಳ ನಂತರ ಏಪ್ರಿಲ್ 2000ದಲ್ಲಿ ಆತನನ್ನು ಬಿಡುಗಡೆ ಮಾಡಲಾಯಿತು. ಎಮ್.ಎಸ್.ಟಿ ಬ್ರೆಜಿಲ್‌ನ ಭೂಮಾಲಿಕರನ್ನು ಮಾತ್ರವಲ್ಲ, ಐ.ಎಮ್.ಎಫ್ ವಿಶ್ವಬ್ಯಾಂಕ್‌ನ ತಾಳಕ್ಕೆ ಕುಣಿಯುತ್ತಿರುವ ಕೇಂದ್ರ ಸರ್ಕಾರ ಮತ್ತು ದೈತ್ಯ ಬಹುರಾಷ್ಟ್ರೀಯ ಕಂಪನಿಗಳನ್ನೂ ಧೈರ್ಯದಿಂದ ಎದುರಿಸುತ್ತಿದೆ. ಅಧ್ಯಕ್ಷ ಕಾರ್ಡೋಸೋರ ಕಳೆದ ಆರು ವರುಷಗಳ ಆಡಳಿತದಲ್ಲಿ 5 ಲಕ್ಷ ಕುಟುಂಬಗಳು ತಮ್ಮ ಚಿಕ್ಕ ಹೊಲಗಳನ್ನು ಕಳೆದುಕೊಂಡಿವೆ. ವಿದೇಶಗಳಿಗೆ ಆಹಾರ ರಫ್ತು ಮಾಡುವ ದೊಡ್ಡ ಫಾರ್ಮುಗಳಿಗೆ ಅನುಕೂಲವಾದ ಸರ್ಕಾರದ ನೀತಿಗಳಿಂದ ಗ್ರಾಮೀಣ ಜನರಲ್ಲಿ ಬಡತನ ಹೆಚ್ಚಿದೆ. 1995-99ರ ನಾಲ್ಕು ವರ್ಷಗಳಲ್ಲಿ ಸುಮಾರು ನಲ್ವತ್ತು ಲಕ್ಷ ಗ್ರಾಮೀಣ ಬಡವರು ದಿವಾಳಿ ಎದ್ದು, ನಗರಗಳಿಗೆ ವಲಸೆ ಹೋಗಿದ್ದಾರೆ. ಎಮ್.ಎಸ್.ಟಿಯ ಭೂಗ್ರಹಣ ಚಳುವಳಿಯನ್ನು ನಿಯಂತ್ರಿಸಲು ಸರ್ಕಾರ-ವಿಶ್ವಬ್ಯಾಂಕ್ ಜಂಟಿಯಾಗಿ ರೂಪಿಸಿದ ಭೂಸುಧಾರಣೆಯ ಖಾಸಗೀಕರಣದ ನೀತಿಯನ್ನು

ಪುಟ 8 ಕ್ಕೆ

ಮಾಧ್ಯಮ ಮಂಥನ

ಕಾರ್ಮಿಕ ವಿರೋಧಿ ಶಿಫಾರಸು ಜಾರಿಗೆ ಪತ್ರಿಕಾ ಮಾಲೀಕರ ಕಾತರ.....

ಹೌದು.... ಹೌದು ವೃತ್ತ ಪತ್ರಿಕೆ ಕೈಗಾರಿಕೆಯಲ್ಲಿ ವೇತನ ಮಂಡಳಿ ರಚಿಸಬಾರದು ಎಂಬ ಶಿಫಾರಸಿನ ಜಾರಿಗೆ ಸರಕಾರ ಶೀಘ್ರವೇ ಕ್ರಮ ಕೈಗೊಳ್ಳಬೇಕು....

ಬೆಂಗಳೂರಿನಲ್ಲಿ ಸೆಪ್ಟೆಂಬರ್ 27ರಂದು ನಡೆದ ಐಎನ್‌ಎಸ್ ಸಭೆಯಲ್ಲಿ ಅದರ ಅಧ್ಯಕ್ಷರು ಮಾಡಿದ ಒತ್ತಾಯ. ಐಎನ್‌ಎಸ್ ಅಂದರೆ ದಿ ಇಂಡಿಯನ್ ನ್ಯೂಸ್‌ಪೇಪರ್ ಸೊಸೈಟಿ. ಇದು ಭಾರತದ ಬಹುತೇಕ ದೊಡ್ಡ ಪತ್ರಿಕೆಗಳ ಮಾಲೀಕರ ಸಂಘವಾಗಿದೆ.

ಅಂದರೆ ಅಧ್ಯಕ್ಷರು ಮಾಡಿದ ಒತ್ತಾಯ ಸಹಜವಾಗಿಯೇ ಇದೆ!

ವೃತ್ತ ಪತ್ರಿಕೆ ಕೈಗಾರಿಕೆಗೆ ವೇತನ ಮಂಡಳಿಗಳನ್ನು ರಚಿಸಬಾರದು ಎಂದು ರವೀಂದ್ರ ವರ್ಮಾ ಅಧ್ಯಕ್ಷತೆಯ ಎರಡನೇ ರಾಷ್ಟ್ರೀಯ ಕಾರ್ಮಿಕ ಆಯೋಗ ತನ್ನ ಶಿಫಾರಸುಗಳಲ್ಲಿ ತಿಳಿಸಿತ್ತು. ಆಯೋಗದ ವರದಿ ಆಗಲೇ ಸರಕಾರದ ಕೈಸೇರಿದೆ. ಇದು ಹೆಸರಿಗೆ ತಾಂತ್ರಿಕವಾಗಿ ಕಾರ್ಮಿಕ ಪರ ಎಂದಾದರೂ ಅದರ ವರದಿಯಲ್ಲಿ ತುಂಬಿರುವುದೆಲ್ಲ ಕಾರ್ಮಿಕ ವಿರೋಧಿ ಶಿಫಾರಸುಗಳೇ ಆಗಿವೆ. ಬಂಡವಾಳಶಾಹಿ-ಮಾಲಿಕವರ ಧೋರಣೆಯೇ ಅದರಲ್ಲಿ ತುಂಬಿ ತುಳುಕುತ್ತಿದೆ.

ಮುದ್ರಣ ಮಾಧ್ಯಮ, ಅಂದರೆ ವೃತ್ತಪತ್ರಿಕೆಗಳ ನೌಕರರು ಹಾಗೂ ಪತ್ರಕರ್ತರಿಗೆ ವೇತನ ನಿಗದಿಪಡಿಸಲು ವೇತನ ಮಂಡಳಿ ರಚಿಸುವ ಅಗತ್ಯವಿಲ್ಲ ಎಂಬುದು ಆಯೋಗದ ಪ್ರತಿಗಾಮಿ ಶಿಫಾರಸುಗಳಲ್ಲಿ ಒಂದಾಗಿದೆ. ಅದನ್ನು, ಪತ್ರಿಕೆಗಳ ಮಾಲೀಕರ ಸಂಘ ಸಹಜವಾಗಿಯೇ 'ಹೃತ್ಪೂರ್ವಕವಾಗಿ ಸ್ವಾಗತಿಸಿದೆ!

ವಾಸ್ತವವಾಗಿ ಇಂಥ ಒಂದು ವೇತನ ಮಂಡಳಿ ಇದ್ದಿದ್ದರಿಂದಲೇ ಕನಿಷ್ಠಪಕ್ಷ ದೊಡ್ಡ ಪತ್ರಿಕೆಗಳಲ್ಲಿ ಕೆಲಸ ಮಾಡುವ ಉದ್ಯೋಗಿಗಳು ಹಾಗೂ ಪತ್ರಕರ್ತರು ಸ್ವಲ್ಪ ಮಟ್ಟಿಗೆ ನ್ಯಾಯಸಮ್ಮತ ವೇತನ ಪಡೆಯುವುದು ಸಾಧ್ಯವಾಗಿದೆ. ಈ ವೇತನ ಮಂಡಳಿಗಳ ಶಿಫಾರಸುಗಳನ್ನು ಜಾರಿ ಮಾಡದಿರುವ ಮತ್ತು ಅನುಷ್ಠಾನ ಮಾಡುವಾಗ ಮೋಸ-ವಂಚನೆ ಮಾಡಿ ನೌಕರರಿಗೆ ಕಾನೂನು ಬದ್ಧವಾಗಿ ಸಿಗಬೇಕಾದ ವೇತನ ಭತ್ಯೆಗಳನ್ನು ನುಂಗಿ ಹಾಕುವ ದೊಡ್ಡ ಪತ್ರಿಕೆಗಳೂ ಇವೆ ಎನ್ನುವುದು ಈ ಕ್ಷೇತ್ರದಲ್ಲಿ ಇರುವವರ ಅನುಭವವಾಗಿದೆ.

ಇಂಥ ಸನ್ನಿವೇಶದಲ್ಲಿ ವೇತನ ಮಂಡಳಿಯೇ ಇಲ್ಲ ಎಂದಾದರೆ ಬೇರೆ ಹಲವು ರಂಗಗಳಲ್ಲಿ ಆದಂತೆ ಪತ್ರಿಕಾ ಕ್ಷೇತ್ರದಲ್ಲಿ ಕೂಡ ಶೋಷಣೆ ಎಗ್ಗಿಲ್ಲದಂತೆ ಸಾಗಲು ಹಾದಿಯಾಗುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ.

ವಿಶ್ವಾಮಿತ್ರ

ನೌಕರರು ಮತ್ತು ಪತ್ರಿಕೆಗಳ ಮಾಲೀಕರು ಸಮಾಲೋಚಿಸಿ ಸಂಬಳ-ಭತ್ಯೆಗಳನ್ನು ನಿಗದಿಪಡಿಸಬಹುದು ಎಂಬುದು ಐಎನ್‌ಎಸ್ ನಿಲುವು. ಆದರೆ ಆಗಲೇ ಹೇಳಿರುವಂತೆ ವೇತನ ಮಂಡಳಿಯೆಂಬ ಕಾನೂನಿನ ರಕ್ಷಣೆಯಿದ್ದಾಗ್ಯೂ ವಂಚಿಸುವ ಮಾಲೀಕರು ಇರುವಾಗ ಮಂಡಳಿ ಇಲ್ಲದೆ ಸೂಕ್ತ ಸೌಲಭ್ಯಗಳು ಸಿಗುತ್ತವೆ ಎನ್ನುವುದು ಕನಸಿನ ಮಾತೇ ಸರಿ. ಸುಮಾರು ಒಂದು ದಶಕದ ಹಿಂದೆ ರಚಿತವಾದ ನ್ಯಾಯಮೂರ್ತಿ ಮುನಿಸೇನ ಸಿಂಗ್ ವೇತನ ಮಂಡಳಿಯ ಅಂತಿಮ ಶಿಫಾರಸು ಕೆಲವು ಪತ್ರಿಕೆಗಳಲ್ಲಿ ಇನ್ನೂ ಸರಿಯಾಗಿ ಜಾರಿಯಾಗಿಲ್ಲ ಎನ್ನುವುದು ಗಮನಾರ್ಹ.

ಜಾಹೀರಾತು ಆದಾಯ

ಕಳೆದ ವರ್ಷ ಐಎನ್‌ಎಸ್ ಸದಸ್ಯರ ಜಾಹೀರಾತು ಆದಾಯ 4419 ಕೋಟಿ ರೂಪಾಯಿಗಳಿಂದ 3768 ಕೋಟಿ ರೂಪಾಯಿಗ[ಳಿಗೆ] ಇಳಿದಿದೆ ಎನ್ನುವುದು ಐಎನ್‌ಎಸ್ ಅಳಲು. ಆದರೆ ಪತ್ರಿಕೆ ಮಾರಾಟದಿಂದ ಗಳಿಸಿದ ಆದಾಯ-ಲಾ[ಭ] ಎಷ್ಟೆಂಬುದನ್ನು ಅವರು ಹೇಳಿಲ್ಲ. ಅಥವಾ ಹೇಳಿದ್ದರೂ ವರದಿ ಆಗಿಲ್ಲವೋ ಏನೋ ಗೊತ್ತಿಲ್ಲ.

ಒಟ್ಟಿನಲ್ಲಿ ವೃತ್ತಪತ್ರಿಕೆಗಳ ಮಾಲೀಕರು ಎಲ್ಲರೂ ಅಲ್ಲವಾದರೂ ಕೆಲವರಂತೂ ಇದ್ದಾರೆ. ತಮ್ಮ ಅನುಕೂಲಕ್ಕೆ ತಕ್ಕಂತೆ ಸಂಬ್ಳ ನೀಡುತ್ತಾ ಕಾರ್ಮಿಕರನ್ನು, ಪತ್ರಕರ್ತರನ್ನು ಶೋಷಣೆ ಮಾಡುವ ಪ್ರವೃತ್ತಿ ಕಾಣುತ್ತಿದ್ದು ಕಾರ್ಮಿಕ ಆಯೋಗದ ಶಿಫಾರಸು ಶೋಷಣೆಯ ಕಬಂಧಬಾಹುವನ್ನು ಇನ್ನಷ್ಟು ವಿಸ್ತರಿಸಲು ಅನುಕೂಲ ಮಾಡಿಕೊಟ್ಟಿದೆ.

ಪ್ರಜಾಪ್ರಭುತ್ವದ ಬಗ್ಗೆ, ಶೋಷಣೆಯ ವಿರುದ್ಧ ಲೇಖನ- ವರದಿಗಳನ್ನು ಪ್ರಕಟಿಸುವ ಮಾಲೀಕರೇ ತದ್ವಿರುದ್ಧವಾಗಿ ನಡೆದುಕೊಳ್ಳುವ ಹಾಗೂ ಇಂಥ ಲೇಖನ ವರದಿಗಳನ್ನು ಸಿದ್ಧಪಡಿಸುವ ಪತ್ರಕರ್ತರೇ ಶೋಷಣೆಗೆ ಒಳಗಾಗುವ ವೈರುದ್ಯಪೂರ್ಣ ಸನ್ನಿವೇಶ ನಮ್ಮಲ್ಲಿದೆ. ಜತೆಯಲ್ಲೆ ಅನ್ಯಾಯ-ಶೋಷಣೆಯ ವಿರುದ್ಧ ಸಿಡಿದೇಳುವ ಪ್ರವೃತ್ತಿಯ ಕೊರತೆಯೂ ವೃತ್ತಪತ್ರಿಕಾ ನೌಕರ ಪತ್ರಕರ್ತರ ವಲಯದಲ್ಲಿ ಎದ್ದು ಕಾಣುತ್ತದೆ.

'ಏಕ್ ಛೋಟಿಸಿ ಲವ್ ಸ್ಟೋರಿ' ಒಂದು ಮೋಸದ ಪ್ರಕರಣ



'ಏಕ್ ಛೋಟೀಸಿ ಲವ್ ಸ್ಟೋರಿ' - ಮೋನಿಷಾ ಕೊಯಿರಾಲ ನಟಿಸಿದ ಈ ಚಿತ್ರದ ಒಂದು ದೃಶ್ಯಕ್ಕೆ ಅವರೇ ಆಕ್ಷೇಪ ಎತ್ತಿದ ಹಿನ್ನೆಲೆಯಲ್ಲಿ ಸಾಕಷ್ಟುವಾದ ವಿವಾದಗಳೆದ್ದಿವೆ. ಒಂದು ನಿರ್ದಿಷ್ಟ ಸನ್ನಿವೇಶವನ್ನು ಚಿತ್ರಿಸಿಕೊಳ್ಳಲು ಬದಲಿ ನಟಿಯನ್ನು ಬಳಸಲಾಗಿದೆ. ಆ ದೃಶ್ಯ ಅತ್ಯಂತ ಆಕ್ಷೇಪಾರ್ಹವಾದುದಾಗಿದ್ದು ಅದಕ್ಕೆ ತಾನು ಪೂರ್ವಾನುಮತಿ ನೀಡಿರಲಿಲ್ಲವಾದ್ದರಿಂದ ಆ ದೃಶ್ಯವನ್ನು ಪ್ರದರ್ಶಿಸಬಾರದೆಂದು ಮೋನಿಷಾರ ವಾದ. ಈ ವಾದಕ್ಕೆ ಬಂಬಲಿಸುವಂತೆ, ಆ ಚಿತ್ರಪ್ರದರ್ಶನವನ್ನು ತಡೆಹಿಡಿಯುವಂತೆ ಶಿವಸೇವೆಯಿಂದ ಹಿಡಿದು ರಾಷ್ಟ್ರೀಯ ಮಹಿಳಾ ಆಯೋಗದವರೆಗೂ ಮೋನಿಷಾ ಮೊರೆ ಹೋಗಿದ್ದಾರೆ.

ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಮಹಿಳಾ ಆಯೋಗ ಮಹಿಳಾ ಸಂಘಟನೆಗಳ ಸಭೆಯೊಂದನ್ನು ಕರೆದಿತ್ತು ಮತ್ತು "ಮಹಿಳೆಯರನ್ನು ಅಸಬ್ಯವಾಗಿ ತೋರಿಸುವುದರ ವಿರೋಧಿ ಕಾಯ್ದೆಗೆ ಕೆಲವು ಬದಲಾವಣೆಗಳನ್ನು ಶಿಫಾರಸ್ಸು ಮಾಡಿದ ಟಿಪ್ಪಣಿಯೊಂದನ್ನು ಹಂಚಲಾಯಿತು. ಮತ್ತು ಆಯೋಗಕ್ಕೆ ಮಹಿಳಾ ಸಂಘಟನೆಗಳ ಸಹಕಾರವನ್ನು ಕೋರಲಾಯಿತು. ಸಭೆಯಲ್ಲಿ ಪಾಲ್ಗೊಂಡ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಈ ಕೆಳಗಿನ ತನ್ನ ಸ್ಪಷ್ಟ ಅಭಿಪ್ರಾಯಗಳನ್ನು ಮಂಡಿಸಿದೆ.

ರಾಷ್ಟ್ರೀಯ ಮಹಿಳಾ ಆಯೋಗ ಮಹಿಳಾ ಸಂಘಟನೆಗಳ ಸಹಕಾರವನ್ನು ಕೋರಿದೆ. ಆದರೆ ಇತ್ತೀಚಿನ ಸಂದರ್ಭಗಳಲ್ಲಿ ಆಯೋಗ ಕೇಂದ್ರದ ಆಡಳಿತಾರೂಢ ಪಕ್ಷದ ಸಂಕುಚಿತ ರಾಜಕೀಯ ಕಾರ್ಯ ಸೂಚಿಯ ಜಾರಿ ಮಾಡುವ ಏಜೆನ್ಸಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ಇತ್ತೀಚಿನ ಗುಜರಾತ್ ಹತ್ಯಾಕಾಂಡದ ಸಂದರ್ಭದಲ್ಲಿ ಆಯೋಗ ತಾಳಿದ ಅವಮಾನಕಾರೀ ನಿಲುವಿನಿಂದ ಇದು ಸಾಬೀತಾಗಿದೆ. ಈ ಕಾರಣದಿಂದಾಗಿ ಆಯೋಗದ ವಿಶ್ವಾಸಾರ್ಹತೆ ಕುಗ್ಗಿದೆ. ರಾಷ್ಟ್ರೀಯ ಮಹಿಳಾ ಆಯೋಗ ಕಾನೂನಿನ ಪ್ರಕಾರ ಒಂದು ಸ್ವಾಯತ್ತ ಸಂಸ್ಥೆಯಾಗಿ ಕಾರ್ಯ ನಿರ್ವಹಿಸಬೇಕಾದ ಅಗತ್ಯವನ್ನೂ ಆಯೋಗ ಮನಗಾಣ ಬೇಕಿದೆ. ಆದರೆ ಆಯೋಗದ ಕಾರ್ಯನಿರ್ವಹಣೆ ಇದಕ್ಕೆ ವಿರುದ್ಧವಾಗಿ ಸಂಕುಚಿತ ರಾಜಕೀಯ ಕಾರ್ಯ ಸೂಚಿಯತ್ತ ವಾಲಿದರೆ ಅದರ ಸ್ವಾಯತ್ತ ಗುಣಲಕ್ಷಣಗಳನ್ನು ಸಂಪೂರ್ಣ ಬಿಟ್ಟು ಕೊಟ್ಟಂತಾಗುತ್ತದೆ. ಇಂತಹ ಸಂದರ್ಭವಿರುವಾಗ ಎ.ಐ.ಡಿ. ಡಬ್ಲ್ಯೂಎ ಯಂತಹ ಮಹಿಳಾ ಸಂಘಟನೆಗೆ ಆಯೋಗದ ಜೊತೆ ಯಾವುದೇ ರೀತಿಯ ಜಂಟಿ ಕಾರ್ಯಚರಣೆ ನಡೆಸುವುದು ಕಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ಇಂದಿನ ಸಂದರ್ಭ ತಕ್ಕುದಲ್ಲದಿದ್ದರೂ ಎ.ಐ.ಡಿ.ಡಬ್ಲ್ಯೂ.ಎ. ಆಯೋಗದ ಕಾರ್ಯ ವೈಖರಿಯ ಬಗ್ಗೆ ಸ್ಪಷ್ಟ ವಿರೋಧವನ್ನು ವ್ಯಕ್ತಪಡಿಸುತ್ತದೆ.


ಮೊನಿಷಾ ಕೋಯಿರಾಲದ ವಿಷಯಕ್ಕೆ ಸಂಬಂಧಿಸಿದಂತೆ ಎಐಡಿಡಬ್ಲ್ಯೂಎ ಯಾವುದೇ ನಟಿ / ನಟರ ಪರವಾವಗಿ ಇಲ್ಲದೇ ಆ ದೃಶ್ಯಗಳನ್ನು ಪ್ರದರ್ಶಿಸಿದರೆ ಅದು "ವಿಶ್ವಾಸ ದ್ರೋಹ ಮತ್ತು ಮೋಸದ ಪ್ರಕರಣ"ವಾಗಿ ಪರಿಗಣಿಸಲ್ಪಡಬೇಕೆಂದು ಅಭಿಪ್ರಾಯ ಪಟ್ಟಿದೆ.

ಆದರೆ ಇದೇ ಸಂದರ್ಭದಲ್ಲಿ ಈ ಪ್ರಕರಣವನ್ನು "ಮಹಿಳೆಯರನ್ನು ಅಸಭ್ಯವಾಗಿ ತೋರಿಸುವುದರ ವಿರೋಧಿ" ಕಾಯ್ದೆ ಉಲ್ಲಂಘನೆಗೆ ಉದಾಹರಣೆಯಾಗಿ ತೆಗೆದುಕೊಳ್ಳುವುದನ್ನು ಎ.ಐ.ಡಿ. ಡಬ್ಲ್ಯೂ.ಎ. ಬೆಂಬಲಿಸಿಲ್ಲ. ಆಯೋಗವು ಈ ಪ್ರಕರಣವನ್ನು "ವಿಶ್ವಾಸದ್ರೋಹ ಮತ್ತು ಮೋಸದ ಪ್ರಕರಣ"ವಾಗಿ ಬಿಂಬಿಸಬೇಕು.

ಮಹಿಳೆಯರನ್ನು ಅಸಭ್ಯವಾಗಿ ತೋರಿಸುವುದರ ವಿರೋದಿ ಕಾಯ್ದೆಗೆ ಸೂಚಿಸುವ ತಿದ್ದುಪಡಿ / ಶಿಫಾರಸುಗಳ ಕುರಿತು ಇನ್ನೂ ಹೆಚ್ಚಿನ ಚರ್ಚೆಗಳಾಗಬೇಕಿದೆ.

ಮೋನಿಷಾ ಕೋಯಿರಾಲ ಪ್ರಕರಣಕ್ಕೆ ಸಂಬಂಧಿಸಿದಂತೆ ಎ.ಐ.ಡಿ.ಡಬ್ಲ್ಯೂ.ಎ. [ನ] ನಿಲುವನ್ನು ಆಯೋಗ ಒಪ್ಪಿಕೊಂಡಿತಾದರೂ ಕಾಯ್ದೆ ತಿದ್ದುಪಡಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟಿಗೆ ಪ್ರಕರಣವನ್ನು ಒಯ್ಯಲು ತೀರ್ಮಾನಿಸಿದೆ.

ಇರಾಕ್ ಮೇಲಿನ ಯುದ್ಧ ವಿರೋಧಿಸಿ ಸೆಪ್ಟೆಂಬರ್ 28 ರಂದು ಲಂಡನ್‌ನಲ್ಲಿ ನಡೆದ ಜನತೆಯ ಮಹಾ ರ‍್ಯಾಲಿ. ಇದಲ್ಲಿ 4 ಲಕ್ಷ ಜನ ಭಾಗವಹಿಸಿ ಇತಿಹಾಸ ನಿರ್ಮಿಸಿದ್ದಾರೆ. ಇದು ಯುರೋಪ್‌ನಲ್ಲೇ ದಾಖಲೆಯ ರ‍್ಯಾಲಿ.



PRB DECR 319-79/79 AIKYARANGA WEEKLY
Reg. No. 17015/64 CPM(G)/KA/BGS-119/2002
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜು
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH